ಮಂಗಳೂರು ವಿಶ್ವವಿದ್ಯಾನಿಲಯ

"ಕರ್ನಾಟಕದಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳು: ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಒಂದು ತೌಲನಿಕ ಅಧ್ಯಯನ" (2010 ರಿಂದ 2018)

ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧನಾ ವಿದ್ಯಾರ್ಥಿ
ಧರ್ಮರಾಯ ಬಾಲಪ್ಪ ಹವಾಲ್ದಾರ್
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ–574199

ಮಾರ್ಗದರ್ಶಕರು
ಡಾ. ಶಹಬರ್ ಪಾಷ
ನಿವೃತ್ತ ಸಹ ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199

2025

ಪರಿವಿಡಿ

	ಪು.ಸಂ
1. ಪೀಠಿಕೆ	3–7
2. ಸಮಸ್ಯೆಯ ನೆಲೆ	7–10
3. ಅಧ್ಯಯನದ ಉದ್ದೇಶಗಳು	10
4. ಸಾಹಿತ್ಯಾವಲೋಕನ	11–20
5. ಸಂಶೋಧನಾ ಅಂತರ (ಗ್ಯಾಪ್)	20
6. ಪ್ರಾಕ್ ಕಲ್ಪನೆ	20
7. ಅಧ್ಯಯನದ ಪರಿಕಲ್ಪನೆಯ ಚೌಕಟ್ಟು	20–24
8. ಅಧ್ಯಯನದ ವ್ಯಾಪ್ತಿ ಮತ್ತು ಕ್ಷೇತ್ರ	24–26
9. ಅಧ್ಯಯನದ ವಿಧಾನ	26–28
10. ಅಧ್ಯಯನದ ಯೋಜನೆ	29–30
11. ಉಪಸಂಹಾರ: ಸಂಶೋಧನಾ ಫಲಿತಗಳು, ಸಲಹೆಗಳು ಹಾಗೂ ಶಿಫಾರಸ್ಸುಗಳು	30–45
12. ಆಧಾರ ಗ್ರಂಥಗಳು	46–57

1. ಪೀಠಿಕೆ

ಜಗತ್ತಿನಲ್ಲೆ ಭಾರತವು ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಬಹುಸಂಸ್ಕೃತಿಗಳು ನೆಲೆಗೊಂಡಿರುವ ಈ ದೇಶದಲ್ಲಿ ವಿವಿಧ ಜಾತಿ, ಮತ, ಧರ್ಮ, ಜನಾಂಗ, ಭಾಷೆ, ಕಲೆ, ಪ್ರಾದೇಶಿಕತೆಯನ್ನೊಳಗೊಂಡು ಒಂದು ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ರಾಷ್ಟ್ರವಾಗಿದೆ. ಪ್ರಜಾತಂತ್ರದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಅಂಶಗಳನ್ನು ಸಂವಿಧಾನಾತ್ಮಕವಾಗಿ ಈ ದೇಶದ ಎಲ್ಲಾ ನಾಗರೀಕರಿಗೆ ನೀಡಿದ್ದರೂ ಕೂಡ, ಸಾಮಾಜಿಕ ಸ್ತರವಿನ್ಯಾಸದಿಂದ ಕೂಡಿದ ದೇಶವಾಗಿದೆ. ಈ ಸ್ತರವಿನ್ಯಾಸದ ಅತ್ಯಂತ ಕೆಳಸ್ತರದಲ್ಲಿರುವ ಪ್ರಾಚೀನ ಬುಡಕಟ್ಟುಗಳಲ್ಲಿ ವಾಲ್ಮೀಕಿ ಬುಡಕಟ್ಟು ಸಮುದಾಯವೂ ಒಂದು. 'ಮಾನವನು' ಉಗಮದ ನಂತರದಲ್ಲಿ ಎಲ್ಲರೂ ಬೇಟೆಗಾರರೇ ಆಗಿದ್ದರು. ಆದಿಯಿಂದಲೂ ಬೇಡರು ಬೇಟೆಯನ್ನು ವೃತ್ತಿಯನ್ನಾಗಿಸಿಕೊಂಡು, ಧೈರ್ಯ, ಸ್ಥೈರ್ಯ, ಶೌರ್ಯ, ಸಾಹಸ ಪರಾಕ್ರಮಗಳಿಗೆ ಹೆಸರುವಾಸಿಯಾಗಿದ್ದಾರೆ. ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಜಾತಿ, ಸಮುದಾಯವು ತನ್ನದೇ ಆದ ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡಿರುತ್ತದೆ. ಈ ನಿಟ್ಟಿನಲ್ಲಿ ಆಲೋಚಿಸಿದಾಗ ಪ್ರತಿಯೊಂದು ಸಮುದಾಯಗಳ ಮೂಲ ನೆಲೆ ಹಾಗೂ ವಾಸಿಸುವ ಪ್ರದೇಶಗಳನ್ನಾಧರಿಸಿ ಅವು ಜಾತಿಗಳಾಗಿ ಪರಿವರ್ತನೆ ಹೊಂದಿದವು. ಭಾರತೀಯ ಸಮಾಜದಲ್ಲಿ ಆರ್ಯರು ಮತ್ತು ದ್ರಾವಿಡರು ಎಂಬ ಎರಡು ಪ್ರಮುಖ ಜಾತಿಗಳನ್ನು ಕಾಣಬಹುದು. ಇವುಗಳಲ್ಲಿ ಭಾರತ ದೇಶದ ಉತ್ತರದ ಭಾಗದಲ್ಲಿ ವಾಸಿಸುವವರು ಆರ್ಯರು ಮತ್ತು ದಕ್ಷಿಣದ ಭಾಗದಲ್ಲಿ ವಾಸಿಸುವವರನ್ನು ದ್ರಾವಿಡ ಜನಾಂಗದವರೆಂದು ಗುರುತಿಸಲಾಗಿದೆ. ಅದರಂತೆ ಮಾನವ ಜನಾಂಗಗಳಲ್ಲಿ ಬೇಡರು ಪ್ರೊಟೊ ಆಸ್ಟ್ರಲಾಯಿಡ್ ಜನಾಂಗಕ್ಕೆ ಸೇರಿದ್ದು, ಭಾರತದಲ್ಲಿ ಇವರು ಮೂಲ ದ್ರಾವಿಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಎಲ್.ಜಿ. ಹಾವನೂರು ಆಯೋಗದ ಪ್ರಕಾರ ಕರ್ನಾಟಕದಲ್ಲಿ ಇವರನ್ನು ದ್ರಾವಿಡರೆಂದು, ನಿಷಾದ, ಪುಳಿಂದ, ವ್ಯಾಧ, ಕಿರಾತ, ಶಬರ, ಬೇಡ, ನಾಯಕ, ವಾಲ್ಮೀಕಿ ತಳವಾರ ಮೊದಲಾದ ಹದಿನೆಂಟಕ್ಕೂ ಹೆಚ್ಚು ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ.[1] 'ಬೇಡ' ಅಂದರೆ ಯಾರಿಗೂ ಹೆದರದವನು. 'ನಾಯಕ' ಅಂದರೆ ಸಮಾಜಕ್ಕೆ, ರಾಜ್ಯಕ್ಕೆ ಮುಖಂಡನೆಂದು ಹೆಸರು. 'ವಾಲ್ಮೀಕಿ' ಪುರಾಣ ಪ್ರಸಿದ್ಧ ಋಷಿ ಮತ್ತು ಆದಿ ಕವಿ. 'ವಾಲ್ಮೀಕಿ'ಯ ಹೆಸರು ಒಂದು ಸಮುದಾಯಕ್ಕೆ ಮತ್ತು ಒಬ್ಬ ವ್ಯಕ್ತಿಗೆ ಇರುವುದು ಭವ್ಯ ಪರಂಪರೆಯ ಪ್ರತೀಕ. ಮಹರ್ಷಿ ವಾಲ್ಮೀಕಿ ಈ ದೇಶಕ್ಕೆ ನೀಡಿದ ಕೊಡುಗೆ ಅಪಾರ. ವಾಲ್ಮೀಕಿ ಮೂಲತಃ ಬೇಟೆಗಾರರ ಬುಡಕಟ್ಟಿಗೆ ಸೇರಿದ ಬೇಡ ಸಮುದಾಯದವನು. ಹಾಗಾಗಿ ಈ ಸಮುದಾಯಕ್ಕೆ ವಾಲ್ಮೀಕಿ ಸಮುದಾಯವೆಂದು ಕರೆಯುವುದು ಜನಪ್ರಿಯಾವಾಗಿದೆ. ಕುಲವೊಂದೇ ನಾಮ ಹಲವು ವೃಕ್ಷವೊಂದೇ

[1] ಡಾ. ಪೂಜಾರಹಳ್ಳಿ ವಿರೂಪಾಕ್ಷಿ, "ಬೇಟೆ ಮತ್ತು ಬೇಡರು" ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಚಾರಿತ್ರಿಕ ಅಧ್ಯಯನ, ಪ್ರಕಾಶನ ಚೆನ್ನಹಗರಿ, ಪೂಜಾರಹಳ್ಳಿ, ಪ್ರಥಮ ಮುದ್ರಣ–2007, ಪು.ಸಂ.–109.

ಕೊಂಬೆಗಳು ನೂರಾರು ಎನ್ನುಂತೆ ಈ ವಾಲ್ಮೀಕಿ ಸಮುದಾಯ ಭಾರತದ ಉದ್ದಗಲಕ್ಕೂ ಹರಡಿದೆ. ವಿಶೇಷವಾಗಿ ಕರ್ನಾಟಕದಲ್ಲಿ ಬಳ್ಳಾರಿ, ಬೆಳಗಾವಿ, ಧಾರವಾಡ, ಗುಲಬರ್ಗಾ, ದಾವಣಗೆರೆ, ತುಮಕೂರು, ಕೊಪ್ಪಳ, ಮೈಸೂರು, ಯಾದಗಿರಿ (ಸುರಪುರ), ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತೀ ಹೆಚ್ಚಿನ ಜನಸಂಖ್ಯೆಯಲ್ಲಿದ್ದಾರೆ[2].

ಪರಿಶಿಷ್ಟ ಪಂಗಡಗಳ (ವಾಲ್ಮೀಕಿ) ಕಲ್ಯಾಣಕ್ಕಾಗಿ ಭಾರತದಲ್ಲಿ ಸ್ವತಂತ್ರ ಪೂರ್ವ ಹಾಗೂ ನಂತರದಲ್ಲಿ ಅನೇಕ ಸಂವಿಧಾನ ಅವಕಾಶವನ್ನು ನೀಡಿದ್ದು ಅವರ ಸುಧಾರಣೆಗಾಗಿ ಶಿಫಾರಸ್ಸು ಮಾಡಲು ಅನೇಕ ಆಯೋಗಗಳನ್ನು ನೇಮಕ ಮಾಡಲಾಗಿದೆ. ಅವುಗಳಲ್ಲೂ 1918ರಲ್ಲಿ ಸರ್ ವೆಲ್ಲಸ್ಲಿ ಸಮಿತಿ, 1960ರಲ್ಲಿ ನಾಗನಗೌಡ ಸಮಿತಿ, 1983ರಲ್ಲಿ ವೆಂಕಟಸ್ವಾಮಿ ಆಯೋಗ, 1990 ಚಿನ್ನಪ್ಪರೆಡ್ಡಿ ಅಯೋಗ ನೇಮಕ ಮಾಡಲಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಬಹುಮುಖ ಯೋಜನೆಗಳನ್ನು ಹಮ್ಮಿಕೊಂಡಿದ್ದರೂ ಪರಿಶಿಷ್ಟ ಪಂಗಡದ (ವಾಲ್ಮೀಕಿ) ಅಭಿವೃದ್ಧಿ ಕ್ಷೀಣಿಸುತ್ತಿರುವುದು ವಿಷಾಧನೀಯ ಸಂಗತಿಯಾಗಿದೆ.

ಹೀಗೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸ್ಥಾಪಿಸಲಾದ ಹಿಂದುಳಿದ ವರ್ಗಗಳ ಆಯೋಗಗಳು ಅಧ್ಯಯನ ನಡೆಸಿ ಜಾತೀಯ ಹಿಂದುಳಿದಿರುವಿಕೆಯ ಆಧಾರದ ಮೇಲೆ ಮೀಸಲಾತಿಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಾ ಬಂದಿವೆ. ಹೀಗೆ ವಾಲ್ಮೀಕಿ ಸಮುದಾಯ (ಪ. ಪಂ.) ಆಯಾ ಕಾಲದಲ್ಲಿ ಶೋಷಣೆಗೆ ಒಳಗಾಗಿರುವುದನ್ನು ಗುರುತಿಸಿ ಜಾತಿಗಳನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಯಾಗಲು ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಎಲ್ಲಾ ರಂಗದಲ್ಲಿ ಅವಕಾಶಗಳನ್ನು ಕಲ್ಪಿಸಿಕೊಡಲಾಗುತ್ತಿದೆ. ಈ ಸಮುದಾಯ (ಪ. ಪಂ.) ಸೌಲಭ್ಯ ವಂಚಿತವಾಗಿ ಹಿಂದುಳಿದಿದ್ದು ದೇಶದಲ್ಲಿ ಎರಡನೇ ದೊಡ್ಡ ಸಮೂಹವಾಗಿ ಕಂಡುಂಬದಿದೆ. ಭಾರತದ ಸಂವಿಧಾನವು 275 (1), 330, 332, 335, 338 ಎ, 339, 342 ನೇ ವಿಧಿಗಳು ವಾಲ್ಮೀಕಿ ಸಮುದಾಯ (ಬುಡಕಟ್ಟು) ದ ಅಭಿವೃದ್ಧಿಗಾಗಿ ವಿಶೇಷ ಸೌಲಭ್ಯ ಕಲ್ಪಸಿಕೊಟ್ಟಿದೆ. ಇದರಲ್ಲಿ ಮುಖ್ಯವಾಗಿ ಈ ಸಮುದಾಯದ ಜನರ ರಾಜಕೀಯ ಭಾಗವಹಿಸುವಿಕೆಗಾಗಿ ಸಂವಿಧಾನವು 330 ಮತ್ತು 332ನೇ ವಿಧಿಗಳು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ರಾಜಕೀಯ ಮೀಸಲಾತಿಗೆ ಅವಕಾಶ ಮಾಡಿಕೊಟ್ಟಿದೆ[3]. ಸ್ಥಳೀಯ ಸರ್ಕಾರ ವ್ಯವಸ್ಥೆಯಲ್ಲಿಯೂ ಈ ಸಮುದಾಯಕ್ಕೆ ಮೀಸಲಾತಿ ಕಲ್ಪಸಿಕೊಡಲಾಗಿದೆಯಾದರೂ, ಇತರೆ

[2] ಡಾ. ಪೂಜಾರಹಳ್ಳಿ ವಿರೂಪಾಕ್ಷಿ, **"ಕರ್ನಾಟಕದಲ್ಲಿ ತಳವಾರಿಕೆ,"** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಥಮ ಮುದ್ರಣ, 2006, ಪು.ಸಂ.04.

[3] ದುರ್ಗಾದಾಸ್ ಬಸ್ಸು , **"ಇಂಟ್ರುಡಕ್ಷನ್ ಟು ದ ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ",** ಲೆಕ್ಸಿಸ್ ನೆಕ್ಸಿಸ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 21ನೇ ಆವೃತ್ತಿ, 2013, ಪು. ಸಂ. 15.

ಸಮುದಾಯಗಳೊಂದಿಗೆ ಹೋಲಿಸಿದಾಗ ಈ ಸಮುದಾಯದ ಜನರು ಇಂದಿಗೂ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದು, ಆದುದ್ದರಿಂದಲೇ ಈ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಸ್ವತಂತ್ರ ಭಾರತದ ಗಂಭೀರ ಸಮಸ್ಯೆಗಳಲ್ಲೊಂದಾಗಿದೆ.

ಭಾರತದ ಉದ್ದಗಲಕ್ಕೂ ಹರಿದು–ಅಂಚಿ ಹೋಗಿರುವ ಈ ಸಮುದಾಯವು ರಾಜಕೀಯ ಅಸ್ಮಿತೆಯನ್ನು ಕಳೆದುಕೊಂಡಿದೆ. ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ವಿವಿಧ ರಾಜ್ಯಗಳಲ್ಲಿ ನೆಲೆಗೊಂಡಿರುವ ಈ ಸಮುದಾಯ ಅದರಲ್ಲಿಯೂ ಕರ್ನಾಟಕದಲ್ಲಿ ವಾಸಿಸುವ ಜನರನ್ನು ರಾಜಕೀಯ ಅಧಿಕಾರದಿಂದ ಕಡೆಗಣಿಸಲಾಗಿದೆ. ಭಾರತವನ್ನು ಒಳಗೊಂಡಂತೆ ಕರ್ನಾಟಕವನ್ನು ಆಳಿದ ಮತ್ತು ಆಳುವ ಎಲ್ಲಾ ರಾಜಕೀಯ ಪಕ್ಷಗಳು ಕೇವಲ ಓಟ್‌ಬ್ಯಾಂಕ್‌ಗಾಗಿ ಈ ಸಮುದಾಯವನ್ನು ಉಪಯೋಗಿಸಿಕೊಳ್ಳುತ್ತಿವೆ ಎಂದು ಪ್ರತಿವರ್ತಿಗಳು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹೇಳಿದ್ದು ಕಂಡುಬಂದಿದೆ. ಡಾ॥ ಬಿ.ಆರ್.ಅಂಬೇಡ್ಕರ್‌ರವರು ರಚಿಸಿರುವಂತ ಭಾರತ ಸಂವಿಧಾನವು ಜಾರಿಗೆ ಬಂದು 75 ವರ್ಷ ಕಳೆದರೂ ಕೂಡ ಅಭಿವೃದ್ಧಿ ಮತ್ತು ರಾಜಕೀಯ ಅಧಿಕಾರದಿಂದ ಪ್ರಗತಿಯುಕ್ತವಾಗಿ ಮುಂದೆ ಬರದೆ ಇರುವುದಕ್ಕೆ ಈ ಮೇಲಿನ ಸಮಸ್ಯೆಗಳೇ ಕಾರಣ ಎಂದು ಹೇಳಬಹುದು.

ರಾಜ್ಯ ಮತ್ತು ಭಾರತವನ್ನು ಒಳಗೊಂಡಂತೆ ಸ್ವಾತಂತ್ರ್ಯ ಹೋರಾಟದಲ್ಲಿ (ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ) ವಾಲ್ಮೀಕಿ ಸಮುದಾಯದ ಕೊಡುಗೆ ಅನನ್ಯವಾಗಿದೆ. ಆದರೂ ಸಹ ರಾಜಕೀಯವಾಗಿ ಈ ಸಮುದಾಯ ಒಂದು ಪ್ರಬಲ ರಾಜಕೀಯ ಶಕ್ತಿಯಾಗದೇ ಇರುವುದಕ್ಕೆ ಪ್ರಭುತ್ವದ ವೈಫಲ್ಯವೇ ಕಾರಣ ಎಂದು ಹೇಳಬಹುದು. ಕರ್ನಾಟಕದ ರಾಜಕೀಯ ರಂಗದಲ್ಲಿ ಲಿಂಗಾಯಿತರು, ಒಕ್ಕಲಿಗರು, ಹಿಂದುಳಿದವರಲ್ಲಿ ಕುರುಬರು, ಈಡಿಗರು, ಅಲ್ಪಸಂಖ್ಯಾತರಲ್ಲಿ ಅರಸರು, ಮೋಯ್ಲಿಯವರು ರಾಜಕೀಯ ಅಧಿಕಾರ ಹಂಚಿಕೊಂಡಿರುವರು. ಅಲ್ಲದೆ ಬ್ರಾಹ್ಮಣರು ಸಹ ಅಧಿಕಾರ ಲಾಭ ಪಡೆದಿರುವರು[4]. ಆದರೆ ರಾಜ್ಯದ ಜನಸಂಖ್ಯೆಯಲ್ಲಿ ವಾಲ್ಮೀಕಿ ಸಮುದಾಯವು 5ನೇ ಅತಿದೊಡ್ಡ ಸಮುದಾಯವದರೂ ಕೂಡ ರಾಜ್ಯದ ಅಧಿಕಾರ ಗದ್ದುಗೆಯನ್ನು ಹಿಡಿಯಲು ಇಲ್ಲಿಯವರೆಗೂ ಸಾಧ್ಯವಾಗಲಿಲ್ಲ. ಸಂವಿಧಾನದ ಪರಿಚ್ಛೇದ 15(4) ಹಾಗೂ 16(4) ಸಮಾನಹಕ್ಕು ಸಮಾನ ಅವಕಾಶ ನೀಡಿದ್ದರೂ ಸದುಪಯೋಗಪಡಿಸಿಕೊಳ್ಳಲಾಗದೆ ತುಳಿತಕ್ಕೊಳಗಾಗಿದೆ.

2011ರ ಜನಗಣತಿ ಪ್ರಕಾರ ಭಾರತವು 121,01,93,422 ರಷ್ಟು ಜನಸಂಖ್ಯೆ ಹೊಂದಿದೆ. ಇದರಲ್ಲಿ ಬುಡಕಟ್ಟು ಜನಸಂಖ್ಯೆ 10,42,81,034 ಇದ್ದು, ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.8.08ರಷ್ಟು

[4] ಕರಿಯಪ್ಪ ಎಂ., "ಪತ್ರಿಕಾ ಮಾಧ್ಯಮದ ರಾಜಕೀಯ ಸಮೀಕ್ಷೆಗಳ ಸಂಗ್ರಹ", ಸ್ಫೂರ್ತಿ ಪ್ರಿಂಟರ್ಸ್, ಬೆಂಗಳೂರು, 2004, ಪು. ಸಂ. 69.

ಬುಡಕಟ್ಟು ಜನರಿದ್ದಾರೆ[5]. 2011ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು 6,10,95,297 ಜನಸಂಖ್ಯೆಯಲ್ಲಿ 42,48,987ರಷ್ಟು ಬುಡಕಟ್ಟು ಜನಸಂಖ್ಯೆಯನ್ನು ಹೊಂದಿದೆ[6]. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಬುಡಕಟ್ಟು ಜನಸಂಖ್ಯೆ ಶೇ.6.95ರಷ್ಟಿದೆ. ರಾಜ್ಯದಲ್ಲಿ ವಾಲ್ಮೀಕಿ ಸಮುದಾಯವು ಒಟ್ಟು 32,96,354ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಇದು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.5.39ರಷ್ಟಿದೆ[7]. ವಿಶೇಷವಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ ವಾಲ್ಮೀಕಿ ಸಮುದಾಯದ ಜನಸಂಖ್ಯೆ ಕ್ರಮವಾಗಿ 22,259 ಸಾವಿರ ಮತ್ತು 121,976 ಲಕ್ಷ[8] ಜನಸಂಖ್ಯೆ ಇರುವುದನ್ನು ಕಾಣಬಹುದಾಗಿದೆ.

ಇತ್ತೀಚೆಗೆ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಹೆಚ್ಚಳವು ಕೇವಲ ಜನನ ಪ್ರಮಾಣದಿಂದ ಹೆಚ್ಚಳವಾಗಿರದೆ. ಪರಿಶಿಷ್ಟ ಪಂಗಡಗಳ ಗುಂಪಿನಲ್ಲಿ ಅನೇಕ ಬುಡಕಟ್ಟುಗಳನ್ನು ಹೊಸದಾಗಿ ಬೇರೆ ಬೇರೆ ಸಮುದಾಯಗಳನ್ನು ಸೇರ್ಪಡೆಗೊಳಿಸಿರುವುದರಿಂದ ಗಣನೀಯವಾಗಿ ಜನಸಂಖ್ಯೆ ಅಧಿಕವಾಗಿದೆ. ಈ ಜನಸಂಖ್ಯಾ ಹೆಚ್ಚಳದ ಪ್ರಮಾಣಕ್ಕೆ ಅನುಗುಣವಾಗಿ ಕಲ್ಪಿಸಲಾಗಿರುವ ಮೀಸಲಾತಿ ಅನುಪಾತವು ಅವೈಜ್ಞಾನಿಕ ವಿಧಾನವಾಗಿದೆ. ಈ ಹಿಂದಿನಿಂದಲೂ ಪರಿಶಿಷ್ಟ ಪಂಗಡಗಳಿಗೆ ಕೇಂದ್ರ ಸರ್ಕಾರದ ಮೀಸಲಾತಿ ನೀತಿಯಡಿ ಶೇ.7.5ರಷ್ಟು ಹಾಗೂ ಕರ್ನಾಟಕ ರಾಜ್ಯದಲ್ಲಿ ಶೇ.3ರಷ್ಟು ಇದೆ. ಆದರೆ ಈ ಮೀಸಲಾತಿ ಪ್ರಮಾಣ ಕಡಿಮೆಯಿದ್ದು, ಜನಸಂಖ್ಯೆ ಅಧಿಕವಾಗಿದ್ದರಿಂದ ಉದ್ಯೋಗ ಮತ್ತು ರಾಜಕೀಯ ಅಧಿಕಾರದಿಂದ ಹಿಂದುಳಿಯಲು ಕಾರಣವಾಗಿದೆ. ಅದರಂತೆಯೇ ಪ್ರಾದೇಶಿಕವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದ ಹೈದ್ರಾಬಾದ್ ಕರ್ನಾಟಕ (ಕ.ಕರ್ನಾಟಕ) ದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಾಸಿಸುವ ಈ ಸಮುದಾಯದವರ ದುಸ್ಥಿತಿ ಕೂಡ ಇದರ ಹೊರತಾಗಿಲ್ಲ. ಸಾಮಾಜಿಕ ಬದಲಾವಣೆ ಮತ್ತು ರಾಜಕೀಯ ಭಾಗವಹಿಸುವಿಕೆ ಅಥವಾ ಪ್ರಾತಿನಿಧ್ಯತೆಗೆ ಅನುಗುಣವಾಗಿ ರಾಜಕೀಯ ಅಸ್ಮಿತೆಯನ್ನು ಪಡೆದುಕೊಳ್ಳುವುದರ ಮೂಲಕ ಪರಿಶಿಷ್ಟ ಪಂಗಡದ ಇತರೆ ಜಾತಿಗಳನ್ನು ಒಳಗೊಂಡಂತೆ ವಾಲ್ಮೀಕಿ ಸಮುದಾಯ ಅಭಿವೃದ್ಧಿ ಕಾರ್ಯ ಸಾಧಿಸುವುದು ಅಗತ್ಯವಾಗಿದೆ.

ರಾಜಕೀಯವಾಗಿ ಅಧಿಕಾರ ಹೊಂದದ ಹೊರತು ಈ ಸಮುದಾಯವು ಮುನ್ನೆಡೆಯುವುದು ದುಸ್ಸಾಧ್ಯವೆನಿಸಿದೆ. ಸರ್ಕಾರದ ವಿವಿಧ ಯೋಜನೆಗಳ ಲಾಭ ಸಮುದಾಯದ ಅಪೇಕ್ಷಿತ ಜನರಿಗೆ ಸಕಾಲದಲ್ಲಿ ದೊರೆಯುವಂತಾಗಲು ಚುನಾಯಿತ ಪ್ರತಿನಿಧಿಗಳು ಜ್ಞಾನಾರ್ಜನೆಯತ್ತ ದಾಪುಗಾಲು ಹಾಕಬೇಕು[9]. ಸರ್ಕಾರದ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ವಿವಿಧ

[5] Indian Census Report-2011
[6] Karnataka Census Report-2011
[7] https://kmvstdcl.karnataka.gov.in/storage/pdf-files/General%20Information/stsubcastepopn20012011-4.pdf p. 2.
[8] Karnataka Maharshi Valmiki Schedule Tribes Development Corporation Limited District wise Schedule Tribes Sub caste wise Population as per 2011 Population Census, p.25,26.
[9] ವಿಶ್ವನಾಥ ಎಚ್., "ಆಪತ್ ಸ್ಥಿತಿಯ ಆಲಾಪಗಳು", ಹಳ್ಳಿ ಹಕ್ಕಿ ಪ್ರಕಾಶನ, ಮೈಸೂರು, 2013, ಪು. ಸಂ. 75.

ಯೋಜನೆಗಳ ಲಾಭ ಪಡೆಯುವಂತಾಗಬೇಕು. ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ತು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್, ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಘಗಳು, ಸಾಮಾಜಿಕ ಸಂಘ–ಸಂಸ್ಥೆಗಳಲ್ಲಿ ಚುನಾಯಿತರಾಗಿ ಅಧಿಕಾರ ಗದ್ದುಗೆಗೆ ಏರಬೇಕು. ಕೈಗಾರಿಗೆ, ವಿದ್ಯಾಸಂಸ್ಥೆ, ಆರಂಭಿಸಿ ಜನರಿಗೆ ಉದ್ಯೋಗ, ಶಿಕ್ಷಣ ದೊರೆಯುವಂತಾಗಬೇಕು. ಸರ್ಕಾರದ ವಿವಿಧ ಇಲಾಖೆಗಳಲ್ಲಿ, ಮಂಡಳಿ, ನಿಗಮಗಳಲ್ಲಿ ಅಧಿಕಾರ ಸ್ಥಾನ ಹಂಚಿಕೊಳ್ಳಬೇಕು[10].

ಒಟ್ಟಾರೇ ಭಾರತದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಸಮುದಾಯಗಳು ವಿವಿಧ ಸ್ಥಾನಮಾನಗಳಲ್ಲಿ ಮತ್ತು ಸಾಮಾಜಿಕ, ಆರ್ಥಿಕ ಸ್ಥಿತಿಗಳಲ್ಲಿ ಹಂಚಿಕೆಗೊಂಡಿರುವುದು ವಾಸ್ತವಾಂಶ. ಈ ಜಾತಿ ವ್ಯವಸ್ಥೆಯಲ್ಲಿ ಹಾಗೂ ಅದರ ಬೆಂಬಲದಿಂದಾಗಿ ಅನೇಕ ಜಾತಿಗಳು ಹಲವಾರು ಅಶಕ್ತತೆಗಳನ್ನು, ಅಸಮಾನತೆಗಳನ್ನು ಮತ್ತು ಅಡೆತಡೆಗಳನ್ನು ತಲೆತಲೆಮಾರುಗಳಿಂದ ಅನುಭವಿಸಿಕೊಂಡು ಬರುತ್ತಿವೆ. ಒಂದೊಂದು ಸಮುದಾಯವು ತನ್ನದೆಯಾದ ವಿಶಿಷ್ಟ ಹಿನ್ನೆಲೆ ಮತ್ತು ಪ್ರತ್ಯೇಕ ಸಮಸ್ಯೆಯನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ವಿಷಯ ವಸ್ತುವಾಗಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳನ್ನು ಕುರಿತು ಅದನ್ನು ವಿವಿಧ ದೃಷ್ಟಿಕೋನ, ವಿವಿಧ ಆಯಾಮಗಳಿಂದ ವಿಶ್ಲೇಷಿಸಿ ಈ ಮಹಾಪ್ರಬಂಧವನ್ನು ರಚಿಸಲಾಗಿದೆ.

2. ಸಮಸ್ಯೆಯ ನೆಲೆ:

ವಾಲ್ಮೀಕಿ ಸಮುದಾಯದ ಜನರ ರಾಜಕೀಯ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದ ಸಮಾಜಿಕ–ರಾಜಕೀಯ ಅಭಿವೃದ್ಧಿ ಪ್ರಕ್ರಿಯೆಯ ಗುರಿಯಾಗಿದೆ. ಇದನ್ನು ಕೇಂದ್ರ ಸ್ಥಾನದಲ್ಲಿ ನೆಲೆಗೊಳಿಸಿ ಶೋಧಿಸುವ ಅಗತ್ಯತೆ ಇದೆ. ಅಭಿವೃದ್ಧಿಯೊಂದಿಗೆ ಬದಲಾಗುತ್ತಿರುವ ಸಂದರ್ಭದಲ್ಲಿ ಈ ಸಮುದಾಯದ ಜನರ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಜೀವನದ ಸ್ಥಿತಿಗತಿ ಏರುಪೇರುಗಳಿಂದ ಕೂಡಿದೆ. ಇದನ್ನರಿತುಕೊಳ್ಳಲು ಪ್ರಸ್ತುತ ವಿಷಯವನ್ನು ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳ ವಿಶ್ಲೇಷಣೆಯಲ್ಲಿ ನೆಲೆಗೊಳಿಸಲಾಗಿದೆ.

ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಪ್ರಕ್ರಿಯೆಯು ವಿವಿಧ ಆಯಾಮಗಳಿಂದ ಕೂಡಿದೆ. ವಿಶೇಷವಾಗಿ ಅವರ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಜೀವನದ ಸ್ಥಿತಿಗತಿವು ಗಂಭೀರ ಸಮಸ್ಯೆಗಳಿಂದ ಕೂಡಿದೆ. ಈ ಸಮಸ್ಯೆಗಳು ಕರ್ನಾಟಕದಲ್ಲಿ ವಾಸಿಸುತ್ತಿರುವ ಎಲ್ಲಾ ವಾಲ್ಮೀಕಿ ಸಮುದಾಯದ ಜನರನ್ನು ಬಾಧಿಸುತ್ತಿವೆ. ರಾಜ್ಯದ ಇತರ ಜಿಲ್ಲೆಗಳಲ್ಲಿರುವಂತೆ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿಯು ಈ ಸಮುದಾಯದ ಜನರಿದ್ದಾರೆ. ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತಿಯಂತಹ ಪಂಚಾಯತ್ ರಾಜ್ ಸಂಸ್ಥೆಗಳು ವಿಕೇಂದ್ರಿಕೃತ

[10] ಕರಿಯಪ್ಪ ಎಂ., "ಮೇಷ ಸಮೀಕ್ಷೆ", ಸ್ಫೂರ್ತಿ ಪ್ರಿಂಟರ್ಸ್, ಬೆಂಗಳೂರು, 2007, ಪು. ಸಂ. 57.

ವ್ಯವಸ್ಥೆಯಲ್ಲಿ ಗ್ರಾಮೀಣಾಭಿವೃದ್ಧಿಯಂತೆಯೇ ಪರಿಶಿಷ್ಟ ಪಂಗಡಕ್ಕೆ ಸೇರಿದ ವಾಲ್ಮೀಕಿ ಸಮುದಾಯದ ಜನರ ಅಭಿವೃದ್ಧಿಗೂ ಸಾಮಾಜಿಕ ನ್ಯಾಯವನ್ನು ನೀಡಲೆತ್ತಿಸುತ್ತಿವೆ. ಆದರೂ ಈ ಪ್ರಾತಿನಿಧಿಕ ಸಂಸ್ಥೆಗಳಲ್ಲಿಯೂ ಈ ಸಮುದಾಯದ ರಾಜಕೀಯ ಸಬಲೀಕರಣದಲ್ಲಿ ಸ್ನೇಹಿ ದಾರ್ಶನಿಕತೆ ಮತ್ತು ಮನೋಧೋರಣೆಯ ಕೊರತೆ ಎದ್ದು ಕಾಣುತ್ತಿದೆ. ಇದು ಪ್ರಜಾಪ್ರಭುತ್ವಕ್ಕೂ ಮತ್ತು ಈ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೂ ಮಾರಕವಾಗಿ ಪರಿಣಮಿಸಿದೆ. ಈ ಸಮುದಾಯದ ಸಮಸ್ಯೆಗಳು ಅಧಿಕವಾದಷ್ಟು ವ್ಯವಸ್ಥೆಗಳೆಲ್ಲಾ ಅಸ್ಥಿರತೆಯ ಅಪಾಯಕ್ಕೀಡಾಗುತ್ತದೆ. ಆದ್ದರಿಂದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳು, ಒಳಗೊಳ್ಳುವಿಕೆ, ರಾಜಕೀಯ ಅಸ್ಮಿತೆ, ಮುಖ್ಯವಾಹಿನಿ ಮತ್ತು ಪ್ರಜಾಪ್ರಭುತ್ವದಂತಹ ಸೈದ್ಧಾಂತಿಕ, ನಿತ್ಯಾತ್ಮಕ ಹಾಗೂ ಅನ್ವಯಿಕ ವಿಚಾರಗಳನ್ನು ವಾಲ್ಮೀಕಿ ಸಮುದಾಯದ ಜನರ ದೃಷ್ಟಿಕೋನದಿಂದ ಮರುವ್ಯಾಖ್ಯಾನಿಸುವ ಅಗತ್ಯತೆ ಹಿಂದಿಗಿಂತಲೂ ಇಂದು ಅಧಿಕವಾಗಿದೆ. ಏಕೆಂದರೆ ಪ್ರಜಾಪ್ರಭುತ್ವವೆಂಬುದು ಕೇವಲ ಶ್ರೀಮಂತರು, ಬಂಡವಾಳಶಾಹಿಗಳು, ಬಲಶಾಲಿಗಳ ಪ್ರಭುತ್ವವಾಗದೇ ಬಡವರು ಮತ್ತು ದುರ್ಬಲ ವರ್ಗ ಅಥವಾ ತಳ ಸಮುದಾಯಗಳ ಪ್ರಭುತ್ವವಾಗಬೇಕೆಂಬುದನ್ನು ರಾಷ್ಟ್ರದ ನಿರ್ಮಾತೃಗಳ ಆಶಯವಾಗಿದೆ. ಭಾರತದಂತಹ ಶ್ರೇಣೀಕೃತವಾದ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಸಮೂಹಗಳು ವಿವಿಧ ಸ್ತರಗಳಲ್ಲಿ ಹಂಚಿಹೋಗಿವೆ. ಈ ಜಾತಿಯ ವ್ಯವಸ್ಥೆಯಲ್ಲಿ ಅನೇಕ ಜಾತಿಗಳು, ಅಶಕ್ತತೆ, ಅಸಮಾನತೆ, ಅಡೆತಡೆ, ಕೀಳುಸ್ಥಾನ, ಬಡತನ, ಅನಕ್ಷರತೆ, ಅಸ್ಪೃಶ್ಯತೆ ಮತ್ತು ರಾಜಕೀಯವಾಗಿ ಅನೇಕ ಜಾತಿಗಳು ಬಹಳಷ್ಟು ಹಿಂದುಳಿದಿದ್ದು ಯಾವುದೇ ಪ್ರತಿರೋಧವಿಲ್ಲದೆ ತಲಾತಲಾಂತರಗಳಿಂದ ಶೋಷಣೆಯನ್ನು ಅನುಭವಿಸಿಕೊಂಡು ಬಂದಿವೆ. ಭಾರತವು ಬ್ರಿಟಿಷರಿಂದ ಅಗಷ್ಟ್ 15, 1947ರಲ್ಲಿ ಸ್ವಾತಂತ್ರ್ಯಗೊಂಡು ತನ್ನ ಸಂವಿಧಾನ ರಚನಾ ಸಂದರ್ಭದಲ್ಲಿ ಸಾಮಾಜಿಕ ಅಸಮಾನತೆಯಿಂದ ಬಳಲುತ್ತಿದ್ದ, ಈ ಸಮುದಾಯದ ಜನರ ಕಲ್ಯಾಣಕ್ಕಾಗಿ ಸಂವಿಧಾನಿಕ ಮೀಸಲಾತಿಯ ಮುಖಾಂತರ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಯಿತು. ಆದಾಗ್ಯೂ ಈ ಸಮುದಾಯವು ಬಡತನ, ಅನಕ್ಷರತೆ, ಮೂಢನಂಭಿಕೆ, ರಾಜಕೀಯವಾಗಿ ಹಿಂದುಳಿದಿರುವಿಕೆ ಮತ್ತು ಇನ್ನಿತರ ಹಲವಾರು ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಾ ಬಂದಿದೆ. ಇಂತಹ ಸಮಸ್ಯೆಗಳನ್ನು ಪರಿಹರಿಕೊಳ್ಳುವಲ್ಲಿ ಈ ಸಮುದಾಯವು ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ಅವಲೋಕಿಸುವುದು ಅಗತ್ಯವಾಗಿದೆ. ಹಾಗಾಗಿ ಕರ್ನಾಟಕದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆ ಹಾಗೂ ಅವರ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ವಿಶ್ಲೇಷಣೆಗೆ ಒಳಪಡಿಸುವುದು ಅತ್ಯವಶ್ಯಕವಾಗಿದೆ.

2.1 ಅಧ್ಯಯನದ ಸಮರ್ಥನೆ:

ವಾಲ್ಮೀಕಿ ಸಮುದಾಯದ ಕುರಿತು ಅಧ್ಯಯನ ಕೈಗೊಳ್ಳುವುದು ತುಂಬಾ ಅಗತ್ಯವಾಗಿದೆ. ಏಕೆಂದರೆ ಇಂದು ಪರಿಶಿಷ್ಟ ಪಂಗಡದಲ್ಲಿ (st) ಬರುವ ಈ ಸಮುದಾಯವನ್ನು ಸಮಾಜದ ಕೆಳಸ್ತರದ ಜನರೆಂದು ಗುರುತಿಸಲಾಗಿದೆ. ಈ ಸಮುದಾಯದಲ್ಲಿ ಅಜ್ಞಾನ, ಅನಕ್ಷರತೆ, ಬಡತನ, ಮೂಢನಂಬಿಕೆ ಇತ್ಯಾದಿ ಅನಿಷ್ಠ ಪದ್ಧತಿಗಳು ಕಂಡು ಬರುತ್ತವೆ. ಇಂತಹ ಜನರ ಅಭಿವೃದ್ಧಿಗಾಗಿ ಅವರಲ್ಲಿ ರಾಜಕೀಯ ಅರಿವು ಜಾಗೃತಿ ಮೂಡಿಸುವುದು ಅತೀ ಅವಶ್ಯಕವಾಗಿದೆ. ಈ ಸಮುದಾಯದವರು ತಮಗೆ ನ್ಯಾಯಯುತವಾಗಿ ಸಿಗಬೇಕಾದಷ್ಟು ರಾಜಕೀಯ ಪಾಲನ್ನು ಪಡೆದಿಲ್ಲ. ಎಲ್ಲಾ ರೀತಿಯಲ್ಲೂ ತಾರತಮ್ಯವಿರುವುದರಿಂದ ಇನ್ನೂ ಸಮಸ್ಯೆಗಳು ಹೆಚ್ಚಿವೆ. ಜೀವನದ ಮೂಲಭೂತ ಅವಶ್ಯಕತೆಗಳಿಂದ ವಂಚಿತವಾಗಿರುವ ಈ ಎರಡು ಜಿಲ್ಲೆಗಳಲ್ಲಿ ಪ್ರತಿನಿತ್ಯ ಜನರು ಹೋರಾಡುತ್ತಿದ್ದಾರೆ. ಹಾಗೇ ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ತೀರಾ ಹಿಂದುಳಿದಿದೆ. ರಾಜಕೀಯ ಹೊರಗೊಳ್ಳುವಿಕೆ ಮತ್ತು ಒಳಗೊಳ್ಳುವಿಕೆಯ ಸಂವಾದದಲ್ಲಿ ವಾಲ್ಮೀಕಿ ಸಮುದಾಯದ ಜನರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಜೀವನ ಸಮಸ್ಯೆ, ಸವಾಲುಗಳು ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿವಾದಾಂಶಗಳು ಪ್ರಾಮುಖ್ಯತೆಯನ್ನು ಪಡೆಯುತ್ತಿವೆ. 'ಪ್ರಜಾಭಿವೃದ್ಧಿ'ಯ ಅವಿಭಾಜ್ಯ ಪ್ರಕ್ರಿಯೆಯಾದ ಈ ಸಮುದಾಯದ ಜನರ ಅಭಿವೃದ್ಧಿಯು ಪ್ರಜಾಪ್ರಭುತ್ವದ ಆಧ್ಯತೆಗಳಲ್ಲಿ ಒಂದಾಗಬೇಕಿದೆ. ರಾಜಕೀಯ ಸಮಾನತೆಯೊಂದಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯೇತರ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯ, ಸಮಾನತೆ, ನ್ಯಾಯ ದೊರಕಿದಾಗಲೇ ಪ್ರಜಾಪ್ರಭುತ್ವ ಯಶಸ್ವಿಗೊಳ್ಳುತ್ತದೆ[11].

ವಾಲ್ಮೀಕಿ ಸಮುದಾಯವು ಕರ್ನಾಟಕ ರಾಜ್ಯದ 5ನೇ ಅತಿದೊಡ್ಡ ಸಮುದಯವಾದರೂ ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ನಿರ್ಣಾಯಕ ಪಾತ್ರವಹಿಸುವಲ್ಲಿ ಸೋತಿದೆ. ಗತಕಾಲದ ಭವ್ಯ ರಾಜಕೀಯ ಚರಿತ್ರೆಯನ್ನು ಹೊಂದಿದಾಗಲೂ ಕೂಡ ರಾಜಕೀಯ ಒತ್ತಡದ ಗುಂಪು ಆಗುವಲ್ಲಿ ವಿಫಲವಾಗಿದೆ. ಭಾರತದ ಸಂವಿಧಾನದ ಪರಿಚ್ಛೇದ 342ನೇ ವಿಧಿ ಪ್ರಕಾರ ಬುಡಕಟ್ಟು ಸಮುದಾಯವನ್ನು "ಪರಿಶಿಷ್ಟ ಪಂಗಡ/ವರ್ಗ" ಎಂದು ವ್ಯಾಖ್ಯಾನಿಸಲಾಯಿತು. ತದ ನಂತರದ ಬೆಳವಣಿಗೆಯಲ್ಲಿ ಹಲವಾರು ಸಮಿತಿಗಳು, ವರದಿಗಳು, ಶಿಫಾರಸ್ಸಿನ ಆಧಾರದ ಮೇಲೆ ಕೆಲವೊಂದು ಸಮುದಾಯಗಳನ್ನು ಇತ್ತೀಚೆಗೆ ಅಭಿವೃದ್ಧಿಯ ದೃಷ್ಟಿಯಿಂದ ಪರಿಶಿಷ್ಟ ವರ್ಗಕ್ಕೆ ಸೇರಿಸಿಕೊಳ್ಳಲಾಗುತ್ತಿದೆ. ಈಗಾಗಲೇ ಪ್ರಸ್ತುತವಾಗಿ ಒಟ್ಟು 50 ಜಾತಿಗಳು ಪರಿಶಿಷ್ಟ ಪಂಗಡದಲ್ಲಿದ್ದು,[12] ಅವುಗಳಿಗೆ ನೀಡಿರುವ ಮೀಸಲಾತಿ ಪ್ರಮಾಣ ಕಡಿಮೆಯಿದ್ದು, ಹೊಸದಾಗಿ ಈ ವರ್ಗಕ್ಕೆ ಸೇರಿಸಿಕೊಳ್ಳುವ ಜಾತಿಗೂ ಅದೇ

[11] Elwin verrier, 'The Religion of an indian tribe', Oxferd university press, Bombay, 1955, p.4.
[12] https://kmvstdcl.karnataka.gov.in/storage/pdf-files/General%20Information/stsubcastepopn20012011-4.pdf

ಮೀಸಲಾತಿ ಅನ್ವಯವಾಗುವ ಕಾರಣ ಅಭಿವೃದ್ಧಿಯ ದೃಷ್ಟಿಯಿಂದ ಹಿಂದುಳಿಯಲು ಕಾರಣವಾಗುತ್ತದೆ. ಏಕೆಂದರೆ ಸಂವಿಧಾನದ ಅವಕಾಶಗಳನ್ನು ಪಡೆದುಕೊಳ್ಳಲು ಎಲ್ಲಾ ಸಮುದಾಯಗಳ ನಡುವೆ ಸ್ಪರ್ಧೆ ಏರ್ಪಟ್ಟು, ಮೂಲ ಬುಡಕಟ್ಟು ಸಮುದಾಯಗಳು ಅವಕಾಶ ವಂಚಿತರಾಗಿ ಹಿಂದುಳಿಯಲು ಕಾರಣವಾಗುತ್ತದೆ. ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯತೆ ನೀಡುವುದು ಅವಶ್ಯಕವಾಗಿದೆ.

ಪ್ರಜಾಪ್ರಭುತ್ವದಲ್ಲಿ ಎಷ್ಟರ ಮಟ್ಟಿಗೆ ವಿವಿಧ ಸಮುದಾಯದ ಗುಂಪುಗಳಿಗೆ ಆಡಳಿತದಲ್ಲಿ ನಿರ್ಣಯ ಕೈಗೊಳ್ಳುವಿಕೆಯಲ್ಲಿ ಅವಕಾಶವಿದೆ. ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆ ಮುಖ್ಯವಾಗಿದ್ದು, ಅವರ ಸಾಮಾಜಿಕ, ರಾಜಕೀಯ, ಆರ್ಥಿಕ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುತ್ತದೆ. ವಿವಿಧ ಜಾತಿ, ವರ್ಗಗಳ ನಡುವೆ ಪ್ರಭಾವವನ್ನು ಹೊರತುಪಡಿಸಿ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಅಂದರೆ, ಸ್ಥಳೀಯ ಸಂಸ್ಥೆಗಳಾದ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಇವುಗಳಲ್ಲಿ ಎಷ್ಟರ ಮಟ್ಟಿಗೆ ಈ ಸಮುದಾಯದ ಪ್ರತಿನಿಧಿಗಳ ಆಯ್ಕೆ, ಪ್ರತಿನಿಧಿತ್ವದ ಗುಣಮಟ್ಟ, ಅವರ ರಾಜಕೀಯ ಭಾಗವಹಿಸುವಿಕೆ ಮತ್ತು ರಾಜಕೀಯ ಚಟುವಟಿಕೆಗಳ ಪರಿಣಾಮಕತೆಗಳೆಲ್ಲವೂ ಎರಡು ಜಿಲ್ಲೆಗಳ ಸಮಾಜೋ ರಾಜಕೀಯ ಪರಿಸರ ಹಾಗೂ ಪರಿಸ್ಥಿತಿಯು ಪ್ರಭಾವಕ್ಕೆ ಒಳಪಟ್ಟಿವೆ. ಇದನ್ನುರಿತುಕೊಳ್ಳವಲ್ಲಿ ನಿರೂಪಿತ ವಿಷಯ ಅತ್ಯಂತ ಸಮರ್ಥನಿಯವಾದುದಾಗಿದೆ ಎಂದು ತಿಳಿಸಲಾಗುತ್ತದೆ.

3. ಅಧ್ಯಯನದ ಉದ್ದೇಶಗಳು:

ಈ ಸಂಶೋಧನೆಯು ಕೆಲವೊಂದು ಧೇಯೋದ್ದೇಶಗಳನ್ನು ಹೊಂದಿದೆ. ಅವುಗಳು ಈ ಕೆಳಗಿನಂತಿವೆ,

1) ಕರ್ನಾಟಕದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು.
2) ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಯನ್ನು ಅಧ್ಯಯನ ಮಾಡುವುದು.
3) ಗುಲಬರ್ಗಾ ಮತ್ತು ಯಾದಗಿರಿಯಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಪ್ರಕ್ರಿಯೆಯಲ್ಲಿ ಪ್ರಭಾವ ಬೀರುವ ಅಂಶಗಳು ಹಾಗೂ ಸಮಸ್ಯೆ ಮತ್ತು ಸವಾಲುಗಳನ್ನು ಪರಿಶೀಲಿಸುವುದು.
4) ವಾಲ್ಮೀಕಿ ಸಮುದಾಯದ ಅಭಿವೃದ್ಧಿ ಮತ್ತು ರಾಜಕೀಯ ಬೆಳವಣಿಗೆಯ ದೃಷ್ಟಿಯಿಂದ ಸಮುದಾಯದ ಮುಖಂಡರು, ರಾಜಕೀಯ ಮುಖಂಡರುಗಳ ಅಭಿಪ್ರಾಯಗಳು ಮತ್ತು ಬದ್ಧತೆಯನ್ನು ವಿಶ್ಲೇಷಿಸುವುದು.

4. ಸಾಹಿತ್ಯಾವಲೋಕನ:

ಯಾವುದೇ ಒಂದು ಸಂಶೋಧನಾ ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸುವಲ್ಲಿ ಸಾಹಿತ್ಯವು ಅತ್ಯಂತ ಮಹತ್ವಪೂರ್ಣವಾದ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದಲೇ ಈಗಾಗಲೇ ನಡೆದಿರುವ ಸಂಶೋಧನಾ ಕಾರ್ಯಗಳ ಬಗೆಗೆ ಸ್ಪಷ್ಟ ಅರಿವು ಇರುವುದು ಸಂಶೋಧಕನಾದವನಿಗೆ ಅತ್ಯವಶ್ಯಕ. ಆ ಪರಿಜ್ಞಾನ ಇಲ್ಲದಿದ್ದರೆ ಪ್ರಸ್ತುತ ಸಂಶೋಧಕನಿಗೆ ಸಂಶೋಧನೆಯ ದಿಕ್ಕು ದಿಸೆಗಳನ್ನು ನಿರ್ಧರಿಸಲಾಗದು. ಆದ್ದರಿಂದ ಪ್ರತಿಯೋರ್ವ ಸಂಶೋಧಕನು/ಳು ತನ್ನ ಅಧ್ಯಯನ ಕ್ಷೇತ್ರದ ಪ್ರಮುಖ ಅಂಶಗಳನ್ನು ಕುರಿತು ತಿಳಿಯಲು ಸಾಹಿತ್ಯ ಪರಾಮರ್ಶೆ ನಡೆಸುವವನು / ನಡೆಸುವವಳು ಇದನ್ನೆ ಸಾಹಿತ್ಯ ಪರಾಮರ್ಶೆ ಎಂದು ಕರೆಯುತ್ತೇವೆ. "ಕರ್ನಾಟಕದಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳು: ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಒಂದು ತೌಲನಿಕ ಅಧ್ಯಯನ" (2010 ರಿಂದ 2018) ಎಂಬ ಸಂಶೋಧನ ವಿಷಯಯನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಪೂರಕವಾದ ಪ್ರಾಥಮಿಕ ಮತ್ತು ದ್ವಿತೀಯ ಮೂಲಾಧಾರದಿಂದ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಬಗೆಗಿನ ಅಧ್ಯಯನಗಳು ವಿರಳವಾಗಿರುವುದು ಕಂಡುಬರುತ್ತವೆ. ಅದರಲ್ಲೂ ಇಲ್ಲಿಯವರೆಗಿನ ಹೆಚ್ಚಿನ ಅಧ್ಯಯನಗಳು ಸಮುದಾಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಒಳಗೊಂಡಿರುವವು. ಆದರೆ ಈ ಎರಡು ಜಿಲ್ಲೆಗಳಲ್ಲಿ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳ ಕುರಿತು ಸಂಶೋಧನೆಗಳು ನಡೆದಿರುವುದಿಲ್ಲ. ಅವರ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಪ್ರಗತಿಯನ್ನು ವಿಶ್ಲೇಷಣೆಗೆ ಒಳಪಡಿಸುವ ಗುರಿಯನ್ನು ಹೊಂದಿದೆ. ರಾಜ್ಯಶಾಸ್ತ್ರದ ನೆಲೆಗಟ್ಟಿನಲ್ಲಿ ವಾಲ್ಮೀಕಿ ಸಮುದಾಯವನ್ನು ಅಭ್ಯಸಿಸುವುದು ಅನಿವಾರ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಅನೇಕ ಗ್ರಂಥಗಳು, ಸಂಶೋಧನಾ ಲೇಖನಗಳನ್ನು ಸಾಹಿತ್ಯ ಪರಾಮರ್ಶಗೆ ಒಳಪಡಿಸಿರುವ ಸಾಹಿತ್ಯಾವಲೋಕನದ ವಿವರ ಈ ಕೆಳಕಂಡತೆ ಸಮರ್ಪಿಸಲಾಗದೆ.

ಡಾ. ಪೂಜಾರಹಳ್ಳಿ ವಿರೂಪಾಕ್ಷಿ, ಸಂಪಾದಕರು, **"ವಾಲ್ಮೀಕಿ ಸಿರಿ"** ಪ್ರಕಟಣೆ ಚಿನ್ನಹಗರಿ ಪ್ರಕಾಶನ ಪೂಜಾರಹಳ್ಳಿ, ಪ್ರಥಮ ಮುದ್ರಣ–2006. ಎಂಬ ಕೃತಿಯಲ್ಲಿ 'ವಾಲ್ಮೀಕಿ ನಾಯಕ ಬುಡಕಟ್ಟಿನ ಸಂಕ್ಷಿಪ್ತ ಪರಿಚಯ' ಎಂಬ ಲೇಖನದಲ್ಲಿ ಭಾರತ ದೇಶದಲ್ಲಿರುವ ಪ್ರಾಚೀನ ಬುಡಕಟ್ಟುಗಳಲ್ಲಿ ನಾಯಕ ಬುಡಕಟ್ಟು ಸಮುದಾಯವು ಒಂದು. ನಾಯಕ ಸಮುದಾಯದ ಪರ್ಯಾಯ ನಾಮಾಂಕಿತಗಳು ಮತ್ತು ಅವರ ಕುಲ–ಕಸುಬು, ನೆಲೆ, ಜನಸಂಖ್ಯೆ ಬಗ್ಗೆ ಈ ಲೇಖನದಲ್ಲಿ ವಿವರಿಸಿದ್ದಾರೆ. ವಾಲ್ಮೀಕಿ ಜನಾಂಗದ ಇತಿಹಾಸ ಪರಂಪರೆ, ಸಂಸ್ಕೃತಿ ಹಾಗೂ ದ್ವಾಪರಯುಗ, ತ್ರೇತಾ ಮತ್ತು ಕಲಿಯುಗದಲ್ಲಿ ನಾಯಕ ಬುಡಕಟ್ಟಿನ ಮಹಾನೀಯರ ಚಿತ್ರಣವನ್ನು ಚಿತ್ರಿಸಿದ್ದಾರೆ. ಕರ್ನಾಟಕದಲ್ಲಿ ಮೊಟ್ಟಮೊದಲು ರಾಜ್ಯವನ್ನು ಸ್ಥಾಪಿಸಿ ಆಳ್ವಿಕೆ

ನಡೆಸಿದ್ದು ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೇಡರ ಮಹತ್ವವನ್ನು ಈ ಲೇಖನದಲ್ಲಿ ವಿವರಿಸುತ್ತ ಮುಂದೆ ಸ್ವಾತಂತ್ರ್ಯ ನಂತರ ಈ ಸಮುದಾಯದ ಅಭಿವೃದ್ಧಿ, ಶಿಕ್ಷಣ, ಬಡತನ, ಉದ್ಯೋಗ ಮತ್ತು ಮೀಸಲಾತಿ ಸೌಲಭ್ಯದ ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯ ವಸ್ತು ನನ್ನ ಸಂಶೋಧನೆಗೆ ಅತ್ಯ–ಅವಶ್ಯಕವಾಗಿದೆ. ಇದರ ಕುರಿತು ಇನ್ನು ಹೆಚ್ಚಿನ ಅಧ್ಯಯನ ಕೈಗೊಳ್ಳಲು ಈ ಲೇಖನವು ಸಹಾಯಕವಾಗಿದೆ.

ಡಾ॥ ಮೈತ್ರಿ ಕೆ.ಎಂ., **"ಬುಡುಕಟ್ಟು ಕುಲಕಸುಬುಗಳು"** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಥಮ ಮುದ್ರಣ–2002 ಎಂಬ ಪುಸ್ತಕದಲ್ಲಿ ಪ್ರಾಚೀನ ಭಾರತ ಮತ್ತು ಕರ್ನಾಟಕದ ಬುಡಕಟ್ಟುಗಳ ಸಂಕ್ಷಿಪ್ತ ಪರಿಚಯ ಮತ್ತು ಅವುಗಳ ಹಿಂದಿನ ಕುಲಕಸುಬುಗಳ ಸ್ಥಿತಿಗತಿಗಳನ್ನು ಪರಿಚಯಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಕುಲಕಸುಬುಗಳು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಇತ್ಯಾದಿ ಅಸಮಾನತೆಗಳಿಗೆ ಕಾರಣವಾಗಿದೆ ಎಂದು ಈ ಅಧ್ಯಯನದ ಮೂಲಕ ಗೊತ್ತಾಗುತ್ತದೆ. ಇಂದು ಅವಗಣನೆಗೆ ಒಳಗಾದ ಅವುಗಳ ಅಧ್ಯಯನ ಅನಿವಾರ್ಯವಾಗಿದೆ.

ಡಾ. ಪೂಜಾರಹಳ್ಳಿ ವಿರೂಪಾಕ್ಷಿ, ಸಂಪಾದಕರು, **"ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ"** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಥಮ ಮುದ್ರಣ–2008 ಎಂಬ ಪುಸ್ತಕದಲ್ಲಿ ನನ್ನ ಸಂಶೋಧನೆಗೆ ಸಹಾಯಕವಾಗುವ ಕೆಲವು ಮಾಹಿತಿಯನ್ನು ಇದರಿಂದ ಲಭಿಸಿದೆ. ಇಲ್ಲಿ ಇಡೀ ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಬ್ರಿಟಿಷರ ವಿರುದ್ಧ ಮಾಡಿರುವ ದಂಗೆಗಳು, ರಾಜಕೀಯ ಕ್ಷೇತ್ರದಲ್ಲಿ ಸಾಧಿಸಿರುವ ಸಾಧನೆಗಳು, ಸಾಮಾಜಿಕ ಸ್ಥಿತಿ–ಗತಿ, ಆರ್ಥಿಕ ಸ್ಥಿತಿ–ಗತಿ ಮತ್ತು ಅಭಿವೃದ್ಧಿಯ ಕುರಿತು ಯೋಚನೆ, ಯೋಜನೆ ಹಾಗೇ ಅವರಲ್ಲಿರುವ ಸಮಸ್ಯೆಗಳು, ಸವಾಲುಗಳನ್ನು ತಿಳಿಯಲು ಈ ಕೃತಿಯು ತುಂಬಾ ಸಹಾಯಕವಾಗುತ್ತದೆ.

ಡಾ. ಪೂಜಾರಹಳ್ಳಿ ವಿರೂಪಾಕ್ಷಿ, ಸಂಪಾದಕರು, **"ಬೇಟೆ ಮತ್ತು ಬೇಡರು"** ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳ ಚಾರಿತ್ರಿಕ ಅಧ್ಯಯನ, ಪ್ರಕಾಶನ ಚಿನ್ನಹಗರಿ ಪೂಜಾರಹಳ್ಳಿ, ಪ್ರಥಮ ಮುದ್ರಣ–2007 ಎಂಬ ಪುಸ್ತಕದಲ್ಲಿ ಭಾರತದಲ್ಲಿ ಬೇಟೆಗಾರಿಕೆ ಮತ್ತು ಬೇಟೆಗೆ ಸಂಬಂಧಿಸಿದಂತೆ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ ಬೇಟೆ ಮತ್ತು ಬೇಡರ ಕಥಾಪ್ರಸಂಗಗಳನ್ನು ಹಾಗೆಯೇ ಅವರಲ್ಲಿರುವ ಜನಪದಗೀತೆ, ನಂಬಿಕೆ, ಆಚರಣೆಗಳನ್ನು ಈ ಕೃತಿ ತಿಳಿಸಿಕೊಡುತ್ತದೆ.

ಈಶ್ವರ ಎಂ.ಜಿ., **'ಮ್ಯಾಸಬೇಡರು',** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1998. ಈ ಕೃತಿಯು ಬುಡಕಟ್ಟು ಸಮುದಾಯಗಳಲ್ಲಿ ಒಂದಾದ ಮ್ಯಾಸಬೇಡರ ಜೀವನ ಕಲೆ, ಬಂಧುತ್ವ, ವಿವಾಹ, ಕುಲಕಸುಬುಗಳು, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಸಂಕ್ಷಿಪ್ತ ಮಾಹಿತಿ ನೀಡುತ್ತದೆ.

ಬ್ರಾರ ಜಸ್ವಿಂದರ್ ಎಸ್., **'ಪಾಲಿಟಿಕಲ್ ಎಕಾನಮಿ ಆಫ್ ರೂರಲ್ ಡೆವಲಪ್‌ಮೆಂಟ್: ಸ್ಟ್ರಾಟಜಿಸ್ ಫಾರ್ ಪಾವರ್ಟಿ, ಎಲಿವೇಶನ್',** ಅಲ್ಲೈಡ್, ನ್ಯೂ ಡೆಲ್ಲಿ, 1983. ಎಂಬ ಈ ಗ್ರಂಥದಲ್ಲಿ ಗ್ರಾಮೀಣ ಅಭಿವೃದ್ಧಿಯಲ್ಲಿ ರಾಜಕೀಯ, ಆರ್ಥಿಕತೆಯ ಪಾತ್ರ ಹಾಗೂ ಬಡತನ ನಿರ್ಮೂಲನೆಗೊಳಿಸಲು ಕೆಲವೊಂದು ಸಲಹೆ–ಪರಿಹಾರೋಪಾಯಗಳ ಕುರಿತು ಚರ್ಚಿಸಲಾಗಿದೆ. ಇದರಿಂದ ಈ ಸಂಶೋಧನೆಗೆ ಸಂಬಂಧಿಸಿದಂತೆ ವಾಲ್ಮೀಕಿ ಸಮುದಾಯದ ಅಭಿವೃದ್ಧಿಯಲ್ಲಿ ಆರ್ಥಿಕ, ರಾಜಕೀಯ ಅಂಶಗಳ ಕುರಿತು ತಿಳಿಯಲು ಸಹಕಾರಿಯಾಗಿದೆ.

ಅಡಿನ್ ಚಾರ್ಲ್ಸ್ ಆರ್., **'ಸ್ಟೇಟ್ ಆಂಡ್ ಲೋಕಲ್ ಗವರ್ನಮೆಂಟ್ ಸ್ಟಡಿ ಇನ್ ದಿ ಪಾಲಿಟಿಕಲ್ ಪ್ರೊಸೆಸ್',** ನ್ಯೂಯಾರ್ಕ್ ಎಂ.ಸಿ. ಗ್ರಾ ಹಿಲ್, 1960. ಈ ಗ್ರಂಥದಲ್ಲಿ ರಾಜಕೀಯ ಪ್ರಕ್ರಿಯೆಯಲ್ಲಿ ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ಕುರಿತು ಅಧ್ಯಯನ ಮಾಡಲಾಗಿದೆ. ಈ ಗ್ರಂಥದಿಂದ ಈ ಸಂಶೋಧನೆಗೆ ಸಂಬಂಧಿಸಿದಂತೆ ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಪ್ರಕ್ರಿಯೆಗಳನ್ನು ತಿಳಿಯಲು ಸಹಾಯಕವಾಗಿದೆ.

ಗೌಬಾ ಓ.ಪಿ., **'ಡೈಮೆನ್ಸೆನ್ ಆಫ್ ಸೋಷಿಯಲ್ ಜಸ್ಟೀಸ್',** ನ್ಯೂ ಡೆಲ್ಲಿ, 1983. ಈ ಗ್ರಂಥವು ಸಾಮಾಜಿಕ ನ್ಯಾಯದ ವಿವಿಧ ಆಯಾಮಗಳನ್ನು ವಿವರಿಸಿದೆ. ಅಲ್ಲದೇ ಈ ಒಂದು ಸಂಶೋಧನೆಗೆ ಸಂಬಂಧಿಸಿದಂತೆ ವಾಲ್ಮೀಕಿ ಸಮುದಾಯದ ಸಾಮಾಜಿಕ ನ್ಯಾಯದ ಆಯಾಮಗಳನ್ನು ತಿಳಿಯಲು ತುಂಬಾ ಅನುಕೂಲವಾಗಿದೆ.

ಜಿ.ಎಸ್.ಸದಾನಂದ, **'ಜಾತಿ, ರಾಜಕೀಯ ಮತ್ತು ಮೀಸಲಾತಿ ಅರಿವು ಮತ್ತು ಬರಹ',** ನವಚೇತನ ಪಬ್ಲಿಕೇಷನ್, ಮಂಗಳೂರು, 1994. ಈ ಕೃತಿಯಲ್ಲಿ ವೈವಿಧ್ಯತೆಯಿಂದ ಕೂಡಿದ ಕರ್ನಾಟಕ ರಾಜ್ಯದಲ್ಲಿ ಜಾತಿ ಮತ್ತು ರಾಜಕೀಯ ಮೀಸಲಾತಿಯ ಪ್ರಜ್ಞೆ ಹಾಗೂ ಸಾಮಾಜಿಕ ನ್ಯಾಯದ ಕುರಿತಾದ ಒಂದು ಉಪಯುಕ್ತ ಕೃತಿ ಎಂದು ಹೇಳಬಹುದು.

ದಿ ಮ್ಯಾಕ್‌ಮಿಲ್ಲನ್ ಕಂಪನಿ ಅವರು ಪ್ರಕಟಿಸಿದ ಹರ್ಬರ್ಟ್ ಹೆಚ್ ಹೇಮನ್ ಅವರ **"ಪೋಲಿಟಿಕಲ್ ಸೋಶಿಯಾಲೈಜೇಶನ್"** ದಿ ಫ್ರೀ ಪ್ರೇಸ್, 1959 ಎಂಬ ಗ್ರಂಥದಲ್ಲಿ ಲೇಖಕರು ರಾಜಕೀಯ ಸಮಾಜೀಕರಣದ ಕುರಿತು ಸಾಕಷ್ಟು ವಿವರಣೆಯನ್ನು ನೀಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಭಾಗವಹಿಸುವಿಕೆ ಎಷ್ಟು ಮಹತ್ವ ಪಡೆದಿದೆ ಎಂಬುದರ ಕುರಿತು ಈ ಕೃತಿಯು ತಿಳಿಸುತ್ತದೆ. ರಾಜಕೀಯ ಭಾಗವಹಿಸುವಿಕೆಯ ಮೇಲೆ ವಯಸ್ಸು, ಲಿಂಗ, ಶಿಕ್ಷಣ, ಪ್ರದೇಶ ಮುಂತಾದ ಅಂಶಗಳು ಯಾವ ರೀತಿ ಪ್ರಭಾವ ಬೀರುತ್ತವೆ ಎಂಬುದರ ಕುರಿತು ಸಾಕಷ್ಟು ಮಾಹಿತಿಯನ್ನು ಈ ಕೃತಿಯು ಒದಗಿಸುತ್ತದೆ.

ಹಸ್ಸನ್, ಜೋಯ್, **"ಪೊಲಿಟಿಕ್ಸ್ ಆಫ್ ಇನ್‌ಕ್ಲೂಶನ್: ಕ್ಯಾಸ್ಟ, ಮೈನಾರಿಟಿ ಅಂಡ್ ಅಫರ್ಮೇಟಿವ್ ಆ್ಯಕ್ಷನ್",** ಆಕ್ಸಫರ್ಡ್ ಯುನಿವರ್ಸಿಟಿ ಪ್ರೆಸ್: ನವದೆಹಲಿ, 2009. ಈ ಗ್ರಂಥದಲ್ಲಿ ಲೇಖಕರು ಪ್ರಸ್ತುತ

ಭಾರತದ ಸಾಮಾಜಿಕ ಸನ್ನಿವೇಶದಲ್ಲಿ ಜಾತಿ ಮತ್ತು ಧರ್ಮದ ಆಧಾರದಲ್ಲಿ ಒಳಗೊಳ್ಳುವಿಕೆಯ ಸಮಸ್ಯೆ ಮತ್ತು ಸವಾಲುಗಳನ್ನು ಸಹ ವಿವರವಾಗಿ ಚರ್ಚಿಸಿದ್ದಾರೆ. ಒಳಗೊಳ್ಳುವಿಕೆಯ ರಾಜಕಾರಣದಲ್ಲಿ ಪ್ರಮುಖವಾಗಿ ರಾಜ್ಯ ನೀತಿಗಳನ್ನು ಮತ್ತು ರಾಜಕೀಯ ಪ್ರಕ್ರಿಯೆಗಳನ್ನು ಕೇಂದ್ರವಾಗಿರಿಸಿಕೊಂಡು ಈ ಕೃತಿಯು ದಲಿತ ಅಸ್ಮಿತೆ ಮತ್ತು ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಬಗ್ಗೆ ಪ್ರಮುಖ ವಿಚಾರಗಳನ್ನು ಚರ್ಚಿಸುತ್ತದೆ. ರಾಜ್ಯನೀತಿಯಲ್ಲಿ ವ್ಯಕ್ತಗೊಳ್ಳುವ ಅಸಮಾನ ಪ್ರಾತಿನಿಧ್ಯದ ಬಗ್ಗೆ ಚರ್ಚಿಸುತ್ತ ಅಂಚಿನ ಸಮುದಾಯಗಳು ರಾಜಕೀಯ ಪ್ರಾತಿನಿಧ್ಯವನ್ನು ಪಡೆದುಕೊಳ್ಳಲು ಬೇಕಾದ ಅವಶ್ಯಕತೆಯನ್ನು ವಿಮರ್ಶಾತ್ಮಕವಾಗಿ ಪರಿಚಯಿಸುವ ಪ್ರಯತ್ನವನ್ನು ಇಲ್ಲಿ ಲೇಖಕರು ಮಾಡಿದ್ದಾರೆ. ಆದ್ದರಿಂದ ಈ ಕೃತಿಯು ತುಂಬಾ ಉಪಯುಕ್ತ ಕೃತಿಯಾಗಿದೆ.

ಮೆಹೆತಾ ಜಿ.ಎಸ್., **'ಪಾರ್ಟಿಸಿಪೇಷನ್ ಆಫ್ ವುಮೆನ್ ಇನ್ ಪಂಚಾಯತ್ ರಾಜ್ ಸಿಸ್ಟಮ್',** ನ್ಯೂಡೆಲ್ಲಿ, ಕಾನಿಷ್ಕ ಪಬ್ಲಿಕೇಷನ್, 2002. ಮೆಹೆತಾರವರ ಈ ಗ್ರಂಥವು ಮಹಿಳೆಯ ರಾಜಕೀಯ ವಿಚಾರಗಳ ಮೇಲೆ ಬೆಳಕು ಚೆಲ್ಲುತ್ತದೆ. ಪ್ರಸ್ತುತ ರಾಜಕೀಯವನ್ನು ಗಮನಿಸಿದರೆ ಮಹಿಳೆಯು ರಾಜಕೀಯದಲ್ಲಿ ತನ್ನದೇ ಛಾಪು ಮೂಡಿಸುತ್ತಿದ್ದಾಳೆ. ಆದ ಕಾರಣ ಪ್ರಾಚೀನ ಕಾಲದಲ್ಲಿದ್ದ ಅನಿಷ್ಠಗಳಿಂದ ಮಹಿಳೆಯು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗದೆ ಅನಾಗರೀಕ ಪರಿಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದಳು. ಆದರೆ ನಾಗರೀಕತೆ ಬೆಳೆದಂತೆ ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವ ಅಭಿವೃದ್ಧಿಯಾದಂತೆ ಮಹಿಳೆಯು ಇತರ ವ್ಯವಸ್ಥೆಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾಳೆ. ಉದಾ: ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆ ಶೇ. 33 ರಷ್ಟು ಇದ್ದಂತಹ ಮೀಸಲಾತಿ ಶೇ. 50 ರಷ್ಟು ಹೆಚ್ಚಾಗಿದೆ. ಈ ರೀತಿ ಮೀಸಲಾತಿ ಹೆಚ್ಚಾದ ಪರಿಣಾಮ ಮಹಿಳೆಯು ಇತರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಿಗಿಂತ ರಾಜಕೀಯ ಸ್ಥಿತಿಗತಿಯು ಸುಧಾರಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಮೆಹೆತಾರವರು ತಮ್ಮ ಗ್ರಂಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರು ಪಾಲ್ಗೊಳ್ಳುವುದರ ಬಗ್ಗೆ ಸ್ಥಳೀಯ ಮಟ್ಟದಲ್ಲಿ ಮಹಿಳಾ ನಂಬಿಕೆಯನ್ನು ಪ್ರಬಲಗೊಳಿಸಿದ್ದಾರೆ. ಇಂದು ಹಳ್ಳಿಗಳಲ್ಲಿ ಹಲವಾರು ಸಮಸ್ಯೆಗಳಿದ್ದು ಅಂತಹ ಸಮಸ್ಯೆಗಳನ್ನು ಬಗೆಹರಿಸಲು ಮಹಿಳೆಯು ಶ್ರಮಿಸುತ್ತಿರುವುದನ್ನು ಕಾಣುತ್ತೇವೆ. ಈ ರೀತಿಯಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯಿಂದಾಗಿ ಮಹಿಳೆಯರಲ್ಲಿ ರಾಜಕೀಯ ಜಾಗೃತಿ ಮತ್ತು ಅರಿವು ಉಂಟಾಗಿ ಅವರ ಸಮೀಕರಣಕ್ಕೆ ಕಾರಣವಾಗುತ್ತಿದೆ ಮತ್ತು ಪಂಚಾಯತ್ ವ್ಯವಸ್ಥೆಯು ಸುಸಂಬದ್ಧವಾಗಿ ತನ್ನ ಕಾರ್ಯವನ್ನು ನಿರ್ವಹಿಸಲು ಕಾರಣವಾಗುತ್ತಿದೆ. ಈ ರೀತಿ ಹಲವಾರು ಮಹಿಳಾಪರ ಅಂಶಗಳನ್ನು ಈ ಮೇಲ್ಕಂಡ ಕೃತಿಯು ವಿಶ್ಲೇಷಿಸುವುದನ್ನು ನಾವು ಇಲ್ಲಿ ಮೌಲೀಕರಿಸಬಹುದಾಗಿದೆ.

S. Telukdar, **'Political Transition in the grassroots in tribal India',** Abhijeet publishing house, New Delhi, 1994. ಈ ಕೃತಿಯಲ್ಲಿ ಲೇಖಕರು ಭಾರತದಲ್ಲಿ ಬುಡಕಟ್ಟು ಜನರ ಸ್ಥಿತಿಗತಿಯ ಬಗ್ಗೆ

ನೈಜ ಚಿತ್ರಣವನ್ನು ನೀಡಿದ್ದಾರೆ. ಭಾರತದ ತಳ ಹಂತದ ಆಡಳಿತ ವ್ಯವಸ್ಥೆಯಾದ ಸ್ಥಳೀಯ ಸರ್ಕಾರದಲ್ಲಿ ಬುಡಕಟ್ಟು ಜನರ ಭಾಗವಹಿಸುವಿಕೆಯ ಕುರಿತು ವಿವರಣೆ ನೀಡಿದ್ದು, ಅಧ್ಯಯನ ವಿಷಯಕ್ಕೆ ಮಾಹಿತಿಯನ್ನು ಒದಗಿಸುತ್ತದೆ.

Padhi and Tripathy, **'Voting behaviour of tribals in India',** Discovery publishing house New Delhi, 1994. ಈ ಕೃತಿಯ ಲೇಖಕರಾದ ಪಾಡಿ ಮತ್ತು ತ್ರಿಪಾತಿರವರು ಬುಡಕಟ್ಟು ಜನರ ಮತದಾರರ ವರ್ತನೆಯನ್ನು ಕುರಿತು ಅಧ್ಯಯನವನ್ನು ನಡೆಸಿದ್ದು, ಈ ಅಧ್ಯಯನವು ಬುಡಕಟ್ಟು ಜನರಿಗಿರುವ ರಾಜಕೀಯ ಜ್ಞಾನವನ್ನು ಕುರಿತು ವಿವರಣೆ ನೀಡುತ್ತದೆ. ಅವರ ಭಾಗವಹಿಸುವಿಕೆ, ರಾಜಕೀಯ ಅನನ್ಯತೆ ಕುರಿತು ವಿವರಣೆ ನೀಡುತ್ತದೆ. ಅಲ್ಲದೇ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಬುಡಕಟ್ಟು ಜನರ ಭಾಗವಹಿಸುವಿಕೆ ಕುರಿತು ವಿವರಣೆ ನೀಡುತ್ತದೆ. ಆದ್ದರಿಂದ ಈ ಕೃತಿಯು ಅಧ್ಯಯನ ವಿಷಯಕ್ಕೆ ಮಾಹಿತಿಯನ್ನು ಒದಗಿಸುತ್ತದೆ.

ಕೆ.ಪಿ. ಕರುನಾಕರನ್ ಅವರ **'Religion and Political Awakening in India'** ಮಿನಾಕ್ಷಿ ಪ್ರಕಾಶನ ಮಿರತ, 1965 ಎಂಬ ಕೃತಿಯು ಭಾರತದಲ್ಲಿ ರಾಜಕೀಯಕ್ಕೂ ಮತ್ತು ಧರ್ಮ, ಜಾತಿ, ಜನಾಂಗಕ್ಕೂ ಇರುವ ಪರಸ್ಪರ ಸಂಬಂಧವನ್ನು ಎತ್ತಿ ತೋರಿಸುತ್ತದೆ. ಜನಾಂಗಗಳು ಯಾವ ಆಧಾರವನ್ನಿಟ್ಟುಕೊಂಡು ರಾಜಕೀಯದಲ್ಲಿ ಸಕ್ರಿಯವಾಗಿವೆ ಎನ್ನುವದನ್ನು ಮಾತ್ರ ಈ ಗ್ರಂಥದಲ್ಲಿ ಕಾಣಬಹುದಾಗಿದೆ.

ಲಕ್ಷ್ಮಿದೇವಿ ಎಲ್., **'ಬೇಟೆ ಪರಂಪರೆ ಬೇಡರ ಸಂಸ್ಕೃತಿ',** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010. ಎಂಬ ಕೃತಿಯಲ್ಲಿ ಬೇಟೆ ಬೇಡರ ಸ್ವಯಂ ರಕ್ಷಣೆ ಮತ್ತು ಆಹಾರ ನಿರ್ವಹಣೆಗೆ ಅನಿವಾರ್ಯವಾಗಿತ್ತೆ ಹೊರತು ವ್ಯಾಪಾರ ಉದ್ಯಮವಾಗಿರಲಿಲ್ಲ. ಊರುಗಳಲ್ಲಿ ನೆಲೆ ನಿಂತ ಹಂತದಲ್ಲಿ ಬೇಡರು ಕೃಷಿ, ಪಶುಪಾಲನೆ ಮತ್ತಿತರ ವೃತ್ತಿಗಳ ಮೇಲೆ ಅವಲಂಬಿತವಾದಾಗಲೂ ಬೇಟೆಯನ್ನು ಆಚರಣೆಯಾಗಿ ರೂಢಿಸಿಕೊಂಡವರು. ಇಂತಹ ಸಮುದಾಯವನ್ನು ಮಾನವ ಸಂಸ್ಕೃತಿ ಮತ್ತು ಬೇಟೆಯ ಸಂಸ್ಕೃತಿಗಳೆರಡರ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು ಎಂಬುವುದಾಗಿ ಲೇಖಕರು ಹೇಳುತ್ತಾರೆ. ಹಾಗಾಗಿ ಬೇಡ ನಾಯಕರಿಗೆ ಬೇಟೆಯೆಂಬುದು ಬದುಕಿನ ಅವಿಭಾಜ್ಯ ಅಂಗವೆಂಬುವುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಡಾ. ಪಾರ್ವತಮ್ಮ ಸಿ., **"ಆದಿವಾಸಿ ಸಮುದಾಯಗಳ ಅಭಿವೃದ್ಧಿ"** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಥಮ ಮುದ್ರಣ–2007ರ ಪುಟ ಸಂಖ್ಯೆ 1ರಿಂದ 89ರಲ್ಲಿ ಬುಡಕಟ್ಟು ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ. ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಅಧ್ಯಯನವಾಗಿದೆ. ಹಾಗೆಯೇ ಎಸ್.ಸಿ/ಎಸ್.ಟಿ ಗುಂಪಿಗೆ ಬೇರೆ ಜಾತಿಗಳು ಸೇರುತ್ತಿರುದರಿಂದ ಸಾಮಾಜಿಕ, ಆರ್ಥಿಕ ಸಮಸ್ಯೆಗಳು ದ್ವಿಗುಣಗೊಳ್ಳುತ್ತಿವೆ ಎಂದು ಹೇಳಬಹುದು. ಮೀಸಲಾತಿಯ

ಸವಲತ್ತುಗಳನ್ನು ಪಡೆಯಲು ಕೆಲವು ಸಮುದಾಯಗಳು ಸರ್ಕಾರದ ಮೇಲೆ ಒತ್ತಡವನ್ನು ಹೇರುತ್ತಿವೆ. ಇದರಿಂದಾಗಿ SC/ST ಸಮುದಾಯಗಳು ಬಡತನದ ಯಥಾಸ್ಥಿತಿಯಲ್ಲಿ ಮುಂದುವರಿಯ ಬೇಕಾಗುತ್ತದೆ ಎಂಬ ಆತಂಕವನ್ನು ಈ ಗ್ರಂಥದಲ್ಲಿ ಕಾಣಬಹುದಾಗಿದೆ.

ಪ್ರಭಾಕರ ಎ.ಎಸ್., ಸಂಪಾದಕರು, **"ಆದಿವಾಸಿ ಆಖ್ಯಾನ"** ಸಮುದಾಯಗಳ ಅಧ್ಯಯನಕ್ಕೊಂದು ಆಕರ, ಪ್ರಕಾಶನ ಸಿದ್ಧಾರ್ಥ, ಹೊಸಪೇಟೆ, ಪ್ರಥಮ ಮುದ್ರಣ–2006, ಎಂಬ ಗ್ರಂಥದಲ್ಲಿ ವಿಧಾನ, ಆಖ್ಯಾನ, ಕಥನ, ವರ್ತಮಾನ ಮತ್ತು ಅಭಿವೃದ್ಧಿ ಎಂಬ ಶೀರ್ಷಿಕೆಯಡಿಯಲ್ಲಿ 52 ಲೇಖನಗಳಿವೆ. 'ವಿಧಾನ' ಎಂಬ ಭಾಗದಲ್ಲಿ ಸಮುದಾಯ ಅಧ್ಯಯನಗಳ ಶೈಕ್ಷಣಿಕ ವಿಧಾನವನ್ನು ಕುರಿತ ಲೇಖನಗಳಿವೆ. 'ಆಖ್ಯಾನ' ಎಂಬ ಭಾಗದಲ್ಲಿ ಆದಿವಾಸಿಗಳ ಬದುಕನ್ನು ವಿವರಿಸುವ ಲೇಖನಗಳಿವೆ. 'ಕಥನ' ಭಾಗದಲ್ಲಿ ಆದಿವಾಸಿಗಳ ಮೌಖಿಕ ಸಾಹಿತ್ಯ ಕುರಿತ ವಿಮರ್ಶಾತ್ಮಕ ಬರಹಗಳಿವೆ. 'ವರ್ತಮಾನ' ಎಂಬ ಭಾಗದಲ್ಲಿ ಪ್ರಸ್ತುತ ಆದಿವಾಸಿಗಳು ಯಾವೆಲ್ಲ ಸಂಕಟಗಳನ್ನು ಎದುರಿಸುತ್ತಿದ್ದಾರೆ? ಎಂಬ ಕುರಿತಾದ ಲೇಖನಗಳಿವೆ. ಅಭಿವೃದ್ಧಿ ಭಾಗದಲ್ಲಿ ಆದಿವಾಸಿಗಳ ಅಭಿವೃದ್ಧಿಯ ಕುರಿತ ಲೇಖನಗಳಿವೆ. ಈ ಎಲ್ಲಾ ಭಾಗಗಳಿಂದಲೂ ನನ್ನ ಪ್ರಬಂಧಕ್ಕೆ ತುಂಬಾ ಸಹಾಯಕವಾಗಿರುವುದರಿಂದ ಈ ಗ್ರಂಥವನ್ನು ಅಧ್ಯಯನ ಮಾಡಲಾಗಿದೆ.

ಡಾ. ಪೂಜಾರಹಳ್ಳಿ ವೀರಪಾಕ್ಷಿ, ಸಂಪಾದಕರು, **"ಚಿನ್ನಹಗರಿ ಸಿರಿ"** ಪ್ರಕಟಣೆ ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ಪ್ರಥಮ ಮುದ್ರಣ–2006, ಎಂಬ ಪುಸ್ತಕದಲ್ಲಿ ವಾಲ್ಮೀಕಿ ಸಮುದಾಯದ ಚಾರಿತ್ರೆ, ಬುಡಕಟ್ಟು ಸಂಸ್ಕೃತಿ, ಧಾರ್ಮಿಕ–ವೈಚಾರಿಕ ಲೇಖನಗಳನ್ನು ಮತ್ತು ಈ ಸಮುದಾಯ ನಾಯಕರ ವ್ಯಕ್ತಿ ಚಿತ್ರಣವನ್ನು ವಿವರಿಸಿದ್ದಾರೆ. ಅದರಲ್ಲಿ "ಹಿಂದುಳಿದ ವರ್ಗಗಳ ಬೈಬಲ್ ಎಲ್.ಜಿ. ಹಾವನೂರರವರ ವರದಿಯನ್ನು ಈ ಪುಸ್ತಕವು ತಿಳಿಸಿಕೊಡುತ್ತದೆ. ನನಗೆ ಈ ಪುಸ್ತಕವೂ ಇಡೀ ವಾಲ್ಮೀಕಿ ಸಮುದಾಯ ಚರಿತ್ರೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಮತ್ತು ನನ್ನ ಸಂಶೋಧನಾ ಪ್ರಬಂಧಕ್ಕೆ ಪೂರಕವಾಗಿದೆ.

ಹರೀಶ್ ಕುಮಾರ್ ವಿ., ಸಂಪಾದಕರು, **"ಮೂಕ ನಾಯಕ"** ಪ್ರಕಾಶಕರು ಅವಿರಕ್ತ ಪುಸ್ತಕ, ಬೆಂಗಳೂರು. ಪ್ರಥಮ ಮುದ್ರಣ–2018 ಎಂಬ ಪುಸ್ತಕದಲ್ಲಿ ಸಿ.ಎಸ್. ದ್ವಾರಕಾನಾಥರವರ 'ಚುನಾವಣೆ ಜಾತಿ ಲೆಕ್ಕಚಾರದ ನೋಟ' (20, ಮಾರ್ಚ್ 2009), ಪುಟ ಸಂಖ್ಯೆ 221ರಿಂದ 225ರಲ್ಲಿ ಗಮನಿಸಿದಾಗ ಜಾತಿ ರಾಜಕಾರಣವೆಂಬುದು ಪ್ರಸ್ತುತ ಸಂದರ್ಭದಲ್ಲಿ ಎಷ್ಟು ಮಹತ್ವವನ್ನು ಪಡೆದುಕೊಳ್ಳುತ್ತದೆ ಮತ್ತು ಜಾತಿ ಸಂಖ್ಯಾಬಲದಿಂದ ಅಧಿಕಾರ ಮತ್ತು ರಾಜಕೀಯ ಲಾಭವನ್ನು ಪಡೆದುಕೊಳ್ಳುತ್ತೀವೆ ಎಂದು ಇದರ ಮೂಲಕ ಗೊತ್ತಾಗುತ್ತದೆ. ಹಾಗೆಯೇ ಬಹುಜನ ಜಾತಿಗಳು ಸಂಘಟಿತರಾಗಿರುವುದರಿಂದ ರಾಜಕಾರಣದಿಂದ ದೂರವೇ ಉಳಿದಿದ್ದಾರೆ. ಬಲಿಷ್ಠ ಜಾತಿಗಳು ರಾಜಕೀಯದ ಸೂತ್ರವನ್ನಡಿದು ರಾಜ್ಯವಾಳುತ್ತಿವೆ ಎಂಬ ಅಂಶ ಕಂಡುಬಂದಿದೆ.

ಪ್ರೊ. ನಾರಾಯಣ ಕಿಕ್ಕೇರಿ, ಸಂಪಾದಕರು, **"ಬುಡಕಟ್ಟು ಸಂಸ್ಕೃತಿ"** ಪ್ರಕಾಶಕರು ಅರುಹು ಕುರುಹು, ಮೈಸೂರು. ಪ್ರಥಮ ಮುದ್ರಣ–2011 ಎಂಬ ಪುಸ್ತಕದ ಪುಟ ಸಂಖ್ಯೆ 126ರಿಂದ 136ರಲ್ಲಿ "ಬುಡಕಟ್ಟು ಜನಾಂಗದ ಅತಂತ್ರ ಸ್ಥಳಾಂತರ" ಡಾ. ಮುಜಾಫ್ಫರ್ ಅಸ್ಸಾದಿಯವರ ಲೇಖನ, ಇಲ್ಲಿ ಗಮನಿಸಿದಾಗ ಬುಡಕಟ್ಟು ಜನಾಂಗದವರನ್ನು ಸ್ಥಳಾಂತರ ಮಾಡಿದ ಪರಿಣಾಮವಾಗಿ ಅವರ ಸಂಸ್ಕೃತಿ ನಾಶ. ಧಾರ್ಮಿಕ ನಂಬಿಕೆಗಳು ಅವರಿಂದ ದೂರವಾಗುತ್ತವೆ ಹಾಗೇ ಅವರ ಜೀವನಕ್ರಮದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ, ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಉದಾರಹಣೆಗೆ ಇತ್ತೀಚೆಗೆ ದಿಡ್ಡಳ್ಳಿ ಆದಿವಾಸಿಗಳನ್ನು ಅರಣ್ಯದಿಂದ ಒಕ್ಕಲೆಬ್ಬಿಸಿದ್ದಾರೆ. ಇದರಿಂದಾಗಿ ಬದುಕು ಮತ್ತು ಭೂಮಿಯನ್ನು ಕಳೆದುಕೊಂಡ ಆದಿವಾಸಿಗಳು ವಾಸಿಸಲು ಪರದಾಡುವಂತಾಗಿದೆ.

ಮೂಲ: ಜಗ ಜೀವನ ರಾಮ, ಕನ್ನಡಕ್ಕೆ ರಾಹು, **"ಜಾತಿ ವ್ಯವಸ್ಥೆ: ಸಮಸ್ಯೆ–ಸವಾಲುಗಳು"** ಪ್ರಕಾಶನ ಲಡಾಯಿ, ಗದಗ, ಎರಡನೇ ಮುದ್ರಣ–2013, 'ಮೀಸಲಾತಿ' ಪುಟಸಂಖ್ಯೆ 96ರಿಂದ 107ರಲ್ಲಿ ಸಹಸ್ರಾರು ವರ್ಷಗಳಿಂದ ಸಾಮಾಜಿಕ ತಾರತಮ್ಯಗಳಿಂದ ಶೋಷಣೆಗೆ ಒಳಗಾದ ಜನರಿಗೆ ಮೀಸಲಾತಿ. ಸೌಲಭ್ಯದ ಮೂಲಕ ಅವರನ್ನು ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಎಲ್ಲಾ ಅವಕಾಶಗಳನ್ನು ಪಡೆದುಕೊಳ್ಳವಂತಾಗಿದೆ. ಸಂವಿಧಾನದ 16ನೇ ಮತ್ತು 335ನೇ ವಿಧಿಗಳಡಿಯಲ್ಲಿ SC/STಗಳಿಗೆ ಸಾರ್ವಜನಿಕ ಸೇವೆಗಳಲ್ಲಿ ಮೀಸಲಾತಿ ಒದಗಿಸಲಾಗಿದೆ. ಇತ್ತೀಚೆಗೆ ಮೀಸಲಾತಿಯನ್ನು ತೆಗೆದು ಹಾಕುವ ಪ್ರಯತ್ನಗಳು ಕೂಡ ನಡೆಯುತ್ತಿದೆ ಎಂಬುದನ್ನು ಗಮನಿಸಬೇಕಾದ ಅಂಶವಾಗಿದೆ. ಇಲ್ಲಿ ಈ ಲೇಖನದ ಒಟ್ಟು ಸಾರಾಂಶವೆಂದರೆ ಸಾಮಾಜಿಕ ನ್ಯಾಯ ಒದಗಿಸುವುದಾಗಿದೆ.

ಡಾ. ಪೋತೆ ಎಚ್.ಟಿ. ಮತ್ತು ಡಾ. ಸಿಂಧೆ ಜನಗ್ನಾಥ **"ಮೀಸಲಾತಿ; ಸಮಸ್ಯೆ–ಸವಾಲುಗಳು"** ಪ್ರಕಾಶನ ತಿಪ್ಪಣ್ಣಂಬು, ಗುಲಬರ್ಗ, ಪ್ರಥಮ ಮುದ್ರಣ–2000. "ಮೀಸಲಾತಿ: ಒಂದು ಅವಲೋಕನ; ಡಾ. ಬಿ. ಮುನಿವೆಂಕಟಪ್ಪರವರ ಲೇಖನದ ಪುಟ ಸಂಖ್ಯೆ 95ರಿಂದ 27ರಲ್ಲಿ ಮೀಸಲಾತಿಯ ಉದ್ದೇಶವನ್ನು ಮೀಸಲಾತಿಗಾಗಿ ನಡೆದ ಚಳವಳಿಗಳು (ಕರ್ನಾಟಕ), 1930ರ ನವೆಂಬರ್‌ನಲ್ಲಿ ಲಂಡನ್‌ನಲ್ಲಿ ನಡೆದ ಪ್ರಥಮ ದುಂಡು ಮೇಜಿನ ಪರಿಷತ್ತುಗಳನ್ನು ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. ಮೀಸಲಾತಿ ವಿರೋಧಿ ಚಳವಳಿ ಮತ್ತು ವಿವಿಧ ಇಲಾಖೆಗಳಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ನೀಡಿ ಸರ್ಕಾರಿ ನೌಕರಿಗಳನ್ನು ಪಡೆಯುತ್ತಿರುವುದರ ಬಗ್ಗೆ ವಿಷಾದವನ್ನು ಈ ಲೇಖನ ವ್ಯಕ್ತಪಡಿಸುತ್ತಾ, ಜಾತಿ–ಉಪಜಾತಿಗಳಲ್ಲಿ ಒಳ ಮೀಸಲಾತಿಯ ಜಗಳ ಹಾಗೂ ಬಡ್ತಿ ಮೀಸಲಾತಿಗೆ ಸರ್ಕಾರಗಳ ದಲಿತ ವಿರೋಧಿ ನೀತಿಗಳು, ಮೀಸಲಾತಿ ಸೌಲಭ್ಯ ರದ್ದುಪಡಿಸುವಂತ ಮಾತುಗಳು ಕೇಳಿ ಬರುತ್ತಿವೆ. ಮೀಸಲಾತಿವೆಂಬುದು ದಲಿತ ಹಾಗೂ ಹಿಂದುಳಿದ ಸಮುದಾಯಗಳಿಗೆ ನೀಡಿರುವ ಸಂವಿಧಾನಿಕ

ಹಕ್ಕುವೆಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು ಎಂಬ ಸಾರಾಂಶವನ್ನು ಈ ಲೇಖನ ಪ್ರಸ್ತಾಪಿಸುತ್ತದೆ.

ಡಾ. ಬೇವಿನಕಟ್ಟೆ ಮಂಜುನಾಥ, ಸಂಪಾದಕರು, **"ವ್ಯಾಧ ಚರಿತೆ"** ಬೇಡ ಕುಲಮೂಲದ ಕಥನಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರಥಮ ಮುದ್ರಣ–2007 ಎಂಬ ಪುಸ್ತಕದ ಪುಟ ಸಂಖ್ಯೆ 1ರಿಂದ 238ರಲ್ಲಿ ನನ್ನ ಸಂಶೋಧನೆಗೆ ಉಪಯುಕ್ತವಾದ ಮಾಹಿತಿಯನ್ನು ತಿಳಿಸಿಕೊಡುತ್ತದೆ. ಇಲ್ಲಿ ನೋಡುವುದಾದರೆ ನಾಯಕ ಜನಾಂಗದ ಉಗಮ ಮತ್ತು ವಿನಾಶ. ಪ್ರಾಚೀನ ಕಾಲದಿಂದಲೂ ಬೇಡ ಜನಾಂಗದ ವಿವರಣೆಗಳು, ಈ ಜನಾಂಗದ ಮೂಲ, ಇತಿಹಾಸವನ್ನು ವಿವರಿಸುತ್ತ ಕರ್ನಾಟಕದಲ್ಲಿ ಅವರನ್ನು ಗುರುತಿಸುವ ರೀತಿ ಹೇಗೆ ಅನೇಕ ರೂಪಾಂತರಗಳಿಂದ ವಾಲ್ಮೀಕಿ ಜನಾಂಗದ ವಿಶ್ಲೇಷಣೆಯನ್ನು ಇಲ್ಲಿ ಗಮನಿಸಬಹುದು. ಮತ್ತು ಇದೇ ಪುಸ್ತಕದಲ್ಲಿ ಈ ಜನಾಂಗದ ಮೂಲದ ಬಗ್ಗೆ ಅನೇಕ ವಿದ್ವಾಂಸರ ಲೇಖನಗಳಿಂದ ಇವರನ್ನು ಗುರುತಿಸಲಾಗಿದೆ.

ಸಿನ್ಹ ಕೆ.ಎಸ್., **"ದಿ ಷೆಡ್ಯೂಲ್ಡ್ ಟ್ರೈಬ್ಸ್ ಪಿಪಲ್ ಆಫ್ ಇಂಡಿಯಾ ನ್ಯಾಷನಲ್ ಸಿರೀಸ್",** ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ–1954. ಈ ಕೃತಿಯಲ್ಲಿ ಭಾರತ ಸಂವಿಧಾನವು ಬುಡಕಟ್ಟುಗಳನ್ನು 342ನೇ ಪರಿಚ್ಛೇದದಲ್ಲಿ ಪರಿಶಿಷ್ಟ ಪಂಗಡಗಳು ಅಥವಾ ಪರಿಶಿಷ್ಟ ಬುಡಕಟ್ಟುಗಳು ಎಂದು ಉಲ್ಲೇಖಿಸಿದೆ. ಹಾಗೆಯೇ 1933ರಲ್ಲಿ ಭಾರತ ಸರ್ಕಾರದ ಕಾಯ್ದೆಯು ಪರಿಶಿಷ್ಟ ಪಂಗಡಗಳ ಸಂರಕ್ಷಣೆಗಾಗಿ ಮೀಸಲಾತಿ ನೀತಿ ಧೋರಣೆಯನ್ನು ಅನುಸರಿಸುವ ನಿರ್ಧಾರ ಮಾಡಲಾಯಿತು ಎಂಬುದನ್ನು ಅಂತೆಯೇ ಸಂವಿಧಾನದ ಅನುಚ್ಛೇಧ 46ರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಆರ್ಥಿಕ ಸಾಮಾಜಿಕ ನ್ಯಾಯವನ್ನು ಒದಗಿಸಿ ಶೋಷಣೆಯಿಂದ ರಕ್ಷಣೆಯನ್ನು ನೀಡಿದೆ ಹಾಗೂ ಅನೇಕ ಆಯೋಗಗಳನ್ನು ನೇಮಕ ಮಾಡಿ ಹಿಂದುಳಿದ ವರ್ಗಗಳಿಗೆ ಪೂರಕವಾಗುವಂತೆ ಶಿಫಾರಸ್ಸು ನೀಡಲು ಸೂಚಿಸಿದೆ ಅವುಗಳೆಂದರೆ 1918ರಲ್ಲಿ ಸರ್ ವೆಲ್ಲಸ್ಲಿ ಸಮಿತಿ, 1960ರಲ್ಲಿ ನಾಗನಗೌಡ ಸಮಿತಿ 1975ರಲ್ಲಿ ಹಾವನೂರು ಆಯೋಗ, 1983ರಲ್ಲಿ ವೆಂಕಟಸ್ವಾಮಿ ಆಯೋಗ, 1990ರಲ್ಲಿ ಚಿನ್ನಪ್ಪರೆಡ್ಡಿ ಆಯೋಗಗಳು ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸುವಲ್ಲಿ ಪ್ರಮುಖ ಪಾತ್ರವಹಿಸಿರುವುದನ್ನು ಈ ಕೃತಿಯಲ್ಲಿ ತಿಳಿಸಲಾಗಿದೆ. ಆದ್ದರಿಂದ ನನ್ನ ಸಂಶೋಧನಾ ಅಧ್ಯಯನಕ್ಕೆ ತುಂಬಾ ಉಪಯುಕ್ತವಾಗಿದೆ.

Hutton J.H., **'Caste in India its nature, function and origins'** published by John Brown, Bombay Fourth Edition, 1963. ಈ ಕೃತಿಯಲ್ಲಿ ಜಾತಿ ಪದದ ಉಗಮದ ಬಗ್ಗೆ ಮತ್ತು ಜಾತಿ ಪದ್ಧತಿಯ ಸಾಮಾಜಿಕ ಸ್ತರ ವಿನ್ಯಾಸದ ವಿಶಿಷ್ಟ ಬಗೆ. ಇದು ಪ್ರಾಚೀನ ಮತ್ತು ಆಧುನಿಕ ಭಾರತೀಯ ಸಮಾಜದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಜಾತಿ ಪದ್ಧತಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ಜಾತಿಗಳು ಚತುರ್ವರ್ಣಗಳಿಂದ ಉಗಮಗೊಂಡಿದ್ದು, ಆಮೇಲೆ ನೂರಾರು ಉಪಜಾತಿಗಳಾಗಿ

ವಿಭಾಗಿಸಲ್ಪಟ್ಟಿವೆ ಇತ್ಯಾದಿ ವಿಚಾರಗಳ ಬಗ್ಗೆ ಈ ಕೃತಿಯಲ್ಲಿ ತಿಳಿಸಲಾಗಿದೆ. ಆದ್ದರಿಂದ ಈ ಒಂದು ಕೃತಿಯು ನನ್ನ ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತದೆ. ಆದ ಕಾರಣ ಇದನ್ನು ಪರಾಮರ್ಶೆ ಮಾಡಲಾಗಿದೆ.

ಆರಾಧ್ಯ ಬಿ.ಎಂ.ಎಂ., **'ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆಗಳು',** ಟಿಪ್ಪು ಪ್ರಕಾಶನ, ಬೆಂಗಳೂರು, 1985. ಈ ಸಾಹಿತ್ಯ ಕೃತಿಯಲ್ಲಿ ಲೇಖಕರು ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ರಕ್ಷಣೆ ಅಗತ್ಯ. ಸಮಾಜದಲ್ಲಿ ಪರಿಶಿಷ್ಟ ಜನಾಂಗಕ್ಕೆ ಈ ರಕ್ಷಣೆ ಇರಲಿಲ್ಲ ಹಾಗೂ ರಾಜಕೀಯ ರಕ್ಷಣೆ ಇಲ್ಲದಿದ್ದರೆ ಅವರ ಸ್ವಾತಂತ್ರ್ಯ ಮತ್ತು ಪೌರ ಹಕ್ಕುಗಳನ್ನು ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿಯವರಿಗೆ ಸಂವಿಧಾನದಲ್ಲಿ ಅನೇಕ ಹಕ್ಕು ಹಾಗೂ ಸೌಲಭ್ಯಗಳನ್ನು ದೊರಕಿಸಿಕೊಟ್ಟಿರುವುದರ ಬಗ್ಗೆ ತಿಳಿಸಿ ಭಾರತ ಸಂವಿಧಾನದ ವಿಧಿಗಳ ಮೂಲಕ ನಿರೂಪಿಸಲಾಗಿದೆ ಎಂದಿದ್ದಾರೆ.

ಬಾಟಿಯಾ ಕೆ.ಎಲ್., **"ಡಾ.ಬಿ.ಆರ್ ಅಂಬೇಡ್ಕರ್ ಸೋಶಿಯಲ್ ಜಸ್ಟೀಸ್ ಅಂಡ್ ದಿ ಇಂಡಿಯನ್ ಕಾನ್‌ಸ್ಟಿಟ್ಯೂಷನ್",** ಶಿವಾಜಿ ಎಂಟರ್‌ಪ್ರೈಸಸ್, ನ್ಯೂಡೆಲ್ಲಿ–1994. ಈ ಗ್ರಂಥದಲ್ಲಿ ಪರಿಶಿಷ್ಟ ಪಂಗಡಗಳ ಮತ್ತು ಪರಿಶಿಷ್ಟ ಜಾತಿಯವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸುವಲ್ಲಿ ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದವರೆಗೂ ಅನೇಕ ಸಮಾಜ ಸುಧಾರಕರು, ಸುಧಾರಣೆಗಳು, ಚಳುವಳಿಗಳನ್ನು ನಡೆಸಿದ್ದಾರೆ. ಬುದ್ಧ, ಬಸವೇಶ್ವರರು, ಅಂಬೇಡ್ಕರ್, ಕನಕದಾಸರು, ರಾಜಾ ರಾಮ್ ಮೋಹನ್‌ರಾಯ್, ವಿವೇಕಾನಂದ, ಮಹಾತ್ಮಪುಲೆ, ನಾರಾಯಣ ಗುರು, ಗಾಂಧೀಜಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅಂತೆಯೇ ಭಾರತ ಸಂವಿಧಾನದ ಪರಿಚ್ಛೇದ 14,15,16 ಮತ್ತು 17ನೇ ರಾಜ್ಯ ನೀತಿ ನಿದೇಶಕ ತತ್ವಗಳಲ್ಲಿ 19,39,45,46 ವಿಧಿಗಳೊಂದಿಗೆ 242ಡಿ 242,330,332,338 ವಿಧಿಗಳು ಸಾಮಾಜಿಕ ನ್ಯಾಯದ ಕುರಿತು ಬೆಳಕು ಚೆಲ್ಲಿದೆ. ಈ ಕೃತಿಯಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಸಮಾಜ ಸುಧಾರಕರ ಚಳುವಳಿಗಳು ಸಂವಿಧಾನದ ಅವಕಾಶಗಳನ್ನು ಚರ್ಚಿಸಲಾಗಿದೆ.

ಡಾ. ಮಲ್ಲಿಕಾರ್ಜುನ ಮೇಟಿ, ಸಂಪಾದಕರು, **"ಸಬಾಲ್ಟರ್ನ್ ಓದು"** ಅರುಹು ಕುರುಹು, ಪ್ರಕಾಶಕರು, ಬೆಂಗಳೂರು–2012 ಈ ಗ್ರಂಥವನ್ನು ಗಮನಿಸಿದಾಗ ಅಂಚಿಗೆ ತಳಲ್ಪಟ್ಟಂತಹ ಸಮುದಾಯಗಳ ಸಂಸ್ಕೃತಿ, ಚರಿತ್ರೆ, ಸಾಹಿತ್ಯ, ಭಾಷೆ ಎಂಬಿತ್ಯಾದಿ ನೆಲೆಗಳಲ್ಲಿ ಅಲಕ್ಷಿತ ಸಮುದಾಯಗಳ ಗುರುತಿನ ನೆಲೆಗಳನ್ನು ಅರಿಯುವ ಬಗೆ ಹೇಗೆ, ಅವರ ರಾಜಕೀಯ ಅಸ್ಮಿತೆಯನ್ನು ರೂಪಿಸಿಕೊಳ್ಳುವುದು ಹೇಗೆ? ಈ ಮೂಲಕ ಅಲಕ್ಷಿತ ಸಮುದಾಯಗಳನ್ನು ಗುರುತಿಸುವ 'ಗುರುತಿನ ರಾಜಕಾರಣ'ವೊಂದು ಬೆಳೆದು ಬಂದ ರೀತಿ, ಈ ಬಗೆಯ ತಾತ್ವಿಕ ನೆಲೆಯಿಂದ ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ಚಹರೆಗಳನ್ನು

ಗುರುತಿಸುವ ಹಾಗೂ ಅವುಗಳನ್ನು ಮುಖ್ಯವಾಹಿನಿಗೆ ತರುವ ಕಾರ್ಯಕ್ರಮವೇ ಸಬಾಲ್ಟರ್ನ್ ಓದಿನ ಮುಖ್ಯ ಉದ್ದೇಶವಾಗಿದೆ. ಇಂತಹ ಅಲಕ್ಷಿತ ಸಮುದಾಯಗಳಲ್ಲಿ ವಾಲ್ಮೀಕಿ ಸಮುದಾಯವು ಒಂದಾಗಿದ್ದು, ರಾಜಕೀಯ ಅಧಿಕಾರದಿಂದ ಈ ಸಮುದಾಯವನ್ನು ಕಡೆಗಣಿಸಲಾಗುತ್ತಿದೆ. ಆದ್ದರಿಂದ ಈ ಅಧ್ಯಯನವು ನನ್ನ ಸಂಶೋಧನಾ ಅಧ್ಯಯನಕ್ಕೆ ತುಂಬಾ ಸಹಕಾರಿಯಾಗಿದೆ.

ಈ ಮೇಲೆ ಚರ್ಚಿಸಿದ ಕೃತಿಗಳಲ್ಲದೆ ಹಲವು ಪುಸ್ತಕಗಳು, ಗ್ರಂಥಗಳು, ಲೇಖನಗಳು ವಾಲ್ಮೀಕಿ ಸಮುದಾಯದ ಇತಿಹಾಸ ಮತ್ತು ರಾಜಕೀಯ ಭಾಗವಹಿಸುವಿಕೆಯ ಕುರಿತಾಗಿ ಮಾಹಿತಿಯನ್ನು ಒದಗಿಸುವಲ್ಲಿ ಸಹಕಾರಿಯಾಗಿವೆ.

5. ಸಂಶೋಧನಾ ಅಂತರ (ಗ್ಯಾಪ್):

ರಾಜಕೀಯ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಅನೇಕ ಸಂಶೋಧನಾ ಅಧ್ಯಯನಗಳು ನಡೆದಿದ್ದರೂ/ ಕೈಗೊಳ್ಳಲಾಗಿದ್ದರೂ ಸಹ ಇದುವರೆಗೆ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಕುರಿತಾಗಿ ರಾಜ್ಯಶಾಸ್ತ್ರದಲ್ಲಿ ವೈಜ್ಞಾನಿಕವಾಗಿ ಕ್ಷೇತ್ರಕಾರ್ಯದ ಮೂಲಕ ಯಾವುದೇ ಅಧ್ಯಯನಗಳು ನಡೆದಿರುವುದಿಲ್ಲ. ಆ ಕೊರತೆಯನ್ನು ಈ ಸಂಶೋಧನಾ ಅಧ್ಯಯನದ ಮೂಲಕ ಪೂರ್ಣಗೊಳಿಸುವ ಪ್ರಯತ್ನದ ಫಲವಾಗಿ **"ಕರ್ನಾಟಕದಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳು: ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಒಂದು ತೌಲನಿಕ ಅಧ್ಯಯನ"** (2010 ರಿಂದ 2018) ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಸ್ತುತ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

6. ಪ್ರಾಕ್ ಕಲ್ಪನೆ:

1) ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಗುಣಮಟ್ಟವು ಕುಂದಿದೆ.
2) ತಿಳುವಳಿಕೆಯ ಕೊರತೆಯಿಂದಾಗಿ ವಾಲ್ಮೀಕಿ ಸಮುದಾಯದವರು ಸಮಗ್ರ ಕಲ್ಯಾಣಕ್ಕಾಗಿ ರಾಜಕೀಯವನ್ನು ಸದುಪಯೋಗ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ.
3) ಅನಕ್ಷರತೆ ಮತ್ತು ಬಡತನದಂತಹ ಸಮಸ್ಯೆಗಳಿಂದ ವಾಲ್ಮೀಕಿ ಸಮುದಾಯದವರು ರಾಜಕೀಯ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುತ್ತಿಲ್ಲ.

7. ಅಧ್ಯಯನದ ಪರಿಕಲ್ಪನೆಯ ಚೌಕಟ್ಟು:

ಈ ಸಂಶೋಧನಾ ಅಧ್ಯಯನದುದ್ದಕ್ಕೂ ಉಪಯೋಗಿಸಲ್ಪಟ್ಟಿರುವ ಪರಿಕಲ್ಪನೆಗಳಿಗೆ ಅವುಗಳದೇ ಆದ ವಿಶಿಷ್ಟ ಅರ್ಥವಿದೆ. ಅಧ್ಯಯನದ ಆಂತರಿಕ ತರ್ಕ ಸುಸಂಬದ್ಧತೆ ಮತ್ತು ಖಚಿತತೆಯ ಹಿತದೃಷ್ಟಿಯಿಂದ ಅವುಗಳನ್ನು ವೈಜ್ಞಾನಿಕವಾಗಿ ಅರ್ಥೈಸಿ ವ್ಯಾಖ್ಯಾನಿಸುವುದು ಸಂಶೋಧಕರಿಗೆ ಸಮಂಜಸವೆನಿಸುತ್ತದೆ.

ಆದ್ದರಿಂದ ಅಧ್ಯಯನದುದ್ದಕ್ಕೂ ರೂಪಗೊಂಡು ವಿಕಾಸಗೊಳ್ಳುವ ವಾದ ಸರಣಿಗಳಿಗೆ ಸೈದ್ಧಾಂತಿಕ ಅಡಿಪಾಯ ಮತ್ತು ದಿಕ್ಕು–ದಿಸೆಗಳನ್ನು ಒದಗಿಸುವ ಈ ಪ್ರಯೋಗಾರ್ಹ ಪರಿಕಲ್ಪನೆಗಳು ಈ ಸಂಶೋಧನಾ ಅಧ್ಯಯನಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಹೇಳಬಹುದು. ಈ ಪರಿಕಲ್ಪನೆಯ ಚೌಕಟ್ಟಿನಲ್ಲಿ ಉಪಯೋಗಿಸಲ್ಪಟ್ಟಿರುವ ಪ್ರಮುಖ ಪರಿಕಲ್ಪನೆಗಳಾದ ರಾಜಕೀಯ ಭಾಗವಹಿಸುವಿಕೆ, ಪ್ರಜಾಪ್ರಭುತ್ವ, ಬುಡಕಟ್ಟು ಮತ್ತು ಸಮುದಾಯ ಎಂಬ ಪರಿಕಲ್ಪನೆಗಳನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

- **ರಾಜಕೀಯ ಭಾಗವಹಿಸುವಿಕೆ:**

"ರಾಜಕೀಯ ಭಾಗವಹಿಸುವಿಕೆ" ಎಂಬುವುದು ಇಂಗ್ಲೀಷ್ ಭಾಷೆಯ **"ಪೊಲಿಟಿಕಲ್ ಪಾರ್ಟಿಸಿಪೇಷನ್"** ಎಂಬ ಪದದಿಂದ ಬಂದಿದೆ. ಇದರ ಅರ್ಥ ಎಂದರೆ ರಾಜಕೀಯ ಘಟನೆ ಅಥವಾ ಚಟುವಟಿಕೆಗಳಲ್ಲಿ ಪಾತ್ರ ನಿರ್ವಹಿಸುವುದಾಗಿದೆ. ಭಾಗವಹಿಸುವಿಕೆ ಎಂಬ ಪದಕ್ಕೆ ಸಮಾನಾರ್ಥ ಪದಗಳಾಗಿ ಸಹಭಾಗಿತ್ವ, ಪಾಲ್ಗೊಳ್ಳುವಿಕೆ, ಒಗ್ಗೂಡುವಿಕೆ, ಕೊಡುಗೆ, ಸಹಯೋಗ ಎಂಬ ಪದಗಳನ್ನು ಬಳಸಬಹುದಾಗಿರುತ್ತದೆ. ಒಟ್ಟಿನಲ್ಲಿ ಜನರು ಸಕ್ರಿಯವಾಗಿ ಹಾಗೂ ನಿರಂತರವಾಗಿ ರಾಜಕೀಯ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದನ್ನು ರಾಜಕೀಯ ಭಾಗವಹಿಸುವಿಕೆ ಎಂದು ಕರೆಯಬಹುದಾಗಿದೆ.

1. **ಗೇಬ್ರಿಯಲ್ ಆಲ್ಮಂಡ್ ಮತ್ತು ಪೊವೆಲ್**ರವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. "ಸಾಮಾಜಿಕ ವ್ಯವಸ್ಥೆಯ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಜನತೆ ಪಾಲ್ಗೊಳ್ಳುವುದನ್ನು ರಾಜಕೀಯ ಭಾಗವಹಿಸುವಿಕೆ" [13] ಎಂದು ಅರ್ಥೈಸಿದ್ದಾರೆ.
2. **ವರ್ಬಾ ಮತ್ತು ನೋರ್ಮನ್ ಹೆಚ್. ನೈ**ರವರು "ಸರ್ಕಾರದ ಸಿಬ್ಬಂದಿಗಳ ಆಯ್ಕೆ ಮತ್ತು ಅವರ ಚಟುವಟಿಕೆಗಳ ಮೇಲೆ ಹೆಚ್ಚು ಕಡಿಮೆ ನೇರವಾಗಿ ಪ್ರಭಾವ ಬೀರುವಂತೆ ಖಾಸಗಿ ನಾಗರೀಕರು ನಡೆಸುವ ಚಟುವಟಿಕೆಗಳು"[14] ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ.
3. **ಎ ಡಿಕ್ಷನರಿ ಆಫ್ ಮಾಡರ್ನ್ ಪಾಲಿಟಿಕ್ಸ್ ಆಂಡ್ ಪೊಲಿಟಿಕಲ್ ಸೋಷಿಯಾಲಜಿ**ಯ ಪ್ರಕಾರ "ರಾಜಕೀಯ ಪಕ್ಷಗಳು, ರಾಜಕೀಯ ಗುಂಪುಗಳು ಹಾಗೂ ಮತದಾರರ ವರ್ಗಗಳ ಮೂಲಕ ಸರ್ಕಾರದ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳಲ್ಲಿ ಪ್ರಜೆಗಳು ಸ್ವತಃ ತಾವೇ ಭಾಗವಹಿಸುವುದಕ್ಕೆ ರಾಜಕೀಯ ಭಾಗವಹಿಸುವಿಕೆ" ಎಂದಿದ್ದಾರೆ.[15]

---

[13] Almond, G.A & Powell. "Comparative Politics: A developmental approach" Amerind Publishing Company: New Delhi, 1973, pp-98

[14] Verba, S. & Nie, N.H. "Participation in America: Political, Democracy and Social Equality" Harper Row: New York, 1972 pp-44

[15] ಸಿಂಗ್, ಬಿ.ಪಿ. "ಎ ಡಿಕ್ಷನರಿ ಆಫ್ ಮಾಡ್ರನ್ ಪಾಲಿಟಿಕ್ಸ್ ಆಂಡ್ ಪೊಲಿಟಿಕಲ್ ಸೋಷಿಯಾಲಜಿ", ಮಿತ್ತಲ್ ಪಬ್ಲಿಕೇಷನ್ಸ್, ನವದೆಹಲಿ, ೧೯೮೭, ಪುಟ– ೨೧೪.

4. **ನೋರ್ಮನ್ ಡಿ, ಪಾಯರ್** ಪ್ರಕಾರ "ನಿರ್ಣಾಯಗಳನ್ನು ಮಾಡುವವರ ನಡುವಳಿಕೆಗಳು ಮತ್ತು ಚಟುವಟಿಕೆಗಳ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರುವ ರಾಜಕೀಯ ಚಟುವಟಿಕೆಗಳಲ್ಲಿ ನಾಗರೀಕರ ಭಾಗವಹಿಸುವಿಕೆಯೇ ರಾಜಕೀಯ ಭಾಗವಹಿಸುವಿಕೆ"[16] ಎಂದಿದ್ದಾರೆ.

- **ಪ್ರಜಾಪ್ರಭುತ್ವ:**

ಪ್ರಜಾಪ್ರಭುತ್ವ ಎಂಬ ಪದವು ಆಂಗ್ಲ ಭಾಷೆಯ 'ಡೆಮಾಕ್ರಸಿ' ಎಂಬ ಪದದ ಕನ್ನಡ ಅನುವಾದವಾಗಿದೆ. ಈ 'ಡೆಮಾಕ್ರಸಿ' ಎಂಬ ಪದವು ಗ್ರೀಕ್ ಭಾಷೆಯ 'ಡೆಮೋಸ್' ಮತ್ತು 'ಕ್ರೇಷಿಯೊ' ಎಂಬ ಪದದಿಂದ ಬಂದಿದೆ.[17] 'ಡೆಮೋಸ್' ಎಂದರೆ ಪ್ರಜೆ ಅಥವಾ ಜನತೆ ಎಂದಾದರೆ 'ಕ್ರೇಷಿಯೊ' ಎಂದರೆ ಅಧಿಕಾರ, ಬಲ ಎಂಬುದಾಗಿದೆ. ಆದ್ದರಿಂದ ಪ್ರಜಾಪ್ರಭುತ್ವವೆಂದರೆ 'ಪ್ರಜೆಗಳ ಅಧಿಕಾರ' ಎಂದರ್ಥ. ಸಾಮಾನ್ಯವಾಗಿ ಯಾವ ಸರ್ಕಾರ ಪದ್ಧತಿಯಲ್ಲಿ ಪರಮಾಧಿಕಾರವು ಪ್ರಜೆಗಳಲ್ಲಿರುತ್ತದೋ ಆ ಪದ್ಧತಿಯನ್ನು ಪ್ರಜಾಪ್ರಭುತ್ವವೆಂದು ಕರೆಯಬಹುದು.

1. **ಅಬ್ರಾಹಿಂ ಲಿಂಕನ್**ರವರು "ಪ್ರಜೆಗಳಿಂದ, ಪ್ರಜೆಗಳಿಗಾಗಿ ಹಾಗೂ ಪ್ರಜೆಗಳಿಗೋಸ್ಕರ ಇರುವ ಸರ್ಕಾರವನ್ನೇ ಪ್ರಜಾಪ್ರಭುತ್ವ"[18] ಎಂದಿದ್ದಾರೆ.
2. **ಅರ್ನೆಸ್ಟ್ ಬಾರ್ಕರ್**ರವರ ಪ್ರಕಾರ, "ಚರ್ಚೆ ಮತ್ತು ವಿಮರ್ಶೆಗಳ ಮೂಲಕ ನಡೆಯುವ ಸರ್ಕಾರವೇ ಪ್ರಜಾಪ್ರಭುತ್ವ".[19]
3. **ಕೆ.ಎಂ. ಪಣಿಕ್ಕರ್** ಪ್ರಕಾರ, "ಪ್ರಜಾಪ್ರಭುತ್ವವು ಕೇವಲ ಒಂದು ಬಗೆಯ ಸರ್ಕಾರವಲ್ಲ", ಅದು ಸಂಕೀರ್ಣವಾದ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳನ್ನೂ ಒಳಗೊಂಡಿರುತ್ತದೆ".[20]
4. **ಜೆ. ಎಸ್. ಮಿಲ್ಲ್**ರವರ ಪ್ರಕಾರ, "ಬಹುಭಾಗ ಜನತೆಯ ಆಡಳಿತದ ಅಧಿಕಾರವನ್ನು ಪ್ರತಿನಿಧಿಗಳ ಮೂಲಕ ನಡೆಸುವ ಸರಕಾರವೇ ಪ್ರಜಾಪ್ರಭುತ್ವ".[21]

---

[16] Palmer, N.D. "Elections and Political Development: the South Asian Experience", Viks publisher and House: New Delhi, 1976, pp- 1.

[17] ಡಾ. ಸುರೇಶ್ ಕೆ.ಜೆ., "ಆಧುನಿಕ ರಾಜಕೀಯ ಸಿದ್ಧಾಂತಗಳು", ಅಖಿಲಾ ಏಜೆನ್ಸೀಸ್, ಮೈಸೂರು, ಪ್ರಥಮ ಮುದ್ರಣ 2013, ಪು.ಸಂ.109.

[18] ಅದೇ, ಪು.ಸಂ. 110.

[19] ಡಾ. ಭುವನೇಶ್ವರ ಪ್ರಸಾದ್, ಎಂ.ಪಿ., "ರಾಜ್ಯಶಾಸ್ತ್ರ", ಶಬರಿಮಲಯನ್ ಬುಕ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ಪ್ರಥಮ ಮುದ್ರಣ 2012, ಪು.ಸ. 234.

[20] ಅದೇ, ಪು.ಸಂ. 235.

[21] ದೇಶಪಾಂಡೆ ಮೀನಾ ಮತ್ತು ದತ್ತಾ ಬಿ. ಕೆ, 'ರಾಜಕೀಯ ಸಿದ್ಧಾಂತ– ಸಮಕಾಲೀನ ಸಿದ್ಧಾಂತ', ಭಾರತೀಯ ವಿದ್ಯಾಭವನ, ಬೆಂಗಳೂರು, 1999, ಪುಟ–233.

- **ಬುಡಕಟ್ಟು:**

'ಬುಡಕಟ್ಟು' ಎಂಬ ಪದವು ಆಂಗ್ಲಭಾಷೆಯ 'ಟ್ರೈಬ್' ಎಂಬ ಪದಕ್ಕೆ ಸಮನಾರ್ಥಕ ಪದವೆಂದು ಬಳಸಲಾಗುತ್ತದೆ. ಇದು ಲ್ಯಾಟಿನ್ ಭಾಷೆಯ 'ಟ್ರೈಬಸ್' ಎಂಬ ಮೂಲ ಪದದಿಂದ ಬಂದಿದೆ. 'ಟ್ರೈಬ್' ಎಂಬುದಕ್ಕೆ ಪ್ರಾಚೀನ ರೋಮ್ ಜನತೆಯ ರಾಜಕೀಯ ಭಾಗ ಅಥವಾ ಆಡಳಿತ ಪ್ರಾಂತ ಅಥವಾ ಮಂಡಲ ಎಂಬ ಅರ್ಥವಿದೆ. ಕಾಲಾಂತರದಲ್ಲಿ 'ಟ್ರೈಬ್' ಎಂಬ ಪದವನ್ನು ಪಶ್ಚಿಮದ ಜಗತ್ತಿನಲ್ಲಿ ಸಮುದಾಯವಾಗಿ ರೂಪ ತಳೆಯುವ ಕುಟುಂಬಗಳಿಗೆ ಸಂಕಲನ ಎಂದು ಅರ್ಥೈಸಲಾಗುತ್ತಿತ್ತು. ಇದೇ ಅರ್ಥವನ್ನು ಇನ್ನಷ್ಟು ಸಮಾಜಶಾಸ್ತ್ರಜ್ಞರು ಟ್ರೈಬ್ ಎಂಬುದಕ್ಕೆ ತಮ್ಮದೇ ಆದ ವ್ಯಾಖ್ಯೆಗಳನ್ನು ನೀಡಿದ್ದಾರೆ.[22] ಬುಡಕಟ್ಟುಗಳಿಗೆ ಮೂಲನಿವಾಸಿ, ಗಿರಿಜನ, ವನ್ಯಜನ, ಕಾಡುಜನರು ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಕಿಟಲ್ಲರು ತಮ್ಮ ಅರ್ಥಕೋಶದಲ್ಲಿ 'ಬುಡಕಟ್ಟು' ಎಂಬ ಶಬ್ದಕ್ಕೆ ಕುಟುಂಬ ಹಾಗೂ ಕುಲ ಎಂಬ ಅರ್ಥವನ್ನು ನೀಡಿದ್ದಾರೆ.

1. **ಡಬ್ಲು. ಹೆಚ್. ಆರ್. ರೀವರ್ಸ್**ರವರು "ಒಂದು ಸರಳ ಜನಾಂಗದ ಸದಸ್ಯರಾಗಿದ್ದು, ಒಂದೇ ಭಾಷೆಯನ್ನಾಡುವ ಮತ್ತು ಯುದ್ಧದಂತಹ ಸಂದಿಗ್ಧ ಪರಿಸ್ಥಿತಿಗಳಲ್ಲಿ ಒಂದಾಗುವ ಸಮುದಾಯವೇ ಆದಿವಾಸಿ ಸಮುದಾಯ" ಎಂದು ಹೇಳಿದ್ದಾರೆ.[23]
2. **ಡಾ. ಡಿ. ಎಸ್. ಮಜುಂದಾರ್**ರವರು, "ಒಂದೇ ನಾಮಧೇಯವನ್ನು ಹೊಂದಿರುವ, ಒಂದೇ ಭೂನೆಲೆಯಲ್ಲಿ ವಾಸಿಸುವ, ಒಂದೇ ಭಾಷೆಯನ್ನಾಡುವ ಮತ್ತು ವಿವಾಹ, ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಒಂದೇ ಬಗೆಯ ವಿಧಿ ನಿಷೇಧಗಳಿಗೆ ಬದ್ಧವಾದ ಕುಟುಂಬಗಳ ಸಮೂಹವನ್ನು ಆದಿವಾಸಿ ಸಮೂಹ" ಎಂದಿದ್ದಾರೆ.[24]
3. **ಜೆ.ಪಿ. ಗಿಲಿನ್ ಮತ್ತು ಜೆ. ಎಲ್. ಗಿಲಿನ್** ರವರ ಪ್ರಕಾರ "ಒಂದೇ ನೆಲದಲ್ಲಿ ವಾಸಿಸುವ ಒಂದೇ ಭಾಷೆಯನ್ನಾಡುವ ಮತ್ತು ಒಂದೇ ಸಂಸ್ಕೃತಿಯನ್ನು ಹೊಂದಿರುವ ಸಮುದಾಯಗಳ ಸಮೂಹಕ್ಕೆ ಆದಿವಾಸಿ ಸಮಾಜ ಎನ್ನುತ್ತೇವೆ"[25] ಎಂದಿದ್ದಾರೆ.

[22] ಸೇತು ಮಾಧವ, "ಬುಡಕಟ್ಟು ಅಧ್ಯಯನ", ಪು. ಸಂ.123.

[23] ಶಾಂತಪ್ಪ ಬಿ, "ಭಾರತದ ಸಾಮಾಜಿಕ ಸಮಸ್ಯೆಗಳು ಭಾಗ– 2", ಪು. ಸಂ, 160.

[24] ಸುನಂದಮ್ಮ (ಸಂ); ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ ಬುಡಕಟ್ಟು ಜನಾಂಗದ ಅಭಿವೃದ್ಧಿಗೆ ಕರ್ನಾಟಕ ಸರಕಾರದ ಕಾರ್ಯಕ್ರಮಗಳು ಒಂದು ವಿಮರ್ಶಾತ್ಮಕ ಅಧ್ಯಯನ", ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಮೈಸೂರು, ಪು. ಸಂ, 160.

[25] ಪ್ರೊ. ಭೈರಪ್ಪ ಕೆ., "ಸಮಗ್ರ ಭಾರತೀಯ ಸಮಾಜ", ಸಪ್ನ ಬುಕ್ ಹೌಸ್, ಬೆಂಗಳೂರು, 2010, ಪು. ಸಂ, 193.

- **ಸಮುದಾಯ:**

ಸಾಮಾನ್ಯವಾಗಿ 'ಸಮುದಾಯ' ಎಂಬ ಪದವನ್ನು ಬಹಳ ಶಿಥಿಲವಾದ ಅರ್ಥದಲ್ಲಿ ಬಳಸುವುದು ಕಂಡುಬರುತ್ತದೆ. ಅಂದರೆ ಜಾತಿ ಸಮುದಾಯ, ಬುಡಕಟ್ಟು ಸಮುದಾಯ, ಧಾರ್ಮಿಕ ಸಮುದಾಯ, ಭಾಷಾ ಸಮುದಾಯ, ಸಾಂಸ್ಕೃತಿಕ ಸಮುದಾಯ, ಔದ್ಯೋಗಿಕ ಸಮುದಾಯ, ರಾಷ್ಟ್ರೀಯ ಸಮುದಾಯ, ಮಾನವ ಸಮುದಾಯ ಹೀಗೆ ಸಂದರ್ಭಕ್ಕೆ ಅನುಗುಣವಾಗಿ ಹಲವು ಅರ್ಥಗಳಲ್ಲಿ ಈ ಪದವನ್ನು ಬಳಸಲಾಗುತ್ತಿದೆ. ಕುಟುಂಬದಂತಹ ಚಿಕ್ಕ ಸಂಘದಿಂದ ಹಿಡಿದು ಇಡೀ ಮಾನವ ಕೋಟಿಯಂತಹ ಬೃಹತ್ ಸಮೂಹವನ್ನು ಸೂಚಿಸಲು 'ಸಮುದಾಯ' ಎಂಬ ಪದವನ್ನು ಪ್ರಯೋಜಿಸಲಾಗುತ್ತಿದೆ. ಆದರೆ ಸಮಾಜಶಾಸ್ತ್ರದಲ್ಲಿ ಮಾತ್ರ 'ಸಮುದಾಯ' ಎಂಬುದು ಒಂದು ಮೂಲ ಕಲ್ಪನೆಯಾಗಿದ್ದು ಅದಕ್ಕೆ ವಿಶೇಷವಾದ ಅರ್ಥವನ್ನು ಕಲ್ಪಿಸಲಾಗಿದೆ. ಸಮಾಜಶಾಸ್ತ್ರಜ್ಞರು ಗ್ರಾಮ, ನಗರ, ಆದಿವಾಸಿಗಳ ನೆಲೆಗಳಿಗೆ ಸಮುದಾಯ ಎಂಬ ಪದವನ್ನು ಬಳಸಿದ್ದಾರೆ.

1. **ಕಿಂಗ್ಸ್‌ಲೇ ಡೇವೀಸ್**ರವರು "ಸಾಮಾಜಿಕ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಒಂದು ಅತಿ ಚಿಕ್ಕ ಸ್ಥಾನೀಯ ಜನಸಮೂಹವನ್ನು ಸಮುದಾಯ"[26] ಎಂದು ಕರೆದಿದ್ದಾರೆ.
2. **ಲುಂಡ್ ಬರ್ಗ್**ರವರು "ಮಾನವರು ನಿಯಮಿತ ಭೌಗೋಳಿಕ ಪ್ರದೇಶದಲ್ಲಿ ವಾಸ್ತಿಸುತ್ತಿದ್ದು ಒಂದೇ ರೀತಿಯ ಪರಸ್ಪರಾವಲಂಬಿತ ಜೀವನ ಸಾಗಿಸುತ್ತಿರುವುದಕ್ಕೆ ಸಮುದಾಯ" [27] ಎಂದು ಕರೆದಿದ್ದಾರೆ.
3. **ಆಗ್‌ಬರ್ನ್ ಮತ್ತು ನಿಮ್ಕಾಪ್**ರವರು "ಒಂದು ಸೀಮಿತ ಪ್ರದೇಶದಲ್ಲಿ ವಾಸಿಸುವ ಸಾಮಾಜಿಕ ಜೀವನದ ಸಂಪೂರ್ಣವಾದ ವ್ಯವಸ್ಥೆಯೇ ಸಮುದಾಯವಾಗಿದೆ" [28] ಎಂದಿದ್ದಾರೆ.
4. **ಇ.ಜಿ. ಬೋಗಾರ್ಡಸ್**ರವರು "ನಾವು ನಮ್ಮವರು ಎನ್ನುವ ಭಾವನೆಯಿಂದ ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನಸಮೂಹವೇ ಸಮುದಾಯ"[29] ಎಂದಿದ್ದಾರೆ.

8. ಅಧ್ಯಯನದ ವ್ಯಾಪ್ತಿ ಮತ್ತು ಕ್ಷೇತ್ರ:

"ಕರ್ನಾಟಕದಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳು: ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಒಂದು ತೌಲನಿಕ ಅಧ್ಯಯನ" (2010 ರಿಂದ

[26] Bhushan, Vidya. & Sachdeva, D.K. "An Introduction to Sociology", Kitab Mahal Publishing: Allahabad, 2011 pp-80
[27] ಅದೇ ಪುಟ ಸಂಖ್ಯೆ–80
[28] ಅದೇ ಪುಟ ಸಂಖ್ಯೆ–80
[29] ಅದೇ ಪುಟ ಸಂಖ್ಯೆ–80

2018) ಎಂಬ ಶೀರ್ಷಿಕೆ ಅಡಿಯಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಮತ್ತು ರಾಜಕೀಯ ಸ್ಥಿತಿಗತಿಯನ್ನು ಅರ್ಥೈಸಿಕೊಳ್ಳುವ ದೃಷ್ಟಿಯಿಂದ ಈ ಅಧ್ಯಯನವು ಅತ್ಯಂತ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ. ಭಾರತದ ವಿವಿಧ ರಾಜ್ಯಗಳಲ್ಲಿರುವಂತೆ ಕರ್ನಾಟಕದ 31 ಜಿಲ್ಲೆಗಳಲ್ಲಿಯೂ ಸಹ 50ಕ್ಕೂ ಹೆಚ್ಚು ವಿವಿಧ ಜಾತಿಗೆ ಸೇರಿದ ಬುಡಕಟ್ಟು ಜನರಿದ್ದಾರೆ.[30] ಅದರಲ್ಲೂ ರಾಜ್ಯದ 10 ಜಿಲ್ಲೆಗಳಲ್ಲಿ ಅಧಿಕವಾಗಿದ್ದಾರೆ.[31] ಅಧಿಕ ಸಂಖ್ಯೆಯ ಬುಡಕಟ್ಟು ಜನರನ್ನೊಳಗೊಂಡ ಜಿಲ್ಲೆಗಳಲ್ಲಿ ಪ್ರಸ್ತುತ ಅಧ್ಯಯನ ಕ್ಷೇತ್ರಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 144,235 ಲಕ್ಷ ವಾಲ್ಮೀಕಿ ಸಮುದಾಯದ ಜನರಿದ್ದಾರೆ. ಇವರು ಈ ಎರಡು ಜಿಲ್ಲೆಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದಿದ್ದಾರೆ ಎಂಬುದನ್ನು ಕ್ಷೇತ್ರಕಾರ್ಯ ಅಧ್ಯಯನದ ಮೂಲಕ ಅಗತ್ಯವಾದ ಅಂಕಿ–ಅಂಶಗಳನ್ನು ಅವಲೋಕಿಸಿ ಅಧ್ಯಾಯ–4 ರಲ್ಲಿ ವಿವರಿಸಲಾಗಿದೆ.

ಪ್ರಸ್ತುತ 'ಪರಿಶಿಷ್ಟ ಪಂಗಡ'ಕ್ಕೆ (ST) ಸೇರಿದ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಕುರಿತು ಸಂಶೋಧನೆ ನಡೆಸಲಾಗಿದೆ. ವಿಶೇಷವಾಗಿ ಕರ್ನಾಟಕ ರಾಜ್ಯದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡು ಸಂಶೋಧನಾ ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಎರಡು ಜಿಲ್ಲೆಗಳಿಂದ ಒಟ್ಟು 400 ಪ್ರತಿವರ್ತಿಗಳನ್ನು (ವಾಲ್ಮೀಕಿ ಸಮುದಾಯದ ಸಾಮಾನ್ಯ ಜನರು, ಎಂ.ಎಲ್.ಎ.ಗಳು ಮತ್ತು ಎಂ.ಪಿ.ಗಳು) ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಗುಲಬರ್ಗಾ ಜಿಲ್ಲೆಯಿಂದ ಒಟ್ಟು 150 ಜನರನ್ನು ಅದರಲ್ಲಿ 120 ಪುರುಷ ಮತ್ತು 30 ಮಹಿಳೆ ಹಾಗೂ ಯಾದಗಿರಿ ಜಿಲ್ಲೆಯಿಂದ ಒಟ್ಟು 250 ಜನರನ್ನು ಅದರಲ್ಲಿ 180 ಪುರುಷ ಮತ್ತು 70 ಮಹಿಳೆಯರು ಒಟ್ಟು 400 ಜನರಿಗೆ ಸಂದರ್ಶನ ಪ್ರಶ್ನಾವಳಿಯನ್ನು ನೀಡಿ ಭರ್ತಿ ಮಾಡಿದ ಸಂದರ್ಶನ ತಪಶೀಲನ್ನು ಪಡೆದು ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ 'ಸರಳ ಯಾದೃಚ್ಛಿಕ ಅಧ್ಯಯನ ವಿಧಾನ' (Simple Random Sampling Method) ವನ್ನು ಬಳಸಿಕೊಳ್ಳಲಾಗಿದೆ.

8.1 ಅಧ್ಯಯನದ ಮಿತಿ:

ಪ್ರಸ್ತುತ ಅಧ್ಯಯನದಲ್ಲಿ ಕೆಲವು ಮಿತಿಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ಈ ಕೆಳಕಂಡಂತೆ ನೋಡಬಹುದಾಗಿದೆ.

[30] The Scheduled caste and Scheduled Tribes Order (amendment) Act, 2002, Dated.8.1.2003.
[31] Primary Census Abstract Data Highlights Karnataka 2011.

- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಪ್ರಕ್ರಿಯೆ ಹಾಗೂ ಸಮಸ್ಯೆ ಮತ್ತು ಸವಾಲುಗಳನ್ನು ಕುರಿತು ಚರ್ಚಿಸುವುದು ಅಧ್ಯಯನದ ಮೊದಲ ಮಿತಿಯಾಗಿದೆ.
- ಈ ಸಂಶೋಧನಾ ಅಧ್ಯಯನವು ಕೇವಲ 2010 ರಿಂದ 2018ರ ಅವಧಿಗೆ ಮಾತ್ರ ಸೀಮಿತವಾಗಿದೆ.

9. ಅಧ್ಯಯನದ ವಿಧಾನ:

ಪ್ರಸ್ತುತ ಸಂಶೋಧನಾತ್ಮಕ ಅಧ್ಯಯನವು ಪ್ರಾಥಮಿಕ ಅಂಕಿ–ಅಂಶಗಳ (Primary Data) ಮೇಲೆ ಅವಲಂಬಿತವಾಗಿದೆ. ಆದರೂ ಪ್ರಾಥಮಿಕ ಅಂಕಿ–ಅಂಶಗಳಿಗೆ ಸಹಕಾರಿಯಾಗಿ ದ್ವಿತೀಯ ಅಂಕಿ–ಅಂಶಗಳನ್ನು (Secondary Data) ಬಳಸಿಕೊಳ್ಳಲಾಗಿದೆ. ಈ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ವಿಷಯದ ಮೇಲೆ ಆಳವಾಗಿ ಅಧ್ಯಯನ ಮಾಡಲು ಈ ಕೆಳಗಿನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

- ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧ್ಯಯನವು "ಐತಿಹಾಸಿಕ ವಿಧಾನ'ದ ಮೂಲಕ ವಾಲ್ಮೀಕಿ ಸಮುದಾಯದ ಐತಿಹಾಸಿಕ ಹಿನ್ನೆಲೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಯನ್ನು ತಿಳಿಯಲು ಅತಿ ಅಗತ್ಯವಾಗಿರುತ್ತದೆ. ಆದ್ದರಿಂದ ಐತಿಹಾಸಿಕ ವಿಧಾನವನ್ನೆ ಅಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ.
- 'ವಿಶ್ಲೇಷಣಾ' ಮತ್ತು 'ವಿವರಣಾತ್ಮಕ ವಿಧಾನ'ಗಳ ಮೂಲಕ ಎಲ್ಲಾ ಸಂಗ್ರಹಿಸಿದ ಪ್ರಾಥಮಿಕ ಮಾಹಿತಿಯನ್ನು ವಿಷಯವಾರು ವರ್ಗೀಕರಿಸಿ ಸೂಕ್ತ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಸಂಖ್ಯಾತ್ಮಕ ಮಾಹಿತಿಯನ್ನು ಕೋಷ್ಟಕಗಳ ರೂಪದಲ್ಲಿ ಮತ್ತು ಶೇಕಡವಾರುಗಳನ್ನು ಬಳಸಿ ಎಸ್.ಪಿ.ಎಸ್.ಎಸ್. ತಂತ್ರಾಂಶದ ಸಹಾಯದಿಂದ ದತ್ತಾಂಶಗಳನ್ನು ವಿಶ್ಲೇಷಣೆ ಮಾಡಲಾಗಿದೆ.
- 'ಅವಲೋಕನ ವಿಧಾನ' ಈ ವಿಧಾನದಲ್ಲಿ 'ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆ'ಯಲ್ಲಿನ ವಾಸ್ತವ ಸ್ಥಿತಿಯನ್ನು ಮತ್ತು ನೈಜತೆಯನ್ನು ಅರಿಯಲು ಸಾಧ್ಯವಾಗುತ್ತದೆ. ಜೊತೆಗೆ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ಅವಲೋಕಿಸಲಾಗಿದೆ.
- 'ಪ್ರಾಯೋಗಿಕ' ವಿಧಾನವನ್ನು 'ಸಂದರ್ಶನ' ತಂತ್ರದ ಮೂಲಕ ಪ್ರಸ್ತುತ ಸಂಶೋಧನಾ ವಿಷಯಕ್ಕೆ ಪೂರಕವಾಗಿ ಪ್ರಶ್ನಾವಳಿಯ ಮೂಲಕ ಸಂದರ್ಶನ ಮಾಡಿ ಮಾಹಿತಿಯನ್ನು

ಸಂಗ್ರಹಿಸಲಾಗಿದೆ. ಕರ್ನಾಟಕದಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆ: ವಿಶೇಷವಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ 'ಕ್ಷೇತ್ರ ಕಾರ್ಯ' ಮತ್ತು 'ಸಮಗ್ರ ಸಮೀಕ್ಷಾ' ವಿಧಾನದ ಮೂಲಕ ಕ್ಷೇತ್ರಾಧ್ಯಯನ, ಔಪಚಾರಿಕ ಮತ್ತು ಅನೌಪಚಾರಿಕ ಸಂದರ್ಶನಗಳು ಹಾಗೂ ಪ್ರಶ್ನಾವಳಿಗಳು ಪ್ರಸ್ತುತ ಅಧ್ಯಯನದಲ್ಲಿ ಪ್ರತಿವರ್ತಿಗಳಿಗೆ (ವಾಲ್ಮೀಕಿ ಸಮುದಾಯದ ಸಾಮಾನ್ಯ ಜನರು, ಎಂ.ಎಲ್.ಎ.ಗಳು ಮತ್ತು ಎಂ.ಪಿ.ಗಳು) ನೀಡಲಾಗಿದ್ದು, ಪ್ರಶ್ನಾವಳಿಯು ಒಟ್ಟು 100 ಪ್ರಶ್ನೆಗಳನ್ನೊಳಗೊಂಡ ನಾಲ್ಕು ಭಾಗಗಳನ್ನು ಒಳಗೊಂಡಿತ್ತು. ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಒಟ್ಟು 400 ಪ್ರತಿವರ್ತಿಗಳನ್ನು ಅಂದರೆ ಗುಲಬರ್ಗಾ ಜಿಲ್ಲೆಯಿಂದ ಒಟ್ಟು 150 ಜನರನ್ನು ಅದರಲ್ಲಿ 120 ಪುರುಷ ಮತ್ತು 30 ಮಹಿಳೆ ಹಾಗೂ ಯಾದಗಿರಿ ಜಿಲ್ಲೆಯಿಂದ ಒಟ್ಟು 250 ಜನರನ್ನು ಅದರಲ್ಲಿ 180 ಪುರುಷ ಮತ್ತು 70 ಮಹಿಳೆಯರನ್ನು 'ಸರಳ ಯಾದೃಶ್ಚಿಕ ಅಧ್ಯಯನ ವಿಧಾನ' (Simple Random Sampling Method) ದ ಮೂಲಕ ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

- 'ತೌಲನಿಕ ವಿಧಾನ' ದ ಮೂಲಕ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಪ್ರತಿವರ್ತಿಗಳಿಗೆ ಪ್ರಶ್ನಾವಳಿ ಮತ್ತು ಸಂದರ್ಶನಗಳ ವಿವರಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ ಈ ಎರಡು ಜಿಲ್ಲೆಗಳ ಪ್ರತಿವರ್ತಿಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ನಿಲುವುಗಳನ್ನು ತುಲನಾತ್ಮಕವಾಗಿ ಚರ್ಚಿಸಿ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

ಈ ಮೇಲಿನ ಎಲ್ಲಾ ವಿಧಾನಗಳ ಮತ್ತು ತಂತ್ರಗಳ ಸಹಾಯದಿಂದ ಅಧ್ಯಯನವನ್ನು ಕೈಗೊಂಡು ಮಾಹಿತಿಯನ್ನು ಕಲೆಹಾಕಲಾಗಿದೆ.

9.1 ಅಧ್ಯಯನದ ಆಧಾರ:

ಪ್ರಸ್ತುತ ಅಧ್ಯಯನವನ್ನು ಪ್ರಾಥಮಿಕ ಮತ್ತು ದ್ವಿತೀಯ ಮೂಲಾಧಾರಗಳ ಮೇಲೆ ಮಾಡಲಾಗಿದೆ.

ಪ್ರಾಥಮಿಕ ಮೂಲಾಧಾರ:

- ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಆಯ್ದ ವಾಲ್ಮೀಕಿ ಸಮುದಾಯದ ಸಾಮಾನ್ಯ ಜನರು, ಎಂ.ಎಲ್.ಎ.ಗಳು, ಎಂ.ಪಿ.ಗಳು, ಸಮುದಾಯದ ಸಳ್ಥೀಯ ಮುಖಂಡರುಗಳು ಮತ್ತು ಅಧಿಕಾರಿಗಳನ್ನು ಬೇಟಿ ಮಾಡಿ ಅವರಿಂದ 'ರಾಜಕೀಯ ಭಾಗವಹಿಸುವಿಕೆ'ಯ ಕುರಿತು ಚರ್ಚೆ ಮಾಡಿ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

- ಗುಲಬರ್ಗಾ ಮತ್ತು ಯಾದರಿಗಿ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಸಂದರ್ಶನ ಮತ್ತು ಸಮೀಕ್ಷೆ ನಡೆಸಿ ಈ ಎರಡು ಜಿಲ್ಲೆಗಳಿಂದ ಒಟ್ಟು 400 ಪ್ರತಿವರ್ತಿಗಳನ್ನು ಸಂಶೋಧನಾ ಅಧ್ಯಯನ ಕ್ಷೇತ್ರಕಾರ್ಯಕ್ಕೆಂದು ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಯಿತು.

ದ್ವಿತೀಯ ಮೂಲಾಧಾರ:

- ಪ್ರಸ್ತುತ ಸಂಶೋಧನಾ ವಿಷಯಕ್ಕೆ ಪೂರಕವಾಗಿ ಲಭ್ಯವಿರುವ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ವಾಲ್ಮೀಕಿ ಸಮುದಾಯದ ಐತಿಹಾಸಿಕ ಹಿನ್ನೆಲೆಗೆ ಮತ್ತು ರಾಜಕೀಯ ಭಾಗವಹಿಸುವಿಕೆಗೆ ಪೂರಕವಾದ ಆಕಾರ ಗ್ರಂಥಗಳು, ಸಂಶೋಧನಾ ಲೇಖನಗಳು, ವಿವಿಧ ವೃತ್ತ ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳು, ವರದಿಗಳು, ವಿವಿಧ ನಿಯತಕಾಲಿಕೆಗಳಿಂದ ಪ್ರಕಟಗೊಂಡ ವರದಿಗಳು, ಲೇಖನಗಳು ಹಾಗೂ ವಿವಿಧ ಗ್ರಂಥಾಲಯಗಳಲ್ಲಿ ಹಲವು ಪುಸ್ತಕಗಳನ್ನು ಅಧ್ಯಯನ ಮಾಡಿ ಸಂಗ್ರಹಿಸಿರುವ ಮಾಹಿತಿಗಳು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಗ್ರಂಥಗಳನ್ನು ಅಧ್ಯಯನ ಮಾಡುವ ಮೂಲಕ ಅವಶ್ಯಕವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.
- ಸಂಶೋಧನಾ ಮಹಾಪ್ರಬಂಧವನ್ನು ರಚಿಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಹೊರಡಿಸಿರುವ, ಆಜ್ಞೆ, ಗೆಜೆಟ್‌ಗಳು, ಸುತ್ತೋಲೆಗಳು , ಸಮೀಕ್ಷಾ ವರದಿಗಳು ಜನಗಣತಿ ವರದಿಗಳು, ಮಾನವಾಭಿವೃದ್ಧಿ ವರದಿಗಳು, ಸಂಶೋಧನಾ ವರದಿಗಳು, ಸಂವಿಧಾನ ಸಭೆಯ ಚರ್ಚೆಗಳು, ಭಾಷಣಗಳು, ಹೇಳಿಕೆಗಳು, ಜಿಲ್ಲಾ ವಾರ್ಷಿಕ ವರದಿಗಳು, ಕಿರು ಕೈಪಿಡಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ವಿವಿಧ ನೀತಿಗಳು, ಯೋಜನೆಗಳು, ಕಾರ್ಯಕ್ರಮಗಳನ್ನು ಈ ಅಧ್ಯಯನಕ್ಕೆ ಬಳಸಿಕೊಂಡು ವಿಶ್ಲೇಷಿಸಲಾಗಿದೆ.
- ಈ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಹಿರಿಯ ರಾಜಕೀಯ ಮುತ್ಸದ್ದಿಗಳು, ಬುದ್ಧಿಜೀವಿಗಳು, ಸಭೆ ಸಮಾರಂಭಗಳು, ವಿಚಾರಸಂಕೀರ್ಣಗಳು, ತರಬೇತಿ ಕಾರ್ಯಾಗಾರ ಹಾಗೂ ಉಪನ್ಯಾಸ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾಹಿತಿಗಳನ್ನು ಸಂಗ್ರಹಿಸಿ ಸಂಶೋಧನೆಗೆ ಅಳವಡಿಸಿಕೊಳ್ಳಲಾಗಿದೆ.

10. **ಅಧ್ಯಯನದ ಯೋಜನೆ:**

ಪ್ರಸ್ತುತ ಈ ಸಂಶೋಧನಾ ಅಧ್ಯಯನವನ್ನು ಐದು ಅಧ್ಯಾಯಗಳಾಗಿ ವಿಂಗಡಿಸಲಾಗಿದ್ದು, ಅವುಗಳ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

ಅಧ್ಯಾಯ 01: ಪ್ರಸ್ತಾವನೆ

ಈ ಅಧ್ಯಾಯದಲ್ಲಿ ಪೀಠಿಕೆ, ಭಾರತದಲ್ಲಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಹಾಗೂ ಜಾತಿಪದ್ಧತಿ, ಭಾರತ ಮತ್ತು ಕರ್ನಾಟಕದಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಮೀಸಲಾತಿಯ ಹಿನ್ನೆಲೆ, ಅಧ್ಯಯನದ ಸಮಸ್ಯೆಯ ನೆಲೆ, ಅಧ್ಯಯನದ ಉದ್ದೇಶಗಳು, ಸಾಹಿತ್ಯಾವಲೋಕನ, ಸಂಶೋಧನಾ ಅಂತರ, ಪ್ರಾಕ್ ಕಲ್ಪನೆ, ಅಧ್ಯಯನದ ಪರಿಕಲ್ಪನೆಯ ಚೌಕಟ್ಟು, ಅಧ್ಯಯನದ ವ್ಯಾಪ್ತಿ ಮತ್ತು ಕ್ಷೇತ್ರ, ಅಧ್ಯಯನದ ವಿಧಾನ, ಕೊನೆಯದಾಗಿ ಅಧ್ಯಯನದ ಯೋಜನೆಯನ್ನು ಒಳಗೊಂಡಿದೆ.

ಅಧ್ಯಾಯ 02: ರಾಜಕೀಯ ಭಾಗವಹಿಸುವಿಕೆಯ ಸೈದ್ಧಾಂತಿಕ ದೃಷ್ಟಿಕೋನಗಳು

ಈ ಅಧ್ಯಾಯನದಲ್ಲಿ ರಾಜಕೀಯ ಭಾಗವಹಿಸುವಿಕೆಯ ಐತಿಹಾಸಿಕ ಹಿನ್ನೆಲೆ, ಅರ್ಥ, ವ್ಯಾಖ್ಯೆಗಳು, ಸಿದ್ಧಾಂತಗಳು, ರಾಜಕೀಯ ಭಾಗವಹಿಸುವಿಕೆಯ ಸೈದ್ಧಾಂತಿಕ ದೃಷ್ಟಿಕೋನಗಳಾದ ರಾಜಕೀಯ ಸಾಮಾಜೀಕರಣ, ರಾಜಕೀಯ ಸಂಸ್ಕೃತಿ, ರಾಜಕೀಯ ಅಭಿವೃದ್ಧಿ, ಸಾಮಾಜಿಕ ಸಂಘಟನೆಯ ಸಿದ್ಧಾಂತ, ರಾಜಕೀಯ ಶಿಕ್ಷಣ, ರಾಜಕೀಯ ಪರಿಸರ, ರಾಜಕೀಯ ಭಾಗವಹಿಸುವಿಕೆಯ ಸಾಧನಗಳು ಮತ್ತು ರಾಜಕೀಯ ಭಾಗವಹಿಸುವಿಕೆಯ ಪ್ರಾಮುಖ್ಯತೆ ಇತ್ಯಾದಿ ಅಂಶಗಳು ರಾಜಕೀಯ ಪ್ರಕ್ರಿಯೆಯಲ್ಲಿ ಜನರ ಭಾಗವಹಿಸುವಿಕೆಗೆ ಹೆಚ್ಚು ಪ್ರಭಾವ ಬೀರುವ ಅಂಶಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ 03: ವಾಲ್ಮೀಕಿ ಸಮುದಾಯದ ಚಾರಿತ್ರಿಕ ಹಿನ್ನೆಲೆ

ಈ ಅಧ್ಯಾಯದಲ್ಲಿ ಭಾರತದ ಬುಡಕಟ್ಟು ಸಮುದಾಯಗಳ ಅಧ್ಯಯನ, ಕರ್ನಾಟಕದ ಬುಡಕಟ್ಟು ಸಮುದಾಯಗಳ ಅಧ್ಯಯನ, ಸಮುದಾಯಗಳ ಸ್ವರೂಪ, ಕರ್ನಾಟಕದ ಸಮುದಾಯಗಳು, ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಸಮುದಾಯಗಳ ಕುರಿತು ಚರ್ಚಿಸಲಾಗಿದೆ. ಈ ಚರ್ಚೆಯ ಆಧಾರದ ಮೇಲೆ ವಾಲ್ಮೀಕಿ ಸಮುದಾಯದ ಚಾರಿತ್ರಿಕ ಹಿನ್ನೆಲೆ, ಬೇಡ/ವಾಲ್ಮೀಕಿ ಪದದ ನಿಷ್ಪತ್ತಿ, ಬೇಡ ಬುಡಕಟ್ಟಿನ ವೈಶಿಷ್ಟ್ಯಗಳು ಮತ್ತು ಉಪಪಂಗಡಗಳು, ಬೇಟೆಯ ಪರಿಕಲ್ಪನೆ ಮತ್ತು ವಾಲ್ಮೀಕಿ ಸಮುದಾಯದವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿಯನ್ನು ತಿಳಿಸಲಾಗಿದೆ.

ಅಧ್ಯಾಯ 04: ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳು ಒಂದು ತೌಲನಿಕ ವಿಶ್ಲೇಷಣೆ (2010 ರಿಂದ 2018).

ಅಧ್ಯಾಯ 05: ಉಪಸಂಹಾರ

ಈ ಐದನೇ ಅಧ್ಯಾಯವು ಉಪಸಂಹಾರವಾಗಿದ್ದು, ನಾಲ್ಕು ಅಧ್ಯಾಯಗಳು ಒಳಗೊಂಡಿರುವ ವಿವಿಧ ಅಂಶಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಈ ಅಧ್ಯಯನದಿಂದ ದೊರೆತ ಫಲಿತಗಳನ್ನು ಆಧರಿಸಿ, ಕೆಲವು ಸಲಹೆ ಹಾಗೂ ಶಿಫಾರಸ್ಸುಗಳನ್ನು ನೀಡಲಾಗಿದೆ. ಕೊನೆಯಲ್ಲಿ ಆಧಾರಗ್ರಂಥಗಳು, ಭಾವಚಿತ್ರಗಳನ್ನು ಲಗತ್ತಿಸಲಾಗಿದೆ.

11. ಉಪಸಂಹಾರ: ಸಂಶೋಧನಾ ಫಲಿತಗಳು, ಸಲಹೆಗಳು ಹಾಗೂ ಶಿಫಾರಸ್ಸುಗಳು

ಈ ಅಧ್ಯಯನವು "ಕರ್ನಾಟಕದಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳು: ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಒಂದು ತೌಲನಿಕ ಅಧ್ಯಯನ" (2010 ರಿಂದ 2018) ಎಂಬ ಶೀರ್ಷಿಕೆ ಅಡಿಯಲ್ಲಿ ಸಂಶೋಧನೆ ಕೈಗೊಳ್ಳಲಾಗಿದ್ದು ಈ ಸಂಶೋಧನೆ ಸಮಾಜ–ವಿಜ್ಞಾನ ಸಂಶೋಧನೆಗಳಲ್ಲಿ ಬಹು ವಿಶಿಷ್ಟವಾದುದ್ದಾಗಿದೆ ಎಂದು ಹೇಳಬಹುದು. ವಾಲ್ಮೀಕಿ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಕೈಗೊಂಡ ಈ ಅಧ್ಯಯನ ರಾಜ್ಯಶಾಸ್ತ್ರದಲ್ಲಿ ಒಂದು ವಿನೂತನ ಪ್ರಯತ್ನವಾಗಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವವನ್ನು ಹೊಂದಿರುವ ಭಾರತದವು ಪ್ರಾಚೀನ ಕಾಲದಿಂದಲೂ ಹಲವಾರು ಜಾತಿ, ಧರ್ಮ, ಮತ, ಪಂಥ, ಭಾಷೆ, ಸಂಸ್ಕೃತಿ, ಬುಡಕಟ್ಟು ಜನ ಸಮುದಾಯ ಹಾಗೂ ಪ್ರಾದೇಶಿಕ ವಿಭಿನ್ನತೆಯಿಂದ ಕೂಡಿದ ಸಾಮಾಜಿಕ ಸ್ತರವಿನ್ಯಾಸವನ್ನು ಹೊಂದಿದೆ. ಈ ಸ್ತರವಿನ್ಯಾಸದ ಕೆಳಸ್ತರದಲ್ಲಿರುವ ಈ ಸಮುದಾಯದಲ್ಲಿ ಬಡತನ, ಅನಕ್ಷರತೆ, ಮೂಢನಂಬಿಕೆ, ಅಸಮಾನತೆ ಮುಂತಾದ ಸಮಸ್ಯೆಗಳು ಕಂಡುಬರುತ್ತವೆ. ಅಂದರೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಈ ಸಮುದಾಯಕ್ಕೆ ಪ್ರಾಧಾನ್ಯತೆ ನೀಡದಿರುವುದು ಹಿಂದುಳಿದಿರುವಿಕೆಗೆ ಕಾರಣ ಎಂದು ಅಧ್ಯಯನದಿಂದ ತಿಳಿದುಬಂದಿದೆ.

ಒಂದು ಕಾಲದಲ್ಲಿ ಮೂಲತಃ ಅರಣ್ಯವಾಸಿಯಾಗಿದ್ದ ಮಾನವನಿಗೆ ಆರಂಭದಲ್ಲಿ ಆಹಾರ ಸಂಗ್ರಹಣೆಕ್ಕಾಗಿ ಬೇಟೆಗಾರಿಕೆಯು ಒಂದು ಪ್ರಾಚೀನ ವೃತ್ತಿಯಾಗಿದ್ದು, ಇದರ ನಂತರವೇ ಬೇರೆ ಬೇರೆ ವೃತ್ತಿಗಳು ಜೀವನೋಪಾಯಕ್ಕಾಗಿ ಹುಟ್ಟಿಕೊಂಡವು. ಪ್ರಾರಂಭದಲ್ಲಿ ಈ ಸಮುದಾಯವು ಆಯುಧಗಳನ್ನು ಕೇವಲ ಬೇಟೆಯ ಬಳಕೆಗಾಗಿ ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದರು. ತದ ನಂತರ ಆಯುಧಗಳನ್ನು ಸಾಹಸ ಕಾರ್ಯಗಳಿಗಾಗಿ ಬಳಕೆ ಮಾಡತೊಡಗಿದರು. ಸಾಹಸ ಕಲೆಯು ಪ್ರದರ್ಶಿಸುವಿಕೆಯ ಅವರನ್ನು ಸೈನ್ಯ ಸೇರಲು, ಪಾಳೆಯಪಟ್ಟುಗಳನ್ನು ಕಟ್ಟಿ ಸ್ವತಂತ್ರ ಸಂಸ್ಥಾನಗಳನ್ನು

(ರಾಜ್ಯ) ಹೊಂದಲು ನೆರವಾಯಿತು. ಕರ್ನಾಟಕದಲ್ಲಿ ಅರಸು ಮನೆತನಗಳು ಬೇಡ ಜಾತಿ ಮೂಲದಿಂದ ರೂಪುಗೊಂಡವಾಗಿದ್ದವು. ಕಂಪಿಲದುರ್ಗ, ಉಚ್ಚಂಗಿದುರ್ಗ, ಸುರಪುರ, ಚಿತ್ರದುರ್ಗ, ಹರಪನಹಳ್ಳಿ, ನಿಡಗಲ್ಲು, ಇಕ್ಕೆರಿ ಇನ್ನೂ ಮುಂತಾದ ಹಲವಾರು ಪ್ರಾಂತ್ಯಗಳಲ್ಲಿ ಪಾಳೆಯಪಟ್ಟುಗಳನ್ನು ಆಳ್ವಿಕೆ ಮಾಡಿದವರು ಈ ಸಮುದಾಯದವರಾಗಿದ್ದಾರೆಂದು ಅಧ್ಯಯನಗಳ ಮೂಲಕ ತಿಳಿದುಬರುತ್ತದೆ.

ಈ ಸಮುದಾಯ ಸಾಮಾನ್ಯವಾಗಿ ಪ್ರಾಂತೀಯ ಸಂಸ್ಥಾನಗಳ ನಿರ್ಮಾಪಕರು, ಕರ್ನಾಟಕದಲ್ಲಿ 15, 16, 17ನೇ ಶತಮಾನದಲ್ಲಿ ಪಾಳೆಯಗಾರರಾಗಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಪಾಳೆಯ ಎಂದರೆ ಆಗಿನ ಸಾಮ್ರಾಜ್ಯಾಡಳಿತದ ಒಂದು ಘಟಕವಾಗಿ ರೂಪುಗೊಂಡಿತ್ತು. ಪಾಳೆಯಗಾರರ ವಿಶೇಷವೆಂದರೆ, ಅವರ ಅಧೀನದಲ್ಲಿದ್ದ ಸಾಮ್ರಾಜ್ಯದಲ್ಲಿ ತಾವು ಒಬ್ಬ ರಾಜನಂತೆಯೇ ಆಡಳಿತ ನಡೆಸುತ್ತಿದ್ದರು. ತಮ್ಮ ಸ್ವಂತ ಹೆಸರಿನಲ್ಲಿ ದಾನದತ್ತಿ ನೀಡುವ ಸ್ವಾತಂತ್ರ ಅವರು ಹೊಂದಿದ್ದರು. ಹೀಗೆ ಈ ಸಮುದಾಯ ಸ್ವತಂತ್ರ ಪಾಳೆಯಪಟ್ಟುಗಳನ್ನು ಕಟ್ಟಿ ಅರ್ಥಪೂರ್ಣ ರಾಜ್ಯಾಡಳಿತವನ್ನು ನಡೆಸುತ್ತಿದ್ದರು. ಕ್ರಮೇಣ ಹೀಗೆ ಬೆಳೆದ ಪಾಳೆಯಪಟ್ಟುಗಳಲ್ಲಿ ಬೇಡನಾಯಕ ಅರಸನಿರಲಿ ಅಥವಾ ಬೇರೆಯಾರೆ ಅರಸನಾಗಿರಲಿ ಅಲ್ಲಿ ಬೇಡರ ಪಡೆಯಂತೂ (ಸೈನ್ಯ) ಇರುತಿತ್ತು. ನಂತರದ ಸಾಮ್ರಾಜ್ಯಗಳ ಏಳುಬೀಳಿನಲ್ಲಿ ಈ ಸಮುದಾಯ ಭಾಗವಹಿಸುತ್ತಾ ಮುಂದೆ ಬ್ರಿಟೀಷ್‌ರ ಆಳ್ವಿಕೆ ಶುರುವಾದ ಮೇಲೆ ಅವನತಿಯತ್ತ ಸಾಗಿತು. ಸ್ಥಳೀಯ ರಾಜರಿಗೆ ಸೈನ್ಯ ಇಟ್ಟುಕೊಳ್ಳುವ ಹಕ್ಕು ತೆಗೆದುಹಾಕಿದ 'ಸಹಾಯಕ ಸೈನ್ಯ ಪದ್ಧತಿ', ಬೇಡರ ಪಡೆಗಳ ಅವನತಿಗೆ ಕಾರಣವಾಯಿತು ಎಂದು ಹೇಳಬಹುದು. ಬ್ರಿಟೀಷರು ಜಾರಿಗೆ ತಂದ 'ಅರಣ್ಯ ಕಾಯ್ದೆಗಳು' ಈ ಸಮುದಾಯದ ಮುಖ್ಯ ಜೀವನಾಧಾರವಾಗಿದ್ದ ಅರಣ್ಯದಿಂದಲೂ ಹೊರದೂಡಿತು. ಸೈನಿಕ ಸೇವೆಗಾಗಿ ಒದಗಿಸಿದ್ದ ಇನಾಮು (ಬಹುಮಾನ) ಭೂಮಿ ಬಹಳ ಕಡೆಗಳಲ್ಲಿ ಜಮಿನ್ದಾರಿ ಪದ್ಧತಿಯ ಕಾರಣದಿಂದ ಕೈತಪ್ಪಿ ಹೋಯಿತು. ಸೈನ್ಯದ ಸೇವೆಗಾಗಿ ಬರುತ್ತಿದ್ದ ಉಂಬಳ (ವೇತನ) ಯು ನಿಂತುಹೋಯಿತು. ಈ ಕಾರಣದಿಂದ ವಸಾಹತುಶಾಹಿ ಆಳ್ವಿಕೆಯಲ್ಲಿ ಹಲವಾರು ದಂಗೆ–ಬಂಡಾಯಗಳನ್ನು ನಡೆಸಿದ ಈ ಸಮುದಾಯವು ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಯಿತು. ನಿಶ್ಯಸ್ತ್ರೀಕರಣ ಕಾಯ್ದೆಯಂತಹ ಕಾನೂನುಗಳು ಆಯುಧ ಹೊಂದಿರುವ ಹಕ್ಕನ್ನು ಕಸಿದುಕೊಂಡು ಈ ಸಮುದಾಯವನ್ನು ಮತ್ತಷ್ಟು ಬಡವರನ್ನಾಗಿಸಿತು. ಹಲಗಲಿಯ ಬೇಡರು ತಮ್ಮ ಆಯುಧ ಹೊಂದಿರುವ ಹಕ್ಕನ್ನು ಪ್ರತಿಪಾದಿಸುವ ದೆಸೆಯಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿಹಾಡಿ, ಹುತಾತ್ಮರಾದರು. ಹೀಗೆ ಬ್ರಿಟೀಷರ ಆಡಳಿತ ಅವಧಿಯಲ್ಲಿ ಈ ಸಮುದಾಯದ ಜೀವನದ ಮೇಲೆ ಹಲವಾರು ರೀತಿಯ ದುಷ್ಪರಿಣಾಮಗಳನ್ನುಂಟು ಮಾಡಿತೆಂದು ಹೇಳಬಹುದು.

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರವರು ಸಂವಿಧಾನದಲ್ಲಿ ರೂಪಿಸಲಾದ ಮೀಸಲಾತಿ ಸೌಲಭ್ಯ ಹಾಗೂ ಕರ್ನಾಟಕದಲ್ಲಿ ಎಲ್.ಜಿ. ಹಾವನೂರುರವರು ಮಂಡಿಸಿ, ದೇವರಾಜ ಅರಸು ಜಾರಿಗೆ ತಂದ ಹಿಂದುಳಿದ ವರ್ಗಗಳ ಮೀಸಲಾತಿ ನೀತಿಯ ಹಿನ್ನೆಲೆಯಲ್ಲಿ ಈ ಸಮುದಾಯ ಈಗ ಚೇತರಿಸಿಕೊಳ್ಳುವ ಹಂತದಲ್ಲಿದೆ. ಆದರೂ ಈ ಸಮುದಾಯವು ಬಡತನ, ಅನಕ್ಷರತೆ, ಅನಾರೋಗ್ಯ ಮತ್ತು ಆರ್ಥಿಕವಾಗಿ ಇನ್ನೂ ಮುಂತಾದ ಸಮಸ್ಯೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಎದುರಿಸುತ್ತಿರುವುದನ್ನು ಕಾಣಬಹುದಾಗಿದೆ. ಸಂಶೋಧನಾ ಅಧ್ಯಯನದ ಕ್ಷೇತ್ರವಾದ ಕಲ್ಯಾಣ ಕರ್ನಾಟಕ (ಹೈ–ಕ) ದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹಾಗೂ ಉತ್ತರ ಕರ್ನಾಟಕದ ಕೆಲವು ಕಡೆಗಳಲ್ಲಿ ವಾಲ್ಮೀಕಿ ಹಾಗೂ ಇನ್ನಿತರ ಬುಡಕಟ್ಟಿನ ಕೆಲವು ಸಮುದಾಯಗಳಲ್ಲಿ ಇಂದಿಗೂ ಬಾಲ್ಯವಿವಾಹ, ವರದಕ್ಷಣೆ, ದೇವದಾಸಿ ಪದ್ಧತಿಗಳು ಪರಂಪರೆಯ ಹೆಸರಿನಲ್ಲಿ ಇಂದಿಗೂ ಪ್ರಚಲಿತದಲ್ಲಿವೆ. ಪ್ರಸ್ತುತ ಆಧುನಿಕ ಸಮಾಜದಲ್ಲಿ ಇವು ಅನಿಷ್ಟ ಪದ್ಧತಿಗಳೆಂದು ಜಾಗೃತಿಗೊಳಿಸುವ ಪ್ರಯತ್ನಗಳು ನಡೆಯುತ್ತಿವೆಯಾದರೂ ಧರ್ಮ, ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರ, ಆದಿವಾಸಿಗಳ, ದಲಿತರ ಶೋಷಣೆಗಳು ನಡೆಯುತ್ತಿದೆ. ಇದರ ಬಗ್ಗೆ ಜಾಗೃತಿ ಮೂಡಿಸಬೇಕಾದರೆ ಅವರಿಗೆ ಶಿಕ್ಷಣದ ಅರಿವು ಅಗತ್ಯ.

ಹೀಗೆ ಕರ್ನಾಟಕ ರಾಜ್ಯದಲ್ಲಿ ಭಾರತ ಸಂವಿಧಾನದನ್ವಯ ಈ ಸಮುದಾಯವನ್ನು ಪರಿಶಿಷ್ಟ ಪಂಗಡ (ಎಸ್.ಟಿ) ದಲ್ಲಿ ಸೇರಿಸಲಾಗಿದೆ. ಆದಾಗ್ಯೂ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಈ ಸಮುದಾಯ ಅಷ್ಟೊಂದು ಆಶಾದಾಯಕವಾಗಿ ಪ್ರಗತಿ ಸಾಧಿಸಿಲ್ಲ ಮತ್ತು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದೆ. ವಿಶೇಷವಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇಂದು ಬಡತನ, ಹಸಿವು, ನಿರ್ವಸತಿಕರಣ, ಶೈಕ್ಷಣಿಕ ಹಿಂದುಳಿದಿರುವಿಕೆ, ನಿರುದ್ಯೋಗ ಹಾಗೂ ರಾಜಕೀಯ ಭಾಗವಹಿಸುವಿಕೆಯ ಕೊರತೆ ಇನ್ನಿತರ ಸಮಸ್ಯೆಗಳಿಂದ ಈ ಸಮುದಾಯವನ್ನು ಬಾಧಿಸುತ್ತಿದೆ. ಕರ್ನಾಟಕದ ರಾಜ್ಯ ರಾಜಕಾರಣದಲ್ಲಿ 5ನೇ ಅತಿದೊಡ್ಡ ಸಮುದಾಯವಾದರೂ ಕೂಡ ರಾಜ್ಯದ ಅಧಿಕಾರ ಗದ್ದುಗೆಯನ್ನು ಹಿಡಿಯಲು ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಇದರಿಂದ ಈ ಸಮುದಾಯಕ್ಕೆ ರಾಜ್ಯ ರಾಜಕಾರಣದಲ್ಲಿ ಸರಿಯಾದ ರಾಜಕೀಯ ಪ್ರಾಧಾನ್ಯತೆ ಅಥವಾ ಪ್ರಶಾಶ್ಯತೆ ಸಿಗುತ್ತಿಲ್ಲ ಎಂಬುವುದು ಪ್ರತಿವರ್ತಿಗಳ ಅಭಿಪ್ರಾಯವಾಗಿದೆ. ಸಾವಿರಾರು ವರ್ಷಗಳ ಐತಿಹಾಸಿಕ ಪರಂಪರೆಯು ಈ ಸಮುದಾಯಕ್ಕಿದ್ದರು ಇಂದು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಹಿಂದುಳಿದೆ. ಈ ಸಮುದಾಯದ ಬಗೆಗಿರುವ ವಾಸ್ತವಿಕ ಸಮಸ್ಯೆಗಳನ್ನು ಚರ್ಚೆಗೊಳಪಡಿಸಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ. ಈ ಕಾರಣದಿಂದಾಗಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳ ಕುರಿತು ಸಂಶೋಧನೆ ನಡೆಸುವುದು ಹೆಚ್ಚು ಸೂಕ್ತವೆನಿಸಿತು. ಪ್ರಸ್ತುತ ಅಧ್ಯಯನವನ್ನು ಒಟ್ಟು ಐದು ಅಧ್ಯಾಯಗಳಾಗಿ

ವಿಂಗಡಿಸಿಕೊಂಡು ಪ್ರಶ್ನಾವಳಿಗಳ ಮೂಲಕ ಕ್ಷೇತ್ರಕಾರ್ಯ ಕೈಗೊಂಡು ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಈ ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಪ್ರಸ್ತುತ ಸಂಶೋಧನೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸುವ ಸಲುವಾಗಿ ಅಧ್ಯಯನದ ಪ್ರಾರಂಭದಲ್ಲಿ ಕೆಲವು ಪ್ರಾಕಲ್ಪನೆಗಳನ್ನು ರಚಿಸಿಕೊಳ್ಳಲಾಗಿತ್ತು. ಆ ಪ್ರಾಕಲ್ಪನೆಗಳನ್ನು ಅಧ್ಯಯನದ ನಂತರ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆ ಮತ್ತು ಸವಾಲುಗಳ ಕುರಿತು ಪ್ರತಿವರ್ತಿಗಳ ಪ್ರತಿಕ್ರಿಯೆಗಳ ಆಧಾರದ ಮೇಲೆ ನೈಜತೆಯನ್ನು ಆಧರಿಸಿ ಪ್ರಾಕಲ್ಪನೆಗಳ ಫಲಿತಾಂಶವನ್ನು ನಿರ್ಧಾರಿಸಲಾಗಿದ್ದು, ಅವುಗಳು ಈ ಕೆಳಗಿನಂತಿವೆ.

ಮೊದಲನೆಯದಾಗಿ, ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಗುಣಮಟ್ಟವು ಕುಂದಿದೆ ಎಂಬ ಪ್ರಾಕಲ್ಪನೆಯ ಬಗ್ಗೆ ಅವಲೋಕಿಸಿದಾಗ, ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಗುಣಮಟ್ಟವು ಕುಂದಿರುವುದು ಕಂಡುಬಂದಿದೆ. ಕ್ರಮವಾಗಿ ಶೇ.72 ಮತ್ತು ಶೇ.42.4 ರಷ್ಟು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಅಥವಾ ಗುಣಮಟ್ಟವು ಕಡಿಮೆಯಿರುವುದು ಅಧ್ಯಯನದಿಂದ ಕಂಡುಬರುತ್ತದೆ (ಕೋಷ್ಟಕ–4.50). ರಾಜಕೀಯವಾಗಿ ಈ ಸಮುದಾಯಕ್ಕೆ ಅವಕಾಶಗಳಿದ್ದರೂ ಅವರು ಸಕ್ರಿಯವಾಗಿ ರಾಜಕಾರಣದಲ್ಲಿ ಭಾಗವಹಿಸುತ್ತಿಲ್ಲ ಎಂಬುವುದು ಸ್ಪಷ್ಟವಾಗಿದೆ. ಇದಕ್ಕೆ ರಾಜಕೀಯ ಪ್ರಾತಿನಿಧ್ಯತೆ ಮತ್ತು ರಾಜಕೀಯ ಪ್ರಜ್ಞೆಯ ಮಟ್ಟ ಕಡಿಮೆ ಇರುವುದು ಅಧ್ಯಯನದಿಂದ ಕಂಡುಬಂದಿದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮುಖಂಡರನ್ನು ಪ್ರಶ್ನಿಸಿದಾಗ ಆರ್ಥಿಕವಾಗಿ ಸಮುದಾಯ ಬಡತನದಲ್ಲಿರುವುದು, ಅನಕ್ಷರತೆ, ಏಕತೆ ಇಲ್ಲದಿರುವುದು ಮುಂತಾದ ಕಾರಣಗಳಿಂದ ಈ ಸಮುದಾಯವು, ಹೆಚ್ಚಿನ ರಾಜಕೀಯ ಪ್ರಾತಿನಿಧಿತ್ವ ಮತ್ತು ರಾಜಕೀಯ ಪ್ರಜ್ಞೆಯನ್ನು ಹೊಂದಿಲ್ಲದಿರುವುದು ಹಾಗೂ ರಾಜಕೀಯ ಭಾ ಗವಹಿಸುವಿಕೆಯ ಗುಣಮಟ್ಟವು ಕಡಿಮೆ ಇರುವುದು ಕಂಡುಬಂದಿದೆ. ಹಾಗಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಗುಣಮಟ್ಟವು ಕುಂದಿದೆ ಎಂಬ ಪ್ರಾಕಲ್ಪನೆಯು ರುಜುವಾತಾಗಿದೆ. ಹಾಗಾಗಿ ರಾಜಕೀಯವಾಗಿ ಭಾಗವಹಿಸಲು ಸೂಕ್ತ ಅಗತ್ಯ ಕ್ರಮಗಳನ್ನು ಕೈಕೊಳ್ಳಬೇಕಾದ ಅಗತ್ಯತೆಯಿದೆ.

ಎರಡನೆಯದಾಗಿ, ತಿಳುವಳಿಕೆಯ ಕೊರತೆಯಿಂದಾಗಿ ವಾಲ್ಮೀಕಿ ಸಮುದಾಯದವರು ಸಮಗ್ರ ಕಲ್ಯಾಣಕ್ಕಾಗಿ ರಾಜಕೀಯವನ್ನು ಸದುಪಯೋಗ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂಬ

ಪ್ರಾಕಲ್ಪನೆಯ ಬಗ್ಗೆ ಅವಲೋಕಿಸಿದಾಗ, ಕ್ರಮವಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಶೇ.47.3 ಮತ್ತು ಶೇ.41.6 ರಷ್ಟು ಪ್ರತಿವರ್ತಿಗಳು ಸೂಕ್ತ ರಾಜಕೀಯ ತಿಳುವಳಿಕೆಯ ಕೊರತೆಯಿಂದಾಗಿ ಸಮಗ್ರ ಕಲ್ಯಾಣಕ್ಕಾಗಿ ರಾಜಕೀಯವನ್ನು ಸದುಪಯೋಗ ಪಡೆದುಕೊಳ್ಳುವಲ್ಲಿ ವಿಫಲರಾಗಿರುವುದು ಕಂಡುಬರುತ್ತದೆ. ಅಲ್ಲದೇ ಅನಕ್ಷರತೆ, ಬಡತನ, ರಾಜಕೀಯ ಆಸಕ್ತಿ ಇಲ್ಲದಿರುವುದು ಮತ್ತು ಕೌಟಂಬಿಕ ಕಾರಣಗಳಿಂದ ರಾಜಕೀಯವನ್ನು ಸದುಪಯೋಗ ಪಡೆದುಕೊಳ್ಳುವಲ್ಲಿ ವಿಫಲರಾಗಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ (ಕೋಷ್ಟಕ–4.62). ಹಾಗಾಗಿ ತಿಳುವಳಿಕೆಯ ಕೊರತೆಯಿಂದಾಗಿ ವಾಲ್ಮೀಕಿ ಸಮುದಾಯದವರು ಸಮಗ್ರ ಕಲ್ಯಾಣಕ್ಕಾಗಿ ರಾಜಕೀಯವನ್ನು ಸದುಪಯೋಗ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂಬ ಪ್ರಾಕಲ್ಪನೆಯು ರುಜುವಾತಾಗಿದೆ. ಭಾರತ ಸಂವಿಧಾನದ 73ನೇ ತಿದ್ದುಪಡಿಯ 243ನೇ (ಡಿ) ವಿಧಿಯ ಅನುಸಾರವಾಗಿ ಪಂಚಾಯತ್ ರಾಜ್ ವ್ಯವಸ್ಥೆಯ ಎಲ್ಲಾ ಹಂತಗಳಲ್ಲಿ ಮೀಸಲಾತಿ ವ್ಯವಸ್ಥೆಯನ್ನು ಕಲ್ಪಿಸಿ ಅವರ ಕಲ್ಯಾಣಕ್ಕಾಗಿ ಅಥವಾ ಅಭಿವೃದ್ಧಿಗಾಗಿ ಅವಕಾಶ ಮಾಡಿಕೊಡಲಾಗಿದೆ ಹಾಗೂ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಲ್ಲಿಯೂ ಕೂಡ 3 ಸ್ಥರದ ವ್ಯವಸ್ಥೆಯಲ್ಲಿಯೂ ಸಹ ಈ ಸಮುದಾಯಕ್ಕೆ ಪಾಲ್ಗೊಳ್ಳುವಿಕೆಯಲ್ಲಿ ಅವಕಾಶ ಕಲ್ಪಿಸಿದೆ. ಆದರೂ ಈ ಸಮುದಾಯ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ರಾಜಕೀಯವಾಗಿ ಹಿಂದುಳಿದಿರುವುದು ಅಧ್ಯಯನದಿಂದ ಕಂಡುಬಂದಿದೆ. ಈ ಸಮುದಾಯಕ್ಕೆ ಸೂಕ್ತ ರಾಜಕೀಯ ತಿಳುವಳಿಕೆಯ ಕೊರತೆಯಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಹಾಗಾಗಿ ಈ ಸಮುದಾಯಕ್ಕೆ ಇದರ ಕುರಿತು ಹೆಚ್ಚು ಹೆಚ್ಚು ಅರಿವು ಮೂಡಿಸುವುದು ಹಾಗೂ ರಾಜಕೀಯ ಪ್ರಜ್ಞೆ ಬೆಳೆಸುವುದು ಸೂಕ್ತ.

ಮೂರನೆಯದಾಗಿ, ಅನಕ್ಷರತೆ ಮತ್ತು ಬಡತನದಂತಹ ಸಮಸ್ಯೆಗಳಿಂದ ವಾಲ್ಮೀಕಿ ಸಮುದಾಯದವರು ರಾಜಕೀಯ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುತ್ತಿಲ್ಲ ಎಂಬ ಪ್ರಾಕಲ್ಪನೆಯ ಬಗ್ಗೆ ಅವಲೋಕಿಸಿದಾಗ, ಗುಲಬರ್ಗಾ ಜಿಲ್ಲೆಯಲ್ಲಿ ಶೇ.53.3ರಷ್ಟು ಬಡತನದಿಂದ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಶೇ.64.8ರಷ್ಟು ಅನಕ್ಷರತೆಯಂತಹ ಸಮಸ್ಯೆಯಿಂದಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುತ್ತಿಲ್ಲ ಎಂಬುವುದು ಕಂಡುಬಂದಿದೆ (ಕೋಷ್ಟಕ–4.63). ಹಾಗಾಗಿ ಅನಕ್ಷರತೆ ಮತ್ತು ಬಡತನದಂತಹ ಸಮಸ್ಯೆಗಳಿಂದ ವಾಲ್ಮೀಕಿ ಸಮುದಾಯದವರು ರಾಜಕೀಯ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುತ್ತಿಲ್ಲ ಎಂಬ ಪ್ರಾಕಲ್ಪನೆಯು ಸಾಬೀತಾಗಿದೆ. ಈ ಸಮುದಾಯವು ಸೇರಿದಂತೆ ಹಿನ್ನಿತರ ಬುಡಕಟ್ಟು ಸಮುದಾಯದ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ಮತ್ತು ಬಡತನದಂತಹ ಸಮಸ್ಯೆಯನ್ನು ಹೋಗಲಾಡಿಸಲು ಹೊಸ ಹೊಸ ಯೋಜನೆಗಳನ್ನು ಜಾರಿಗೆ ತರುವ ಅಗತ್ಯವಿದೆ.

ಈ ಮೇಲಿನ ಎಲ್ಲಾ ಪ್ರಾಕಲ್ಪನೆಗಳ ಸಾಧ್ಯಸಾಧ್ಯತೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವುಗಳನ್ನು ಒಪ್ಪಿಕೊಳ್ಳುವ ನಿಲುವುಗಳನ್ನು ಸೂಕ್ತ ವಿವರಣೆಗಳ ಆಧಾರದ ಮೇಲೆ ಇಲ್ಲಿ ನಮೂದಿಸಲಾಗಿದೆ. ಒಟ್ಟಿನಲ್ಲಿ ಈ ಅಧ್ಯಯನಕ್ಕೆ ಬಳಸಿಕೊಂಡ ಪ್ರಾಕಲ್ಪನೆಗಳು ಸೂಕ್ತ ನಿರ್ದೇಶನವನ್ನು ನೀಡುವುದರ ಮುಖಾಂತರ ಪ್ರಸ್ತುತ ಅಧ್ಯಯನಕ್ಕೆ ಒಂದು ಅರ್ಥಪೂರ್ಣ ಚೌಕಟ್ಟನ್ನು ನೀಡುವಲ್ಲಿ ಸಹಕಾರಿಯಾಗಿದೆ.

ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಫಲಿತಗಳು:

ಈ ಸಂಶೋಧನಾ ಕ್ಷೇತ್ರಕಾರ್ಯದಿಂದ ಕಂಡುಬಂದಿರುವ ಫಲಿತಗಳನ್ನು ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

1. ವಾಲ್ಮೀಕಿ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಿನ್ನೆಲೆಗೆ ಸಂಬಂಧಿಸಿದ ಫಲಿತಗಳು

- ಪ್ರಸುತ್ತ ಅಧ್ಯಯನದಲ್ಲಿ ಕ್ಷೇತ್ರಕಾರ್ಯಕ್ಕೆಂದು ಒಟ್ಟು 400 ಪ್ರತಿವರ್ತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಅದರಲ್ಲಿ ಶೇ.78 ಪುರುಷ, ಶೇ.22 ಮಹಿಳೆ ಮತ್ತು ಶೇ. 50.4 ಪುರುಷ, 49.6 ಮಹಿಳೆರು ಕ್ರಮವಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಮಾಹಿತಿದಾರರಿದ್ದಾರೆ. ವಾಲ್ಮೀಕಿ ಸಮುದಾಯದ ಜಾತಿಯನ್ನು ಗಮನಿಸಿದಾಗ ಹೆಚ್ಚಿನ ಪ್ರಮಾಣದಲ್ಲಿ ವಾಲ್ಮೀಕಿ ಜಾತಿ ಇರುವುದು ಕ್ರಮವಾಗಿ ಶೇ. 82, ಶೇ.69 ರಷ್ಟು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕಂಡುಬಂದಿದೆ.
- ಪ್ರಸುತ್ತ ಆಯ್ಕೆ ಮಾಡಿಕೊಂಡ ಪ್ರತಿವರ್ತಿಗಳಲ್ಲಿ 18–30 (ಶೇ.15), 31–40 (ಶೇ.27), 41–50 (ಶೇ.32), 51ಕ್ಕಿಂತ ಹೆಚ್ಚು ವಯಸ್ಸಿನವರು ಶೇ.25 ರಷ್ಟು ಗುಲಬರ್ಗಾ ಜಿಲ್ಲೆಯಲ್ಲಿ ಕಂಡುಬಂದರೆ, ಯಾದಗಿರಿ ಜಿಲ್ಲೆಯಲ್ಲಿ 51ಕ್ಕಿಂತ ಹೆಚ್ಚು ವಯಸ್ಸಿನವರು ಶೇ.36 ರಷ್ಟು ಹೆಚ್ಚಾಗಿ ಕಂಡುಬಂದಿದ್ದಾರೆ. ವೈವಾಹಿಕ ಸ್ಥಾನಮಾನವನ್ನು ಅವಲೋಕಿಸಿದಾಗ ಇಲ್ಲಿ ವಿವಾಹಿತರ ಪ್ರಮಾಣ ಕ್ರಮವಾಗಿ ಶೇ. 80 ಮತ್ತು ಶೇ. 70 ರಷ್ಟು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಹಾಗೆಯೇ ಅವಿವಾಹಿತರು ಕ್ರಮವಾಗಿ ಶೇ.15 ಮತ್ತು ಶೇ.22 ರಷ್ಟು ಈ ಜಿಲ್ಲೆಯಲ್ಲಿ ಕಂಡುಬರುತ್ತಾರೆ.
- ವಿದ್ಯಾರ್ಹತೆಯನ್ನು ಗಮನಿಸಿದಾಗ ಅನಕ್ಷರಸ್ಥರು, ಪ್ರಾಥಮಿಕ, ಮಾಧ್ಯಮಿಕ, ಪಿಯುಸಿ, ಪದವಿ, ಸ್ನಾತಕೋತ್ತರ ಮತ್ತು ವೃತ್ತಿಪರ ಕೋರ್ಸ್ ಒಳಗೊಂಡಿದ್ದು, ಅದರಲ್ಲಿ ಅಧಿಕ ಪ್ರಮಾಣದಲ್ಲಿ ಅನಕ್ಷರಸ್ಥರು ಇರುವುದು ಕಂಡುಬಂದಿದೆ. ಅಂದರೆ ಕ್ರಮವಾಗಿ ಶೇ.63 ಮತ್ತು ಶೇ. 67 ರಷ್ಟು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಉನ್ನತ ಶಿಕ್ಷಣದಲ್ಲಿ ಈ ಸಮುದಾಯದ ಪ್ರತಿನಿಧಿಕರಣ ತೀರಾ ಕಡಿಮೆ ಇರುವುದು ಅಧ್ಯಯನದಿಂದ ಕಂಡುಬಂದಿದೆ.

- ಮಾಹಿತಿದಾರರ ಉದ್ಯೋಗವನ್ನು ಗಮನಿಸಿದಾಗ ಕೃಷಿ, ಕೂಲಿ, ವ್ಯಾಪಾರ, ಸ್ವಯಂ ಉದ್ಯೋಗ, ಸರ್ಕಾರಿ, ಖಾಸಗಿ ಮತ್ತು ಇತರೆ ಕೆಲಸಗಾರರಿರುವುದು ಕಂಡುಬರುತ್ತದೆ. ಅದರಲ್ಲಿ ಹೆಚ್ಚಿನ ಮಾಹಿತಿದಾರರು ಕೃಷಿ ಮತ್ತು ಕೂಲಿ ಮಾಡುವರರ ಸಂಖ್ಯೆ ಅಧಿಕ ಪ್ರಮಾಣ (ಶೇ.37, ಶೇ. 33ರಷ್ಟು ಗುಲಬರ್ಗಾ ಮತ್ತು ಶೇ.49, ಶೇ.25ರಷ್ಟು ಯಾದಗಿರಿ) ದಲ್ಲಿ ಅಧ್ಯಯನದಿಂದ ತಿಳಿದುಬಂದಿದೆ. ಆದಾಯವನ್ನು ಅವಲೋಕಿಸಿದಾಗ 11 ಸಾವಿರದಿಂದ 20ಸಾವಿರಕ್ಕಿಂತ ಕಡಿಮೆ ಆದಾಯವಿರುವವರು ಕ್ರಮವಾಗಿ ಈ ಎರಡು ಜಿಲ್ಲೆಯಲ್ಲಿ ಶೇ.46 ಮತ್ತು ಶೇ.47ರಷ್ಟು ಕಂಡುಬಂದಿದೆ. ಬಡತನ ರೇಖೆಗಿಂತ ಕೆಳಗೆ ಇರುವವರ ಪ್ರಮಾಣ ಅಧಿಕವಾಗಿ ಕಂಡುಬಂದಿದ್ದು, ಕೂಲಿಗಾಗಿ ದೊಡ್ಡ ದೊಡ್ಡ ನಗರಗಳಿಗೆ ವಲಸೆ (ಗೂಳೆ) ಹೋಗುವುದು ಅಧ್ಯಯನದಿಂದ ತಿಳಿದುಬಂದಿದೆ.
- ಪ್ರಸ್ತುತ ಅಧ್ಯಯನದಲ್ಲಿ ಕುಟುಂಬವನ್ನು ಗಮನಿಸಿದಾಗ ಕ್ರಮವಾಗಿ ಶೇ. 94 ಮತ್ತು ಶೇ.94.4ರಷ್ಟು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅತಿ ಹೆಚ್ಚು ವಿಭಕ್ತ ಕುಟುಂಬವಿರುವುದು ಕಂಡುಬರುತ್ತದೆ. ಆಧುನಿಕತೆಯ ಪರಿಣಾಮಗಳು ಸಂಸ್ಕೃತಿಯ ಬದಲಾವಣೆಯನ್ನು ನಾವು ಇಂದು ವಿಭಕ್ತ ಕುಟುಂಬದಲ್ಲಿ ಕಾಣುತ್ತೇವೆ. ಕುಟುಂಬದ ಸದಸ್ಯರ ಸಂಖ್ಯೆಯನ್ನು ಗಮನಿಸಿದಾಗ 1 ರಿಂದ 5 ಜನರಿರುವ ಕುಟುಂಬಗಳು ಹೆಚ್ಚಾಗಿ ಕಂಡುಬಂದಿವೆ (ಗುಲಬರ್ಗಾ ಶೇ.58 ಮತ್ತು ಯಾದಗಿರಿ ಶೇ.77.6ರಷ್ಟು). ಕುಟುಂಬದ ಜವಾಬ್ದಾರಿಯನ್ನು ಅಲೋಕಿಸಿದಾಗ ಈ ಸಮುದಾಯದಲ್ಲಿ ಸ್ತ್ರೀಯರಿಗಿಂತ ಪುರುಷರೇ ಅಧಿಕವಾಗಿ ಮನೆಯ ಜವಾಬ್ದಾರಿಯನ್ನು ನಿರ್ವಹಿಸುತ್ತುದ್ದು ಕಂಡುಬರುತ್ತದೆ (ಕ್ರಮವಾಗಿ ಶೇ. 93.3 ಮತ್ತು 78.4ರಷ್ಟು). ಆದರೆ ಸ್ತ್ರೀಯರು ಅಲ್ಪ ಪ್ರಮಾಣದಲ್ಲಿ ಕೆಲವು ಕಡೆ ಕೌಟಂಬಿಕ ನಿರ್ವವಣೆ ಮಾಡುತ್ತಿರುವುದು ಅಧ್ಯಯನದಿಂದ ಕಂಡುಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆ ಈ ಸಮುದಾಯದಲ್ಲಿ ಇರುವುದು ಅಧ್ಯಯನದಿಂದ ಕಂಡುಬಂದಿದೆ.
- ಅಧ್ಯಯನಕ್ಕೊಳಪಟ್ಟ ಪ್ರತಿವರ್ತಿಗಳಲ್ಲಿ ಸ್ವಂತ ಮನೆಗಳನ್ನು ಹೊಂದಿದವರು ಕ್ರಮವಾಗಿ ಶೇ.92.7 ಮತ್ತು ಶೇ.90.8ರಷ್ಟು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಮನೆ ಹೊಂದಿದವರಲ್ಲಿ ಸರ್ಕಾರಿ ಯೋಜನೆಯ ಮನೆ ಇದ್ದವರು ಕ್ರಮವಾಗಿ ಶೇ.61.3 ಮತ್ತು 69.6ರಷ್ಟು ಹೆಚ್ಚಾಗಿ ಕಂಡುಬರುತ್ತಾರೆ. ಜೊತೆಗೆ ನೀರಿನ ವ್ಯವಸ್ಥೆ, ಸ್ನಾನಗೃಹ ಮತ್ತು ಶೌಚಾಲಯದಂತಹ ಸೌಲಭ್ಯಗಳು ಹೆಚ್ಚಾಗಿ ಕ್ಷೇತ್ರಕಾರ್ಯ ಸಮಯದಲ್ಲಿ ಕಂಡುಬರುವುದಿಲ್ಲ.
- ಮಾಹಿತಿದಾರರ ಜಮೀನಿನ ವಿವರವನ್ನು ಅವಲೋಕಿಸಿದಾಗ, ಶೇ.66.7ರಷ್ಟು ಪ್ರತಿವಾದಿಗಳು ಯಾವುದೇ ಜಮೀನಿನ್ನು ಕೂಡ ಹೊಂದಿಲ್ಲದಿರುವುದು ಗುಲಬರ್ಗಾ ಜಿಲ್ಲೆಯಲ್ಲಿ ಕಂಡುಬಂದರೆ, ಯಾದಗಿರಿ ಜಿಲ್ಲೆಯಲ್ಲಿ ಶೇ.53.2ರಷ್ಟು ಮಾಹಿತಿದಾರರು ಜಮೀನನ್ನು ಹೊಂದಿರುವುದು ಕಂಡುಬಂದಿದೆ. ಕೇವಲ 1 ರಿಂದ 3 ಎಕರೆ ಜಮೀನನ್ನು ಹೊಂದಿರುವರು ಹೆಚ್ಚಾಗಿ ಶೇ.23.3 ಮತ್ತು ಶೇ.44ರಷ್ಟು ಕ್ರಮವಾಗಿ

ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಮಾಹಿತಿದಾರರ ಜಮೀನುಗಳು ಬಹಳ ಫಲವತ್ತತೆಯಿಂದ ಕೂಡಿರದ ಕಾರಣ ಇಳುವರಿ ಪ್ರಮಾಣ ಕಡಿಮೆ ಇದ್ದು, ಆದಾಯ ಅತ್ಯಲ್ಪ ಪ್ರಮಾಣದಲ್ಲಿರುವುದು ಅಧ್ಯಯನದಿಂದ ಕಂಡುಬಂದಿದೆ. ಪ್ರತಿವರ್ತಿಗಳ ಮನೆಯಲ್ಲಿ ಯಾರಾದರೂ ಸರ್ಕಾರಿ ಉದ್ಯೋಗದಲ್ಲಿದ್ದಾರೆಯೇ ಎಂದು ಕೇಳಿದಾಗ ಶೇ. 97.3 ಮತ್ತು ಶೇ.97.6ರಷ್ಟು ಕ್ರಮವಾಗಿ ಈ ಜಿಲ್ಲೆಗಳಲ್ಲಿ ಸರ್ಕಾರಿ ಹುದ್ದೆ ಹೊಂದಿಲ್ಲದಿರುವುದು ಕಂಡುಬಂದಿದೆ.

- ಮಾಹಿತಿದಾರರ ಜಾತಿಯ ವೃತ್ತಿಯನ್ನು ಗಮನಿಸಿದಾಗ ಕ್ರಮವಾಗಿ ಶೇ.79 ಮತ್ತು ಶೇ.56ರಷ್ಟು ಜನರು ಈ ಎರಡು ಜಿಲ್ಲೆಗಳಲ್ಲಿ ತಮ್ಮ ಜಾತಿ ವೃತ್ತಿಯನ್ನು ಅನುಸರಿಸುತ್ತಿಲ್ಲ ಎಂದು ಅಧ್ಯಯನದಿಂದ ಕಂಡುಬಂದಿದ್ದು, ಆದರೆ ಕೆಲವು ಜನರು ಬೇಟೆಯಾಡುವುದು ನಮ್ಮ ಸಮುದಾಯದ ವೃತ್ತಿ ಎಂದು ಹೇಳಿದ್ದಾರೆ. ಕಾನೂನಿನ ಪ್ರಕಾರ ಬೇಟೆಯಾಡುವುದು ಅಪರಾಧವಾಗಿದೆ. ಈ ಸಮುದಾಯವು ಇಂದು ಕೃಷಿ ಮತ್ತು ಕೂಲಿಗೆ ಹೆಚ್ಚಾಗಿ ಅಂಟಿಕೊಂಡಿರುವುದು ಕಂಡುಬಂದಿದೆ.
- ಮಾಹಿತಿದಾರರಲ್ಲಿ ಕ್ರಮವಾಗಿ ಶೇ.93 ಮತ್ತು ಶೇ.90ರಷ್ಟು ವಿವಾಹ ಸಂದರ್ಭದಲ್ಲಿ ಜಾತಕ ಕೇಳುವ ಪದ್ಧತಿಯಿದೆ ಎಂಬುವುದು ಅಧ್ಯಯನದಿಂದ ಕಂಡುಬಂದಿದೆ. ಯಾವ ರೀತಿಯ ಪದ್ಧತಿಗಳು ಎಂದಾಗ ಗೋತ್ರ ಎಂದು ಶೇ.89 ಮತ್ತು ಶೇ.90ರಷ್ಟು ಜನರು ಹೇಳಿದ್ದು ಕಂಡುಬಂದಿದೆ.
- ಅಂತರ್ಜಾತಿ ವಿವಾಹಕ್ಕೆ ಬೆಂಬಲಿಸುತ್ತಿಲ್ಲ ಎಂದು ಕ್ರಮವಾಗಿ ಶೇ. 64 ಮತ್ತು ಶೇ.54ರಷ್ಟು ಕಂಡುಬರುತ್ತದೆ. ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಬಾಲ್ಯ ವಿವಾಹಗಳ ಪ್ರಮಾಣ ಅಧಿಕವಾಗಿ ಕಂಡುಬರುತ್ತದೆ (ಶೇ.76 ಮತ್ತು ಶೇ.88). ಶಿಕ್ಷಣದ ಕೊರತೆ ಮತ್ತು ಬಡತನದಂತಹ ಸಮಸ್ಯೆಯಿಂದಾಗಿ ಬಾಲ್ಯ ವಿವಾಹ ಹೆಚ್ಚಳಕ್ಕೆ ಕಾರಣ ಎಂದು ಹೇಳಬಹುದು. ವರದಕ್ಷಿಣೆ ಪದ್ಧತಿ ಕ್ರಮವಾಗಿ ಶೇ. 94 ಮತ್ತು 90ರಷ್ಟು ಹೆಚ್ಚಾಗಿ ಕಂಡುಬರುತ್ತದೆ.
- ಪ್ರತಿವರ್ತಿಗಳು ಅನಾರೋಗ್ಯಕ್ಕೆ ಒಳಗಾದಾಗ ದೇವರ ಮೊರೆ ಹೋಗುವುದು, ಮಾಟ–ಮಂತ್ರ ಮಾಡುವುದಕ್ಕಿಂತ, ಆಸ್ಪತ್ರೆಗೆ ಹೋಗುವವರ ಪ್ರಮಾಣ ಶೇ.75 ಮತ್ತು 70ರಷ್ಟಿರುವುದು ಅಧ್ಯಯನದಿಂದ ಕಂಡುಬರುತ್ತದೆ. ಭೂತ ಪ್ರೇತಗಳಲ್ಲಿ ಶೇ.94 ಮತ್ತು ಶೇ.97ರಷ್ಟು ನಂಬಿಕೆ ಇರುವುದು ಕಂಡುಬರುತ್ತದೆ. ಶೇ.72 ಮತ್ತು 66ರಷ್ಟು ಹಿರಿಯರ ನಂಬಿಕೆ ಇಟ್ಟುಕೊಂಡಿದ್ದರಿಂದ ಎಂದು ಕಾರಣ ತಿಳಿದ್ದು. ಅಧ್ಯಯನದಿಂದ ಕಂಡುಬಂದಿದೆ.
- ಶೇ.65 ಮತ್ತು ಶೇ.79ರಷ್ಟು ಪ್ರತಿವರ್ತಿಗಳು ಸರ್ಕಾರದ ಸೌಲಭ್ಯವನ್ನು ಪಡೆದುಕೊಂಡಿಲ್ಲದಿರುವುದು ಕಂಡುಬರುತ್ತದೆ. ಕಡಿಮೆ ಪ್ರಮಾಣದಲ್ಲಿ ಪ್ರತಿವರ್ತಿಗಳು ಕೃಷಿ ಸಾಲ ಯೋಜನೆ ಎಂಬ ಸೌಲಭ್ಯಯನ್ನು ಶೇ.12 ಮತ್ತು 09ರಷ್ಟು ಮಾತ್ರ ಪಡೆದುಕೊಂಡಿರುವುದು ಕಂಡುಬರುತ್ತದೆ. ಯಾಕೆ ಸೌಲಭ್ಯವನ್ನು

ಪಡಿದುಕೊಂಡಿಲ್ಲ ಎಂದಾಗ ಕ್ರಮವಾಗಿ ಶೇ.32 ಮತ್ತು 46ರಷ್ಟು ತಿಳುವಳಿಕೆ ಇಲ್ಲದಿರುವುದು ಕಂಡುಬರುತ್ತದೆ.

- ಪ್ರತಿವರ್ತಿಗಳ ಕುಟುಂಬದಲ್ಲಿ ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಖ್ಯೆಯನ್ನು ಗಮನಿಸಿದಾಗ ಶೇ.9ರಷ್ಟು ಗಂಡು, ಶೇ.2ರಷ್ಟು ಹೆಣ್ಣು ಗುಲಬರ್ಗಾ ಜಿಲ್ಲೆಯಲ್ಲಿ ಕಂಡುಬಂದರೆ, ಯಾದಗಿರಿ ಜಿಲ್ಲೆಯಲ್ಲಿ ಶೇ.9ರಷ್ಟು ಗಂಡು, ಶೇ.4ರಷ್ಟು ಹೆಣ್ಣು ಮಕ್ಕಳು ಕಂಡುಬರುತ್ತಾರೆ. ಶಾಲೆ ಬಿಟ್ಟಿರುವ ಮಕ್ಕಳ ಸಂಖ್ಯೆಯನ್ನು ಗಮನಿಸಿದಾಗ ಶೇ.25ರಷ್ಟು ಗಂಡು, ಶೇ.10ರಷ್ಟು ಹೆಣ್ಣು ಮಕ್ಕಳು ಗುಲಬರ್ಗಾ ಜಿಲ್ಲೆಯಲ್ಲಿ ಕಂಡುಬಂದರೆ, ಯಾದಗಿರಿ ಜಿಲ್ಲೆಯಲ್ಲಿ ಶೇ.17ರಷ್ಟು ಗಂಡು, ಶೇ.12ರಷ್ಟು ಹೆಣ್ಣು ಮಕ್ಕಳು ಶಾಲೆ ಬಿಟ್ಟಿರುವುದು ಕಂಡುಬರುತ್ತದೆ. ಮಧ್ಯದಲ್ಲಿ ಶಾಲೆ ಬಿಡಲು ಕಾರಣವನ್ನು ಅವಲೋಕಿಸಿದಾಗ ಕ್ರಮವಾಗಿ ಶೇ.52 ಮತ್ತು ಶೇ.69ರಷ್ಟು ಬಡತನದಿಂದ ಶಾಲೆ ಬಿಟ್ಟಿರುವುದು ಅಧ್ಯಯನದಿಂದ ಕಂಡುಬರುತ್ತದೆ.

2. ರಾಜಕೀಯ ಭಾಗವಹಿಸುವಿಕೆಯ ಸ್ವರೂಪಕ್ಕೆ ಸಂಬಂಧಿಸಿದ ಫಲಿತಗಳು

- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಪ್ರತಿವರ್ತಿಗಳು ಜನಪ್ರತಿನಿಧಿಗಳಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶವನ್ನು ಹೊಂದಿಲ್ಲ ಎನ್ನುವುದು ಈ ಅಧ್ಯಯನದಿಂದ ತಿಳಿದುಬಂದಿದೆ. ಗುಲಬರ್ಗಾದ 35.6% ರಷ್ಟು ಪ್ರತಿವರ್ತಿಗಳು ಯಾವುದೇ ರಾಜಕೀಯ ಸದಸ್ಯತ್ವವನ್ನು ಹೊಂದಿಲ್ಲ. ಯಾದಗಿರಿಯ 64.4% ರಷ್ಟು ಪ್ರತಿವರ್ತಿಗಳು ರಾಜಕೀಯ ಸದಸ್ಯತ್ವವನ್ನು ಹೊಂದಿಲ್ಲ ಎನ್ನುವುದನ್ನು ಈ ಅಧ್ಯಯನ ಗಮನಿಸಿದೆ.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ಅವಕಾಶ ತೀರಾ ಕಡಿಮೆ ಇದೆ ಎನ್ನುವುದನ್ನು ಈ ಅಧ್ಯಯನ ಗುರುತಿಸುತ್ತದೆ. ಗುಲಬರ್ಗಾ ಜಿಲ್ಲೆಯ 70.77% ರಷ್ಟು ಪ್ರತಿವರ್ತಿಗಳು ಮಹಿಳೆಯರಿಗೆ ರಾಜಕೀಯದಲ್ಲಿ ಭಾಗವಹಿಸುವ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸುತ್ತಾರೆ. ಯಾದಗಿರಿಯ 62% ರಷ್ಟು ಪ್ರತಿವರ್ತಿಗಳು ಮಹಿಳೆಯರಿಗೆ ರಾಜಕೀಯದಲ್ಲಿ ಭಾಗವಹಿಸುವ ಅವಕಾಶವಿಲ್ಲವೆನ್ನುತ್ತಾರೆ. ಆದುದರಿಂದ ಈ ಜಿಲ್ಲೆಗಳಲ್ಲಿ ವಾಲ್ಮೀಕಿ ಸಮುದಾಯದ ಮಹಿಳೆಯರು ರಾಜಕೀಯ ಪ್ರಕ್ರಿಯೆಯಿಂದ ವಂಚಿತರಾಗಿರುತ್ತಾರೆ.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳು ರಾಜಕೀಯದಲ್ಲಿ ಆಸಕ್ತರಾಗಿಲ್ಲ ಎನ್ನುವುದನ್ನು ಈ ಅಧ್ಯಯನ ಗಮನಿಸುತ್ತದೆ. ಗುಲಬರ್ಗಾ ಜಿಲ್ಲೆಯ 59.3% ರಷ್ಟು ಪ್ರತಿವರ್ತಿಗಳು ರಾಜಕೀಯದಲ್ಲಿ ನಿರಾಸಕ್ತಿರಾದರೆ, ಯಾದಗಿರಿಯ 76.4% ರಷ್ಟು ಪ್ರತಿವರ್ತಿಗಳು ರಾಜಕೀಯದಲ್ಲಿ ನಿರಾಸಕ್ತರಾಗಿದ್ದಾರೆ ಎಂಬುದನ್ನು ಈ ಅಧ್ಯಯನದಿಂದ ತಿಳಿದುಬಂದಿದೆ. ಆದುದರಿಂದ ಅವರ ರಾಜಕೀಯ ಭಾಗವಹಿಸುವಿಕೆಯ ಸ್ವರೂಪವು ಭಿನ್ನವಾಗಿದೆ.

- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳಲ್ಲಿ ಜನಪ್ರತಿನಿಧಿಗಳಾಗಿ ಆಯ್ಕೆಗೊಂಡವರ ಸಂಖ್ಯೆ ತುಂಬಾ ಕಡಿಮೆಯಿದೆ ಎಂಬುದನ್ನು ಈ ಅಧ್ಯಯನ ಸಾಬೀತುಪಡಿಸುತ್ತದೆ. ರಾಜಕೀಯ ಪ್ರತಿನಿಧಿಗಳಾಗುವ ಅವಕಾಶದ ಕೊರತೆಯನ್ನು ಇಲ್ಲಿ ಕಾಣಬಹುದು. ಗುಲಬರ್ಗಾದ 84.7% ರಷ್ಟು ಪ್ರತಿವರ್ತಿಗಳು ಯಾವುದೇ ರಾಜಕೀಯ ಹುದ್ದೆಗಳನ್ನು ಹೊಂದಿಲ್ಲವೆಂದು ಹೇಳಿದರೆ, ಯಾದಗಿರಿಯ 90.8% ರಷ್ಟು ಪ್ರತಿವರ್ತಿಗಳು ಯಾವುದೇ ರಾಜಕೀಯ ಪ್ರತಿನಿಧಿತ್ವವನ್ನು ಹೊಂದಿಲ್ಲವೆಂದು ಈ ಅಧ್ಯಯನದಿಂದ ಕಂಡುಬಂದಿದೆ.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಪ್ರತಿವರ್ತಿಗಳಲ್ಲಿ ಜನಪ್ರತಿನಿಧಿಗಳಾಗಿ ಆಯ್ಕೆಯಾದವರಲ್ಲಿ ಬಹುತೇಕರು ತಮ್ಮ ಸಮುದಾಯ ಮತ್ತು ಸ್ವ–ಪರಿಶ್ರಮದಿಂದ ರಾಜಕೀಯ ಪ್ರವೇಶ ಮಾಡಿರುತ್ತಾರೆ ಎನ್ನುವುದನ್ನು ಈ ಅಧ್ಯಯನ ತಿಳಿಸುತ್ತದೆ. ರಾಜಕೀಯ ಪಕ್ಷಗಳು ವಾಲ್ಮೀಕಿ ಸಮುದಾಯವನ್ನು ಪರಿಗಣಿಸುವಲ್ಲಿ ಹಿಂದುಳಿದ್ದಾರೆ ಎಂದು ಈ ಅಧ್ಯಯನದಿಂದ ಕಂಡುಬಂದಿದೆ. ಗುಲಬರ್ಗಾದ 2.7% ರಷ್ಟು ಪ್ರತಿವರ್ತಿಗಳು ರಾಜಕೀಯ ಪ್ರೇರಣೆಯಿಂದ ರಾಜಕೀಯ ಪ್ರವೇಶ ಮಾಡಿದರೆಂದು ಹೇಳಿದರೆ, ಯಾದಗಿರಿಯ 1.6% ರಷ್ಟು ಪ್ರತಿವರ್ತಿಗಳು ರಾಜಕೀಯ ಪ್ರವೇಶಕ್ಕೆ ರಾಜಕೀಯ ಪಕ್ಷದ ಬೆಂಬಲವಿದೆ ಎನ್ನುತ್ತಾರೆ.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳು ಟಿ. ವಿ ಮಾಧ್ಯಮದ ಮೂಲಕ ರಾಜಕೀಯ ವಿಚಾರಗಳನ್ನು ತಿಳಿದುಕೊಳ್ಳುತ್ತಾರೆ ಎಂದು ಈ ಅಧ್ಯಯನ ತಿಳಿಸುತ್ತದೆ. ಅಲ್ಲದೇ ದಿನಪತ್ರಿಕೆಯನ್ನು ಓದುವ ಹವ್ಯಾಸ ತೀರಾ ಕಡಿಮೆಯಿರುವುದು ಕಂಡುಬಂದಿದೆ. ಗುಲಬರ್ಗಾ ಜಿಲ್ಲೆಯ 4% ರಷ್ಟು ಪ್ರತಿವರ್ತಿಗಳು ದಿನಪತ್ರಿಕೆಯ ಮೂಲಕ ರಾಜಕೀಯ ವಿಚಾರಗಳನ್ನು ತಿಳಿದುಕೊಂಡರೆ, ಯಾದಗಿರಿಯ 1.2% ರಷ್ಟು ಪ್ರತಿವರ್ತಿಗಳು ದಿನಪತ್ರಿಕೆ ಓದುತ್ತಾರೆ ಎಂಬುವುದನ್ನು ಈ ಅಧ್ಯಯನ ತಿಳಿಸುತ್ತದೆ.
- ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣವು ತುಂಬಾ ಕಡಿಮೆ ಇದೆ ಈ ಅಧ್ಯಯನದಿಂದ ಕಂಡುಬಂದಿದೆ. ಗುಲಬರ್ಗಾದ 72% ರಷ್ಟು ಮತ್ತು ಯಾದಗಿರಿ ಜಿಲ್ಲೆಯ 42.4% ರಷ್ಟು ಪ್ರತಿವರ್ತಿಗಳು ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಕುಸಿದಿದೆ ಎಂದು ಅಭಿಪ್ರಾಯಪಡುತ್ತಾರೆ.
- ರಾಜಕೀಯ ವಿಕೇಂದ್ರಿಕರಣ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಭಾಗವಹಿಸುವಿಕೆಯಲ್ಲಿ ಸಹಕಾರಿಯಾಗಿದೆ ಎಂದು ಈ ಅಧ್ಯಯನ ತಿಳಿಸುತ್ತದೆ.
- ವಾಲ್ಮೀಕಿ ಸಮುದಾಯದ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸದಿರಲು ವಿಭಿನ್ನ ಕಾರಣಗಳನ್ನು ಈ ಅಧ್ಯಯನ ಗುರುತಿಸುತ್ತದೆ. ಮಹಿಳೆ ಎನ್ನುವ ಕಾರಣಕ್ಕೆ ವಾಲ್ಮೀಕಿ ಸಮುದಾಯದ ಮಹಿಳೆಯರು

ರಾಜಕೀಯ ಭಾಗವಹಿಸುವಿಕೆಯಿಂದ ವಂಚಿತರಾಗಿದ್ದಾರೆ. ಅಲ್ಲದೇ ಅನಕ್ಷರತೆ ಮತ್ತು ರಾಜಕೀಯ ಪ್ರಜ್ಞೆಯ ಕೊರತೆಯು ಕೂಡ ಈ ಸಮುದಾಯದಲ್ಲಿ ಕಂಡುಬರುತ್ತದೆ.

- ರಾಜಕೀಯದಲ್ಲಿ ಶಿಕ್ಷಣ ಬಹುಮುಖ್ಯ ಪಾತ್ರವಹಿಸುತ್ತದೆ ಎಂಬುವುದನ್ನು ಈ ಅಧ್ಯಯನ ಸಾಬೀತುಪಡಿಸುತ್ತದೆ. ಶೈಕ್ಷಣಿಕವಾಗಿ ಹಿಂದುಳಿದಿರುವುದೇ ರಾಜಕೀಯ ಭಾಗವಹಿಸುವಿಕೆಯ ಕುಂಠಿತಕ್ಕೆ ಕಾರಣ ಎಂಬುವುದು ಈ ಅಧ್ಯಯನ ಸ್ಪಷ್ಟಪಡಿಸುತ್ತದೆ.
- ಗುಲಬರ್ಗಾ ಮತ್ತು ಯಾದಗಿರಿಯಲ್ಲಿ ಶಿಕ್ಷಣದಲ್ಲಿ ಸ್ತ್ರೀಯರಿಗೆ ಪುರುಷರಷ್ಟೇ ಸ್ವಾತಂತ್ರ್ಯವಿಲ್ಲವೆನ್ನುವುದು ಈ ಅಧ್ಯಯನದಿಂದ ತಿಳಿದುಬಂದಿದೆ. ಅದರಲ್ಲೂ ಯಾದಗಿರಿಯಲ್ಲಿ ಶೇ. 72% ರಷ್ಟು ಪ್ರತಿವರ್ತಿಗಳು ಮಹಿಳೆಯರಿಗೆ ಶಿಕ್ಷಣದಲ್ಲಿ ಪುರುಷರಷ್ಟೇ ಸ್ವಾತಂತ್ರ್ಯವಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಗುಲಬರ್ಗಾದ ಶೇ. 36.7% ರಷ್ಟು ಪ್ರತಿವರ್ತಿಗಳು ಮಹಿಳೆಯರಿಗೆ ಶಿಕ್ಷಣದಲ್ಲಿ ಪುರುಷರಷ್ಟು ಸ್ವಾತಂತ್ರ್ಯವಿಲ್ಲ ಎಂದು ಈ ಅಧ್ಯಯನದಿಂದ ಕಂಡುಬಂದಿದೆ.
- ವಾಲ್ಮೀಕಿ ಸಮುದಾಯದ ಶೈಕ್ಷಣಿಕ ಸ್ಥಿತಿ ಕಡಿಮೆಯಿರಲು ಬಡತನ ಪ್ರಮುಖ ಕಾರಣವೆಂದು ಈ ಅಧ್ಯಯನ ಸಾಬೀತುಪಡಿಸುತ್ತದೆ. ಗುಲಬರ್ಗಾ ಜಿಲ್ಲೆಯ ಶೇ. 81.3% ರಷ್ಟು ಪ್ರತಿವರ್ತಿಗಳು ಮತ್ತು ಯಾದಗಿರಿ ಜಿಲ್ಲೆಯ ಶೇ. 74% ರಷ್ಟು ಪ್ರತಿವರ್ತಿಗಳು ಬಡತನದಿಂದಾಗಿ ಶೈಕ್ಷಣಿಕ ಹಿಂದುಳಿಯುವಿಕೆಗೆ ಕಾರಣ ಎಂದು ಅಭಿಪ್ರಾಯಪಡುತ್ತಾರೆ.
- ಸೂಕ್ತ ರಾಜಕೀಯ ತಿಳುವಳಿಕೆಯ ಕೊರತೆ, ಬಡತನ ಮತ್ತು ಅನಕ್ಷರತೆಯಿಂದಾಗಿ ವಾಲ್ಮೀಕಿ ಸಮುದಾಯದವರು ಸಮಗ್ರ ಕಲ್ಯಾಣಕ್ಕಾಗಿ ರಾಜಕೀಯವನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಈ ಅಧ್ಯಯನದಿಂದ ಕಂಡುಬಂದಿದೆ.

3. ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆಗಳು ಮತ್ತು ಸವಾಲುಗಳಿಗೆ ಸಂಬಂಧಿಸಿದ ಫಲಿತಗಳು

- ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸದೆ ಇರಲು ಅನಕ್ಷರತೆ ಮತ್ತು ಬಡತನ ಪ್ರಮುಖ ಕಾರಣವೆಂಬುವುದು ಈ ಅಧ್ಯಯನದಿಂದ ಕಂಡುಬಂದಿದೆ. ಗುಲಬರ್ಗಾದಲ್ಲಿ ಶೇ. 38% ರಷ್ಟು ಪ್ರತಿವರ್ತಿಗಳು ಅನಕ್ಷರತೆಯಿಂದಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ, ಯಾದಗಿರಿ ಜಿಲ್ಲೆಯ ಶೇ. 64.8% ರಷ್ಟು ಪ್ರತಿವರ್ತಿಗಳು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ ಎಂದು ತಿಳಿದುಬಂದಿದೆ. ಗುಲಬರ್ಗಾದ ಶೇ. 53.3% ರಷ್ಟು ಮತ್ತು ಯಾದಗಿರಿಯ 22.4% ರಷ್ಟು ಪ್ರತಿವರ್ತಿಗಳು ಬಡತನದಿಂದಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುತ್ತಿಲ್ಲ ಎನ್ನುವುದು ಈ ಅಧ್ಯಯನದಲ್ಲಿ ಕಂಡುಬರುತ್ತದೆ.

- ಸ್ವತಂತ್ರವಾಗಿ ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿರುವ ಸಮಸ್ಯೆಗಳನ್ನು ಈ ಅಧ್ಯಯನ ಗುರುತಿಸುತ್ತದೆ. ಗುಲಬರ್ಗಾ ಜಿಲ್ಲೆಯ ಶೇ. 97.3% ರಷ್ಟು ಪ್ರತಿವರ್ತಿಗಳು ಸ್ವತಂತ್ರವಾಗಿ ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಸಮಸ್ಯೆಯನ್ನು ಗುರುತಿಸಿದರೆ, ಯಾದಗಿರಿಯ ಶೇ. 81.2% ರಷ್ಟು ಪ್ರತಿವರ್ತಿಗಳು ಸ್ವತಂತ್ರವಾಗಿ ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳಲು ಇರುವ ಸಮಸ್ಯೆಗಳನ್ನು ಗುರುತಿಸುತ್ತಾರೆ. ಗುಲಬರ್ಗಾದ ಶೇ. 70% ರಷ್ಟು ಮತ್ತು ಯಾದಗಿರಿ ಜಿಲ್ಲೆಯ ಶೇ. 42.8% ರಷ್ಟು ಪ್ರತಿವರ್ತಿಗಳು ಸೂಕ್ತವಾದ ತಿಳುವಳಿಕೆಯ ಕೊರತೆಯನ್ನು ಈ ಸಮಸ್ಯೆಯ ಮೂಲ ಕಾರಣವೆಂದು ತಿಳಿಸಿದ್ದಾರೆ. ಈ ಎರಡೂ ಜಿಲ್ಲೆಗಳಲ್ಲಿ ವಾಲ್ಮೀಕಿ ಸಮುದಾಯವು ಶೈಕ್ಷಣಿಕವಾಗಿ ಹಿಂದುಳಿದಿದೆ ಎನ್ನುವ ಅಂಶವನ್ನು ಈ ಅಧ್ಯಯನ ಸಾಬೀತುಪಡಿಸುತ್ತದೆ.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ರಾಜಕೀಯ ಶಿಕ್ಷಣದ ಬಗ್ಗೆ ಪ್ರಜ್ಞೆ ಮೂಡಿಸುವುದು ರಾಜಕೀಯ ಭಾಗವಹಿಸುವಿಕೆಯ ಮುಂದಿರುವ ಸವಾಲಾಗಿದೆ ಎಂದು ಈ ಅಧ್ಯಯನದಿಂದ ಕಂಡುಬಂದಿದೆ. ಗುಲಬರ್ಗಾ ಜಿಲ್ಲೆಯ ಶೇ. 72% ರಷ್ಟು ಪ್ರತಿವರ್ತಿಗಳು ರಾಜಕೀಯ ಶಿಕ್ಷಣದ ಬಗ್ಗೆ ಪ್ರಜ್ಞೆ ಮೂಡಿಸುವ ಅಗತ್ಯತೆಯನ್ನು ಮನಗಂಡರೆ, ಯಾದಗಿರಿ ಜಿಲ್ಲೆಯ ಶೇ. 44% ರಷ್ಟು ಪ್ರತಿವರ್ತಿಗಳು ರಾಜಕೀಯ ಶಿಕ್ಷಣದ ಬಗ್ಗೆ ಪ್ರಜ್ಞೆ ಮೂಡಿಸುವ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಡುತ್ತಾರೆ. ಈ ಎರಡೂ ಜಿಲ್ಲೆಗಳಲ್ಲಿ ರಾಜಕೀಯ ಶಿಕ್ಷಣದ ಅಗತ್ಯತೆಯನ್ನು ಈ ಅಧ್ಯಯನ ತಿಳಿಸುತ್ತದೆ.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲಾ ರಾಜಕೀಯದಲ್ಲಿ ನಾಯಕತ್ವದ ವಿಚಾರ ಬಂದಾಗ ಸಮುದಾಯದ ಒಗ್ಗಟ್ಟಿನ ಕೊರತೆ ಅತಿ ಹೆಚ್ಚಾಗಿ ಕಂಡುಬರುತ್ತದೆ ಎಂದು ಈ ಅಧ್ಯಯನ ಸಾಭೀತುಪಡಿಸುತ್ತದೆ. ಗುಲಬರ್ಗಾದ ಶೇ. 61.3% ರಷ್ಟು ಮತ್ತು ಯಾದಗಿರಿ ಜಿಲ್ಲೆಯ ಶೇ. 56% ರಷ್ಟು ಪ್ರತಿವರ್ತಿಗಳು ಸಮುದಾಯದ ಒಗ್ಗಟ್ಟಿನ ಕೊರತೆಯನ್ನು ಗುರುತಿಸುತ್ತಾರೆ.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ರಾಜಕೀಯ ಭಾಗವಹಿಸುವಿಕೆಗೆ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡವು ಹೆಚ್ಚಾಗಿದೆ ಎನ್ನುವುದನ್ನು ಈ ಅಧ್ಯಯನ ಸಾಭೀತುಪಡಿಸುತ್ತದೆ. ಗುಲಬರ್ಗಾದ ಶೇ. 89.3% ರಷ್ಟು ಮತ್ತು ಯಾದಗಿರಿ ಜಿಲ್ಲೆಯ ಶೇ. 94% ರಷ್ಟು ಪ್ರತಿವರ್ತಿಗಳು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡವು ಹೆಚ್ಚಾಗಿರುವುದು ಈ ಅಧ್ಯಯನದಿಂದ ಕಂಡುಬಂದಿದೆ. ಸಮುದಾಯದ ಒಳಗೆ ಒಳಜಗಳಗಳನ್ನು ಸೃಷ್ಟಿಸುವ ಮೂಲಕ ಸಮುದಾಯದ ರಾಜಕೀಯ ಭಾಗವಹಿಸುವಿಕೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಹಿಡಿತಕ್ಕೆ ಒಳಪಡಿಸಿದೆ ಎಂದು ಈ ಅಧ್ಯಯನವು ತಿಳಿಸುತ್ತದೆ.

- ಜಾತಿ ಮೀಸಲಾತಿಯಿಂದ ಆಯ್ಕೆಯಾದ ಪ್ರತಿನಿಧಿಗಳಿಂದ ಸಮುದಾಯದ ಕುರಿತಾದ ಅಭಿವೃದ್ಧಿ ಕಾರ್ಯಗಳು ಆಗಿವೆ ಎಂದು ಗುಲಬರ್ಗಾದ ಶೇ. 84% ರಷ್ಟು ಮತ್ತು ಯಾದಗಿರಿ ಜಿಲ್ಲೆಯ ಶೇ. 71.2% ರಷ್ಟು ಪ್ರತಿವರ್ತಿಗಳು ಗುರುತಿಸಿದ್ದಾರೆ. ಆದರೆ ಯಾವ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳಾಗಿವೆ ಎಂಬುವುದಕ್ಕೆ ಗುಲಬರ್ಗಾದ ಶೇ. 46.7% ರಷ್ಟು ಪ್ರತಿವರ್ತಿಗಳು ಸಾಧಾರಣ ಎಂದು ಗುರುತಿಸಿದರೆ, ಯಾದಗಿರಿ ಜಿಲ್ಲೆಯ ಶೇ. 23.2% ರಷ್ಟು ಪ್ರತಿವರ್ತಿಗಳು ಕಳಪೆ ಅಭಿವೃದ್ಧಿಯಾಗಿದೆ ಎಂದು ಗುರುತಿಸಿದ್ದು ಈ ಅಧ್ಯಯನದಿಂದ ಕಂಡುಬಂದಿದೆ.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ಪ್ರತಿನಿಧಿಗಳು ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳು ಎಲ್ಲಾ ಜನರ ಪರವಾಗಿರುತ್ತವೆಂಬುವುದು ಈ ಅಧ್ಯಯನದಿಂದ ಕಂಡುಬಂದಿದೆ.
- ವಾಲ್ಮೀಕಿ ಸಮುದಾಯದ ಅಭಿವೃದ್ಧಿಗೆ ರಾಜಕೀಯ ಅಧಿಕಾರ ಅಗತ್ಯ ಅಂಶವೆಂದು ಈ ಅಧ್ಯಯನ ತಿಳಿಸುತ್ತದೆ. ಗುಲಬರ್ಗಾದ ಶೇ. 52% ರಷ್ಟು ಮತ್ತು ಯಾದಗಿರಿ ಜಿಲ್ಲೆಯ ಶೇ. 39.2 ರಷ್ಟು ಪ್ರತಿವರ್ತಿಗಳು ರಾಜಕೀಯ ಅಧಿಕಾರ ಪ್ರಮುಖವೆಂದು ಭಾವಿಸುತ್ತದೆ. ಸಮುದಾಯದ ಅಭಿವೃದ್ಧಿಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಹಾಗೂ ಶಿಕ್ಷಣ ಪ್ರಮುಖ ಪಾತ್ರವನ್ನೂ ವಹಿಸಿದರೂ ರಾಜಕಿಯ ಅಧಿಕಾರ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸುವ ಶಕ್ತಿಯನ್ನು ಹೊಂದಿದೆ ಎಂದು ಈ ಅಧ್ಯಯನ ಸ್ಪಷ್ಟಪಡಿಸುತ್ತದೆ.
- ವಾಲ್ಮೀಕಿ ಸಮುದಾಯದ ರಾಜಕೀಯ ಸ್ಥಿತಿ ಸುಧಾರಣೆಯಾಗಬೇಕು ಎನ್ನುವುದು ಈ ಅಧ್ಯಯನವು ಪ್ರಮುಖವಾಗಿ ಗಮನಿಸಿದ ಅಂಶವಾಗಿದೆ. ಗುಲಬರ್ಗಾದ ಶೇ. 60% ರಷ್ಟು ಪ್ರತಿವರ್ತಿಗಳು ವಾಲ್ಮೀಕಿ ಸಮುದಾಯದ ರಾಜಕೀಯ ಸ್ಥಿತಿ ಸುಧಾರಿಸಬೇಕೆಂದು ಬಯಸಿದರೆ, ಯಾದಗಿರಿ ಜಿಲ್ಲೆಯ ಶೇ. 29.6% ರಷ್ಟು ಪ್ರತಿವರ್ತಿಗಳು ವಾಲ್ಮೀಕಿ ಸಮುದಾಯದ ರಾಜಕೀಯ ಸ್ಥಿತಿ ಸಂಪೂರ್ಣವಾಗಿ ಕುಸಿದಿದೆ ಎಂದು ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲಿ ಈ ಸಮುದಾಯದ ರಾಜಕೀಯ ಗುಣಮಟ್ಟ ಮತ್ತು ಸ್ಥಿತಿ ಸುಧಾರಣೆಯಾಗಬೇಕಿದೆ ಎಂದು ಈ ಅಧ್ಯಯನ ತಿಳಿಸುತ್ತದೆ.
- ಚುನಾಯಿತ ಪ್ರತಿನಿಧಿಗಳಿಂದ ಸರ್ಕಾರದ ಯೋಜನೆಗಳು ಸೂಕ್ತ ರೀತಿಯಲ್ಲಿ ಈ ಸಮುದಾಯದವರಿಗೆ ತಲುಪುತ್ತಿಲ್ಲ ಎಂದು ಗುಲಬರ್ಗಾದ ಶೇ. 34% ರಷ್ಟು ಮತ್ತು ಯಾದಗಿರಿ ಜಿಲ್ಲೆಯ ಶೇ. 69.6% ರಷ್ಟು ಪ್ರತಿವರ್ತಿಗಳು ಇದನ್ನು ಉಲ್ಲೇಖಿಸಿದ್ದಾರೆ.
- ವಾಲ್ಮೀಕಿ ಸಮುದಾಯವನ್ನು ಜಾಗೃತಗೊಳಿಸಲು ಮತ್ತು ಸಮುದಾಯದ ಶಕ್ತಿಯ ಸಂಕೇತವಾಗಿ ಜಾತಿ ಸಂಘಟನೆಗಳ ಅವಶ್ಯಕತೆ ಇದೆ ಎಂದು ಈ ಅಧ್ಯಯನದಿಂದ ತಿಳಿದುಬಂದಿದೆ.

- ಒಂದು ರಾಜಕೀಯ ಶಕ್ತಿಯಾಗಿ ಬೆಳೆಯಲು ಜಾತಿ ಸಂಘಟನೆಗಳು ಹುಟ್ಟುವುದಕ್ಕೆ ಕಾರಣವೆಂದು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳು ಅಭಿಪ್ರಾಯಪಟ್ಟಿದ್ದಾರೆ.
- ವಾಲ್ಮೀಕಿ ಸಮುದಾಯದ ಜನರು ಮೀಸಲು ಪ್ರದೇಶಗಳಲ್ಲಿ ಮೀಸಲಾತಿಯ ಅವಕಾಶವಿರುವುದರಿಂದ ಸ್ಪರ್ಧಿಸಲು ಆಸಕ್ತರಾಗಿದ್ದಾರೆ ಎಂದು ಈ ಅಧ್ಯಯನ ತಿಳಿಸುತ್ತದೆ. ಗುಲಬರ್ಗಾದ ಶೇ. 77.3% ರಷ್ಟು ಮತ್ತು ಯಾದಗಿರಿ ಜಿಲ್ಲೆಯ ಶೇ. 71.6% ರಷ್ಟು ಪ್ರತಿವರ್ತಿಗಳು ಮೀಸಲಾತಿಯ ಅವಕಾಶದಿಂದಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತರಾಗಿದ್ದಾರೆ ಎಂದು ಅಭಿಪ್ರಾಯಪಡುತ್ತಾರೆ.
- ಕರ್ನಾಟಕದ ರಾಜಕೀಯ ದೃಷ್ಟಿಯಿಂದ 5ನೇ ಅತಿದೊಡ್ಡ ಜನಾಂಗವಾಗಿ ವಾಲ್ಮೀಕಿ ಸಮುದಾಯ ಗುರುತಿಸಿಕೊಂಡಿದ್ದರೂ, ಬಡತನ, ಪಟ್ಟಭದ್ರ ಹಿತಾಸಕ್ತಿಗಳ ಕೈವಾಡ ಮತ್ತು ರಾಜಕೀಯ ಶಿಕ್ಷಣದ ಕೊರತೆಯಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ರಾಜಕೀಯ ಪಾಲ್ಗೋಳ್ಳುವಿಕೆಯಲ್ಲಿ ಹಿಂದುಳಿಯಲು ಕಾರಣವೆಂದು ಈ ಅಧ್ಯಯನದಿಂದ ಕಂಡುಬಂದಿದೆ.
- ವಾಲ್ಮೀಕಿ ಸಮುದಾಯ ರಾಜಕೀಯ ಸಮಸ್ಯೆಗಳು ಎದುರಾದಾಗ ಸಮಾನ ಮನಸ್ಕರ ಜೊತೆಗೆ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ ಎಂದು ಈ ಅಧ್ಯಯನ ತಿಳಿಸುತ್ತದೆ.
- ವಾಲ್ಮೀಕಿ ಸಮುದಾಯದಲ್ಲಿ ಸಮಸ್ಯೆಗಳು ಉಂಟಾದಾಗ ಧಾರ್ಮಿಕ ಗುರುಗಳ ಸಲಹೆಯನ್ನು ಪಡೆಯುತ್ತಾರೆ ಎಂದು ಈ ಅಧ್ಯಯನದಿಂದ ತಿಳಿದುಬಂದಿದೆ.
- ಈ ಸಮುದಾಯದಿಂದ ಚುನಾಯಿಸಲ್ಪಟ್ಟ ಮಂತ್ರಿಶಾಸಕರನ್ನು ಪಕ್ಷದ ನಾಯಕರಿಂದ ಮತ್ತು ಜಾತಿ ನಾಯಕರಿಂದ ಸಂಪರ್ಕಿಸುತ್ತಾರೆ ಎಂದು ಈ ಅಧ್ಯಯನದಿಂದ ಕಂಡುಬಂದಿದೆ.
- ಪರಿಶಿಷ್ಟ ಪಂಗಡದ ಮತದಾರರು ಒಂದು ಮತಬ್ಯಾಂಕ್ ಎಂಬ ಅಭಿಪ್ರಾಯವನ್ನು ಈ ಎರಡೂ ಜಿಲ್ಲೆಗಳ ಪ್ರತಿವರ್ತಿಗಳು ಒಪ್ಪಿಕೊಂಡಿರುವುದು ಈ ಅಧ್ಯಯನದಿಂದ ತಿಳಿದುಬಂದಿದೆ.
- ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳ ಹೋರಾಟವನ್ನು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳು ಬೆಂಬಲಿಸುತ್ತಾರೆ ಎನ್ನುವುದನ್ನು ಈ ಅಧ್ಯಯನ ಗಮನಿಸಿದೆ. ಮೀಸಲಾತಿ ಹೆಚ್ಚಳದಿಂದ ರಾಜಕೀಯ ಭಾಗವಹಿಸುವಿಕೆ ಇನ್ನಷ್ಟು ಸದೃಢವಾಗುತ್ತದೆ ಎಂಬ ವಿಶ್ವಾಸವನ್ನು ಪ್ರತಿವರ್ತಿಗಳು ವ್ಯಕ್ತಪಡಿಸುತ್ತಾರೆ.

ಅಧ್ಯಯನದ ಸಲಹೆಗಳು ಹಾಗೂ ಶಿಫಾರಸ್ಸುಗಳು:

ಈ ಸಂಶೋಧನಾ ಕ್ಷೇತ್ರಕಾರ್ಯ ಅಧ್ಯಯನದಿಂದ ಕಂಡುಬಂದ ಫಲಿತಗಳ ಆಧಾರದ ಮೇಲೆ ಕೆಲವು ಸಲಹೆ ಹಾಗೂ ಶಿಫಾರಸ್ಸುಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

- ವಾಲ್ಮೀಕಿ ಸಮುದಾಯ ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿ (ಒತ್ತಡ ಗುಂಪು) ಯಾಗಿ ಗುರುತಿಸಿಕೊಳ್ಳುವತ್ತ ದಿಕ್ಕಿನಲ್ಲಿ ಸಾಗಬೇಕಾದ ಅಗತ್ಯತೆಯಿದೆ.
- ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಹಳ್ಳಿಗಳನ್ನು (ದೊಡ್ಡಿ) ಸೇರಿಸಿ ಕಂದಾಯ ಗ್ರಾಮಗಳನ್ನಾಗಿ ಘೋಷಿಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಸೂಕ್ತ.
- ಸಂವಿಧಾನ ನೀಡಿರುವ ಸ್ವಾತಂತ್ರ್ಯ, ಸಮಾನತೆ ಮತ್ತು ಸಂವಿಧಾನಿಕ ಹಕ್ಕುಗಳನ್ನು ಪಡೆಯಲು ಸದಾ ಜಾಗೃತರಾಗಿರಬೇಕು ಮತ್ತು ಈ ಸೌಲಭ್ಯಗಳನ್ನು ಈ ಸಮುದಾಯವು ಸಮರ್ಪಕವಾಗಿ ಬಳಸಿಕೊಂಡು ಅಭಿವೃದ್ಧಿಯತ್ತ ಸಾಗುವ ಮೂಲಕ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಿಕೊಳ್ಳಬೇಕಾದ ತುರ್ತು ಅಗತ್ಯವಿದೆ.
- ರಾಜಕೀಯ ಭಾಗವಹಿಸುವಿಕೆ ಮುಖ್ಯವಾಗಿ ಯಶಸ್ವಿಯಾಗಬೇಕಾದರೆ ಅನಕ್ಷರಸ್ತರನ್ನು ಅಕ್ಷರಸ್ತರನ್ನಾಗಿ ಪರಿವರ್ತಿಸುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಈ ಸಮುದಾಯವು ಸೇರಿದಂತೆ ಬುಡಕಟ್ಟು ಸಮುದಾಯಗಳು ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಬೇಕಾದರೆ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೆ ಉಚಿತ ಶಿಕ್ಷಣ ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಾಸನಾತ್ಮಕ ಹಾಗೂ ಆಡಳಿತಾತ್ಮಕ ಕ್ರಮ ಕೈಗೊಳ್ಳಬೇಕು. ಅಂತೆಯೇ ಖಾಸಗಿ ಶಿಕ್ಷಣ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಕಲ್ಪಿಸಬೇಕು.
- ವಾಲ್ಮೀಕಿ ಸಮುದಾಯದ ಚುನಾಯಿತ ಸದಸ್ಯರಿಗೆ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರಿಗೆ ರಾಜಕೀಯ ಜ್ಞಾನದ ಜೊತೆಗೆ ಆಡಳಿತಾತ್ಮಕ ವಿಷಯಗಳ ಬಗ್ಗೆ ತರಬೇತಿಗಳನ್ನು ನೀಡಬೇಕು.
- ರಾಜ್ಯ ವಿಧಾನ ಪರಿಷತ್ತಿನಲ್ಲಿ ಬುಡಕಟ್ಟು ಸಮುದಾಯಕ್ಕೆ ಸೇರಿದವರಿಗೆ ಕೆಲವು ಸ್ಥಾನಗಳನ್ನು ಮೀಸಲಿಡಲು ಕ್ರಮ ಕೈಗೊಳ್ಳಬೇಕಾಗಿದೆ.
- ಪ್ರಜಾಪ್ರಭುತ್ವದಲ್ಲಿ ಸಂಘಟನೆ ಇಲ್ಲದೆ ಯಾವ ಹಿತಾಸಕ್ತಿಯನ್ನು ಪೂರೈಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ವಾಲ್ಮೀಕಿ ಸಮುದಾಯ ಹೆಚ್ಚು ಸಂಘಟನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆಯಿದೆ.
- ಈ ಸಮುದಾಯದಲ್ಲಿ ರಾಜಕೀಯ ಜ್ಞಾನದ ಕೊರತೆ ಕಂಡುಬಂದಿದ್ದು, ಪ್ರತಿಯೊಬ್ಬ ಪ್ರಜೆಗಳಲ್ಲಿ ಚುನಾವಣೆಗಳ ಬಗ್ಗೆ, ರಾಜಕೀಯ ವಿದ್ಯಮಾನಗಳ ಬಗ್ಗೆ, ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಸ್ಪಷ್ಟವಾದ ಅರಿವನ್ನು ಮೂಡಿಸುವ ಕಾರ್ಯಕ್ರಮಗಳು ವಿವಿಧ ಹಂತದಲ್ಲಿ ಜಾರಿಗೊಳಿಸಬೇಕಾಗಿದೆ.

- ಪಂಚಾಯತ್ ವ್ಯವಸ್ಥೆಗಳು ಪ್ರಜಾಪ್ರಭುತ್ವದ ನಿಜವಾದ ಪ್ರತಿಬಿಂಬಗಳಾಗಿವೆ ಮತ್ತು ರಾಜಕೀಯ ತರಬೇತಿಯ ಶಾಲೆಗಳಾಗಿವೆ. ಆದ್ದರಿಂದ ಈ ಸಮುದಾಯದ ಜನರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಕ್ರಿಯವಾಗಿ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.
- ಆರ್ಥಿಕ ಸಬಲೀಕರಣಕ್ಕಾಗಿ ಮತ್ತು ನಿರುದ್ಯೋಗ ಸಮಸ್ಯೆ ನಿವಾರಣೆಗಾಗಿ ಸ್ವಯಂ–ಉದ್ಯೋಗಗಳನ್ನು ಕೈಗೊಳ್ಳಲು ಈ ಸಮುದಾಯದ ಯುವಕ/ಯುವತಿಯರಿಗೆ ಬಡ್ಡಿರಹಿತ ಸಾಲ ಜೊತೆಗೆ ಸಹಾಯಧನದ ಸೌಲಭ್ಯಗಳನ್ನು ನೀಡಬೇಕು.

ಮುಂದೆ ಕೈಗೊಳ್ಳಬಹುದಾದ ಅಧ್ಯಯನದ ಸಾಧ್ಯತೆಗಳು

ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆ ಅಧ್ಯಯನದಲ್ಲಿ ಈ ಸಮುದಾಯದ ಕುರಿತು ವಿವಿಧ ಆಯಾಮಗಳ (ಮಜಲುಗಳ) ಮೂಲಕ ಅಧ್ಯಯನ ಮಾಡಿದ್ದರೂ ಕೂಡ ಇನ್ನೂ ಅನೇಕ ಅಧ್ಯಯನಗಳ ಸಾಧ್ಯತೆಯನ್ನು ಮುಂದಿನ ಸಂಶೋಧಕರಿಗೆ ಈ ಕೆಳಗಿನಂತೆ ನೀಡಲಾಗಿದೆ.

- ವಾಲ್ಮೀಕಿ ಸಮುದಾಯದ ಅಧ್ಯಯನವು ಸಮಗ್ರ ಕರ್ನಾಟಕ ಮಟ್ಟದಲ್ಲಿ ಸಾಧ್ಯವಾದರೆ ದೇಶದ ಮಟ್ಟದಲ್ಲಿ ಒಂದು ಸಂಶೋಧನಾ ವಿಷಯವಾಗಿ ತೆಗೆದುಕೊಳ್ಳಬಹುದು.
- ಮಹಿಳಾ ಸಬಲೀಕರಣಕ್ಕಾಗಿ ವಾಲ್ಮೀಕಿ ಸಮುದಾಯದ ಚುನಾಯಿತ ಪ್ರತಿನಿಧಿಗಳ ಪಾತ್ರದ ಕುರಿತು ಸಂಶೋಧನಾ ಅಧ್ಯಯನಕ್ಕಾಗಿ ವಿಷಯವನ್ನು ಕೈಗೊಳ್ಳಬಹುದಾಗಿದೆ.
- ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಾಲ್ಮೀಕಿ ಸಮುದಾಯದ ಕೊಡುಗೆಗಳ ಕುರಿತು ಅಧ್ಯಯನ ಮಾಡಬಹುದು.
- ಕಲ್ಯಾಣ ಕರ್ನಾಟಕ (ಹೈ–ಕ) ಪ್ರಾದೇಶಿಕವಾಗಿ ಅಭಿವೃದ್ಧಿ ಮತ್ತು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣಗಳ ಕುರಿತು ಸಂಶೋಧನಾ ಅಧ್ಯಯನಕ್ಕಾಗಿ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

12. ಆಧಾರ ಗ್ರಂಥಗಳು:

ಕನ್ನಡ ಪುಸ್ತಕಗಳು:

- ಡಾ. ಪೂಜಾರಹಳ್ಳಿ ವಿರೂಪಾಕ್ಷಿ, **"ಬೇಟೆ ಮತ್ತು ಬೇಡರು"** ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಚಾರಿತ್ರಿಕ ಅಧ್ಯಯನ, ಪ್ರಕಾಶನ ಚಿನ್ನಹಗರಿ, ಪೂಜಾರಹಳ್ಳಿ, ಪ್ರಥಮ ಮುದ್ರಣ–2007.
- ಡಾ. ಪೂಜಾರಹಳ್ಳಿ ವಿರೂಪಾಕ್ಷಿ, **"ಕರ್ನಾಟಕದಲ್ಲಿ ತಳವಾರಿಕೆ,"** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಥಮ ಮುದ್ರಣ, 2006.
- ಕರಿಯಪ್ಪ ಎಂ., **"ಪತ್ರಿಕಾ ಮಾಧ್ಯಮದ ರಾಜಕೀಯ ಸಮೀಕ್ಷೆಗಳ ಸಂಗ್ರಹ",** ಸ್ಫೂರ್ತಿ ಪ್ರಿಂಟರ್ಸ್, ಬೆಂಗಳೂರು, 2004.
- ವಿಶ್ವನಾಥ ಎಚ್., **"ಆಪತ್ ಸ್ಥಿತಿಯ ಆಲಾಪಗಳು",** ಹಳ್ಳಿ ಹಕ್ಕಿ ಪ್ರಕಾಶನ, ಮೈಸೂರು, 2013.
- ಕರಿಯಪ್ಪ ಎಂ., **"ಮೇಷ ಸಮೀಕ್ಷೆ",** ಸ್ಫೂರ್ತಿ ಪ್ರಿಂಟರ್ಸ್, ಬೆಂಗಳೂರು, 2007.
- ರಾಮಕೃಷ್ಣ ಆರ್., **"ಕರ್ನಾಟಕದಲ್ಲಿ ಬುಡಕಟ್ಟುಗಳು",** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2002.
- ಅಂಬಳಿಕೆ ಹಿರಿಯಣ್ಣ, **"ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ",** ಪು. ಸಂ. 1 ಮತ್ತು 2.
- ಭೈರಪ್ಪ. ಕೆ. **"ಸಮಗ್ರ ಭಾರತೀಯ ಸಮಾಜ",** ಸಪ್ನಬುಕ್ ಹೌಸ್, ಬೆಂಗಳೂರು, 2010.
- ಸುಧಾ, ಸೀತಾರಾಮನ್. **"ಸಮಾಜಶಾಸ್ತ್ರೀಯ ಪಾರಿಭಾಷಿಕ ಮಾಲೆ– 2: ಜಾತಿ ಕೆಲವು ಟಿಪ್ಪಣಿಗಳು",**
- ಅಂಬೇಡ್ಕರ್. ಬಿ.ಆರ್. **"ಶ್ರೀಮಾನ್ ಗಾಂಧಿ ಮತ್ತು ಅಸ್ಪೃಶ್ಯರ ವಿಮೋಚನೆ",**
- **ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು ಸಂಪುಟ–1 1993**.
- ಪ್ರೊ. ಎಚ್.ಎಂ.ರಾಜಶೇಖರ, **"ಭಾರತ ಸರ್ಕಾರ ಮತ್ತು ರಾಜಕೀಯ",** ಕಿರಣ್ ಪ್ರಕಾಶನ, ಮೈಸೂರು, 2013.
- **ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಸಂಪುಟ 13,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1998.
- ಡಂಗಿ ಡಿ.ಬಿ., **"ಜನಾಂಗ ಪರಿಚಯ",** ಪೆರಿಯೂರ ಪ್ರಕಾಶನ, ಧಾರವಾಡ, 1988.

- ಅಮರೇಶ್ ಯತಗಲ್, **"ವಾಲ್ಮೀಕಿ ಸಮುದಾಯ ಮತ್ತು ಚರಿತ್ರೆ",** ವಾಲ್ಮೀಕಿ ಸಾಹಿತ್ಯ ಸಂಪದ ಪ್ರಕಾಶನ, ಹರ್ತಿಕೋಟೆ, 2008.
- ಡಾ. ಸುರೇಶ್ ಕೆ.ಜೆ., **"ಆಧುನಿಕ ರಾಜಕೀಯ ಸಿದ್ಧಾಂತಗಳು",** ಅಖಿಲಾ ಏಜೆನ್ಸೀಸ್, ಮೈಸೂರು, ಪ್ರಥಮ ಮುದ್ರಣ 2013.
- ಡಾ. ಭುವನೇಶ್ವರ ಪ್ರಸಾದ್, ಎಂ.ಪಿ., **"ರಾಜ್ಯಶಾಸ್ತ್ರ",** ಶಬರಿಮಲಯನ್ ಬುಕ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ಪ್ರಥಮ ಮುದ್ರಣ 2012.
- ದೇಶಪಾಂಡೆ ಮೀನಾ ಮತ್ತು ದತ್ತಾ ಬಿ. ಕೆ, **"ರಾಜಕೀಯ ಸಿದ್ಧಾಂತ– ಸಮಕಾಲೀನ ಸಿದ್ಧಾಂತ",** ಭಾರತೀಯ ವಿದ್ಯಾಭವನ, ಬೆಂಗಳೂರು, 1999.
- ಸೇತು ಮಾಧವ, **"ಬುಡಕಟ್ಟು ಅಧ್ಯಯನ",** ಪು. ಸಂ.123.
- ಶಾಂತಪ್ಪ ಬಿ, **"ಭಾರತದ ಸಾಮಾಜಿಕ ಸಮಸ್ಯೆಗಳು ಭಾಗ– 2",**
- ಸುನಂದಮ್ಮ (ಸಂ), **ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ ಬುಡಕಟ್ಟು ಜನಾಂಗದ ಅಭಿವೃದ್ಧಿಗೆ ಕರ್ನಾಟಕ ಸರಕಾರದ ಕಾರ್ಯಕ್ರಮಗಳು ಒಂದು ವಿಮರ್ಶಾತ್ಮಕ ಅಧ್ಯಯನ",** ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಮೈಸೂರು,
- ಶಂಕರ್ ರಾವ್ ಚ. ನ., **"ಸಮಾಜಶಾಸ್ತ್ರ–ಸಮಾಜಶಾಸ್ತ್ರದ ಪ್ರಾಥಮಿಕ ತತ್ತ್ವಗಳು ಮತ್ತು ಸಮಾಜಶಾಸ್ತ್ರೀಯ ಚಿಂತನೆ",** ಜೈ ಭಾರತ್ ಪ್ರಕಾಶನ: ಮಂಗಳೂರು, 10ನೇ ಆವೃತ್ತಿ; 2011–12.
- ಸುರೇಶ್ ಕೆ.ಜೆ. **"ತೌಲಾನಿಕ ಸರ್ಕಾರ ಮತ್ತು ರಾಜಕೀಯ",** ಆಖಿಲಾ ಏಜೆನ್ಸೀಸ್ ಪ್ರಕಾಶನ: ಮೈಸೂರು, 2013.
- ಶರ್ಮ ಎ. ಆರ್. **"ರಾಜಕೀಯ ಸಮಾಜಶಾಸ್ತ್ರ",** ನಾಗಾರ್ಜುನ ಎಂಟರ್ ಪ್ರೈಸಸ್ ಪ್ರಕಾಶನ: ದಾವಣಗೆರೆ, 2013.
- ಡಾ. ಶಂಕರಪ್ಪ ಆರ್., **"ಪಂಚಾಯತ್ ರಾಜ್ ವ್ಯವಸ್ಥೆಯ ಆಡಳಿತ ಅಭಿವೃದ್ಧಿ ಸಮಸ್ಯೆಗಳು",** ಜನವಾಹಿನಿ.
- ರಮೇಶ್, ಬೆ. ಗೂ., **"ಕರ್ನಾಟಕದ ಮುಖ್ಯಮಂತ್ರಿಗಳು",** ದಿವ್ಯಚಂದ್ರ ಪ್ರಕಾಶನ, ಬೆಂಗಳೂರು, 2003.
- ಎಂ. ಬಿ. ಪಾಟೀಲ್, **"ಕಲಬುರಗಿ ಜಿಲ್ಲಾ ಗ್ಯಾಸೇಟಿಯರ ಕರ್ನಾಟಕ ಸರ್ಕಾರ,"** ಗೀತಾಂಜಲಿ ಪ್ರಿಂಟರ್ಸ, ಬೆಂಗಳೂರು, 1997.

- ವೀರಭದ್ರ ಸಿಂಪಿ., (ಸಂ), **"ಕಲ್ಬರ್ಗಿ ಜಿಲ್ಲಾ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ",** 2011.
- ಹತಗುದಿ ರಾಜಶೇಖರ, **"ಕಲಬುರ್ಗಿ ಜಿಲ್ಲಾ ದರ್ಶನ",** ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ, 2005.
- ಅಭಿನಂದನ, **"ಗುಲಬರ್ಗಾ ಜಿಲ್ಲೆ ಸಂಪನ್ಮೂಲಗಳು ಕೈಗಾರಿಕೆಗಳು,"**
- ವಸಂತ ಕುಷ್ಟಿಗಿ, **"ಕಾಗಿಣಿ, ಭೀಮಾ, ಕೃಷ್ಣ ನದಿ ಕೊಳ್ಳದ ಸಾಂಸೃತಿಕ ಪದರುಗಳು",** ಶೀ ಸಿದ್ದಲಿಂಗೇಶ್ವರ ಬುಕ್‌ಡಿಪೋ ಮತ್ತು ಪ್ರಕಾಶನ, ಕಲಬುರಗಿ, 2011.
- ಡಾ. ಸುಭಾಶ್ಚಂದ್ರ ಕೌಲಗಿ, **"ಭಾವೈಕ್ಯತೆಯ ಭಗವಂತ ಶ್ರೀ ವಿಶ್ವರಾಧ್ಯ",** 1998.
- ಪಾಟೀಲ ಬಸನಗೌಡ ಎಸ್ ಹುಣಸಗಿ, **"ಇತಿಹಾಸ ಪುಟಗಳಲ್ಲಿ ಯಾದಗಿರಿ,"** 2011.
- ಡಾ. ವ್ಹಿ. ಜಿ. ಪೂಜಾರ., **"ಕಲಬುರ್ಗಿ ಜಿಲ್ಲಾ ದರ್ಶನ",** ಪು.ಸಂ.06.
- ಮಂಜುನಾಥ್ ಬಿ. ಆರ್, **"ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು; ಒಂದು ಮಾನವಶಾಸ್ತ್ರೀಯ ಅಧ್ಯಯನ",** ಮೈಸೂರು ವಿಶ್ವವಿದ್ಯಾನಿಲಯ, 2014.
- ಪ್ರೊ. ಕಾಳೇಗೌಡ ನಾಗವಾರ (ಸಂ), ಹುಚ್ಚಪ್ಪ ಮಾಸ್ತರ್, **"ಬುಡಕಟ್ಟುಗಳ ಲಕ್ಷಣ ಮತ್ತು ಸ್ವರೂಪ",** ಗಿರಿಜನ ಸಂಸ್ಕೃತಿ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
- ಬಹುಜನ ಮೀಡಿಯಾ ಸೆಂಟರ್, **"ವರ್ಣ ಜಾತಿ ಮತ್ತು ಅಂಬೇಡ್ಕರ್",** ಅಂಬೇಡ್ಕರ್ ಚಿಂತನಾ ಸಾಹಿತ್ಯ, ಸಮಗ್ರ ಅಧ್ಯಯನ.
- ಎಚ್.ಜಿ. ಚಂದ್ರಶೇಖರಯ್ಯ, **"ಮೀಸಲಾತಿ ಒಂದು ಕೈಪಿಡಿ",** ಹುಲವಂಗಲ ವಿಜಯನಗರ, ಬೆಂಗಳೂರು, 2012.
- **ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು ಸಂಪುಟ–3,** ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು.
- ಕೃಷ್ಣ ಬಿ.ಆರ್**, "ಸಾಮಾಜಿಕ ಸಮಸ್ಯೆಗಳು",**
- ಡಾ. ಮೈತ್ರಿ, ಕೆ.ಎಂ., **"ಬುಡಕಟ್ಟು ಕುಲಕಸುಬುಗಳು",** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.
- ಶಂಕರರಾವ್ ಚ. ನ. **"ಭಾರತೀಯ ಸಮಾಜ: ಪರಂಪರೆ ಮತ್ತು ಸಮಾಜ ಪರಿವರ್ತನೆ",** ಜೈ ಭಾರತ್ ಪ್ರಕಾಶನ, ಮಂಗಳೂರು,

- ಶಾಂತಪ್ಪ ಬಿ, **"ಭಾರತದ ಸಾಮಾಜಿಕ ಸಮಸ್ಯೆಗಳು ಭಾಗ– 2",**
- ಅನಂತಕೃಷ್ಣ ಅಯ್ಯರ್ ಎಲ್. ಕೆ., **"ದ ಮೈಸೂರು ಕ್ಯಾಸ್ಟ್ ಅಂಡ್ ಟ್ರೈಬ್ಸ್",** ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1998.
- ಥರ್ಸ್ಟನ್, ಇ. ಮತ್ತು ರಂಗಾಚಾರಿ. ಕೆ., **"ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ",** ಸರ್ಕಾರಿ ಮುದ್ರಣಾಲಯ, ಮದ್ರಾಸ್,1909.
- ಕೃಷ್ಣಮೂರ್ತಿ ಹನೂರು, **"ಮ್ಯಾಸಬೇಡರ ಸಂಸ್ಕೃತಿ",** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
- ಸೈಯದ್ ಸಿರಾಜ್ ಉಲ್ ಹಸನ್, **"ದಿ ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಎಚ್. ಇ. ದಿ ನಿಜಾಮ್ಸ್ ಡೊಮಿನಿಯನ್ಸ್",** 1920.
- ರಾಜಣ್ಣ ಆರ್, **"ನಾಯಕ ಜನಾಂಗದ ಇತಿಹಾಸ",** 1982.
- ಸಂಪಾದಕ, ಡಾ. ಬೇವಿನ ಕಟ್ಟೆ ಮಂಜುನಾಥ, **"ವ್ಯಾಧ ಚರಿತೆ"** ಬೇಡ ಕುಲ ಮೂಲದ ಕಥನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ–ಹಂಪಿ, ಪ್ರಥಮ ಮುದ್ರಣ–2007.
- **ಚಿತ್ರದುರ್ಗ ಡಿಸ್ಟ್ರಿಕ್ಟ ಗ್ಯಾಸೇಟಿಯರ್,** 1967.
- ವೀರನಾಯಕ ಹೆಚ್. **ವಿ., "ರಾಷ್ಟ್ರ ಸೇವೆಯಲ್ಲಿ ನಾಯಕ ಜನಾಂಗ",** ವಾಲ್ಮೀಕಿ ಸಾಹಿತ್ಯ ಸಂಪದ ಪ್ರಕಾಶನ, ಹರ್ತಿಕೋಟೆ, ಚಿತ್ರದುರ್ಗ, 2008.
- ಚಿದಾನಂದ ಮೂರ್ತಿ ಎಂ., **"ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ",** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು–1966.
- ಸಂಪಾದಕ, ಡಾ. ಪೂಜಾರಹಳ್ಳಿ ವಿರೂಪಾಕ್ಷಿ, **"ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ".** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ಪ್ರಥಮ ಮುದ್ರಣ 2008.
- ದೇರ್ಲ ನರೇಂದ್ರ ರೈ, **"ಬೇಟೆ"** ಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ, ಪ್ರಕಾಶನ ಕನಸು, ಮಾಡಾವು ಅಂಚೆ, ಪುತ್ತೂರು ತಾಲ್ಲೂಕು ದ.ಕ. ಜಿಲ್ಲೆ ಪ್ರಥಮ ಮುದ್ರಣ 2007.
- ಸಂಪಾದಕರು ಡಾ. ಮೈತ್ರಿ ಕೆ. ಎಂ., ಡಾ. ಚಲುವರಾಜು., **"ಬುಡಕಟ್ಟು ಅಧ್ಯಯನ",** ಸಂಪುಟ–1 ಮತ್ತು 2, 2017.
- ಆರ್.ಎಸ್. ಶರ್ಮಾ, **"ಪ್ರಾಚೀನ ಭಾರತ",** ನವಕರ್ನಾಟಕ ಪ್ರಕಾಶನ, ಬೆಂಗಳೂರು–1997.

- ಸಂಪಾದಕ, ಮಾಧವ ಐತಾಳ್, **"ಋತ"** ಭಾರತದ ಆದಿವಾಸಿ ಕಥನ ಆಸ್ಮಿತೆ ಮತ್ತು ಅಸಮಾನತೆ, ಮೊದಲನೇ ಆವೃತ್ತಿ 2020.
- ಈಶ್ವರಪ್ಪ ಎಂ.ಜಿ., **"ಮ್ಯಾಸಬೇಡರು",** ಐ. ಬಿ. ಹೆಚ್. ಪ್ರಕಾಶನ, ಬೆಂಗಳೂರು, 1982
- ಕರಿಶೆಟ್ಟಿ ರುದ್ರಪ್ಪ, **"ಮ್ಯಾಸ ನಾಯಕರು: ಒಂದು ಜನಾಂಗಿಕ ಅಧ್ಯಯನ",** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1995.
- ಗುರುಲಿಂಗಯ್ಯ ಎಂ., **"ಬುಡಕಟ್ಟುಗಳು ಮತ್ತು ಅಭಿವೃದ್ಧಿ",** ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, 2005.
- ಚಿತ್ರಲಿಂಗಯ್ಯ ಎಂ.ವಿ., **"ಬೇಡ ನಾಯಕರ ಬೆಡಗುಗಳ ಪ್ರಾಚೀನತೆ",** ಇತಿಹಾಸ ಚಂದ್ರಿಕ ಸಂಪುಟ–02, ಇತಿಹಾಸ ಪರಿಷತ್ ತುಮಕೂರು, 1982.
- ಪಾರ್ವತಮ್ಮ.ಸಿ., **"ಆದಿವಾಸಿ ಸಮುದಾಯಗಳ ಅಭಿವೃದ್ಧಿ",** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.
- ಪ್ರಭಾಕರ್ ಎ.ಎಸ್., **"ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು",** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
- ಪ್ರಭಾಕರ್ ಎ.ಎಸ್., **"ಆದಿವಾಸಿ ಆಖ್ಯಾನ",** ಸಮುದಾಯಗಳ ಅಧ್ಯಯನಕ್ಕೊಂದು ಆಕರ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, 2006.
- ಬೋರಲಿಂಗಯ್ಯ ಹಿ.ಚಿ., **"ಬುಡಕಟ್ಟು ದೈವಾರಾಧನೆ",** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
- ಬೋರಲಿಂಗಯ್ಯ ಹಿ.ಚಿ. ಮತ್ತು ಪ್ರಭಾಕರ್ ಎ.ಎಸ್. (ಸಂ), **"ಬುಡಕಟ್ಟು ಅಧ್ಯಯನ–1",** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003.
- ಮಂಜುನಾಥ ಬೇವಿನಕಟ್ಟಿ ಮತ್ತು ತಾರಿಹಳ್ಳಿ ಹನುಮಂತಪ್ಪ (ಸಂ), **"ವಾಲ್ಮೀಕಿ ಸಂಪದ",** ಶ್ರೀ. ವಾಲ್ಮೀಕಿ ಮಹಾಸಂಸ್ಥಾನ, ರಾಜನಹಳ್ಳಿ, 2006.
- ಲಕ್ಕಪ್ಪಗೌಡ ಹೆಚ್.ಜೆ., **"ಕರ್ನಾಟಕ ಬುಡಕಟ್ಟುಗಳು", ಭಾಗ–1 ಮತ್ತು 2,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1998.
- ಲಕ್ಷ್ಮೀದೇವಿ ಎಸ್., **"ಬೇಟೆ ಪರಂಪರೆ, ಬೇಡರ ಸಂಸ್ಕೃತಿ",** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

- ವಿರೂಪಾಕ್ಷಿ ಪೂಜಾರಹಳ್ಳಿ, **"ವಾಲ್ಮೀಕಿ ಸಮುದಾಯದ ಪ್ರಾತಃ ಸ್ಮರಣೆಯರು",** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
- ಹನುಮಂತಪ್ಪ ತಾರಿಹಳ್ಳಿ (ಸಂ), **"ಕರ್ನಾಟಕದ ಬುಡಕಟ್ಟು ಸಮುದಾಯಗಳು",** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
- ಡಾ. ಶ್ರೀಧರ, ಎ., **"ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು",** ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ, 2006.
- ಡಾ. ಶ್ರೀಧರ, ಎ., **"ವಿಕೇಂದ್ರೀಕರಣ ಮತ್ತು ಗ್ರಾಮಪಂಚಾಯತ್",** ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ, 2002.
- ಡಾ. ಶ್ರೀಧರ, ಎ., **"ಯಾರಿಗೆ ಪ್ರಜಾಪ್ರಭುತ್ವ",** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

English books:

- Rudalph and Rudalph's, **"The modernity of Tradition"** Orient Langman, New Delhi, 1957.
- Kothari, Rajini. (ed) **"Caste in Indian Politics",** Orient Longman, New Delhi, 1970.
- D.F. Pocock, (Translator) **"Essays on the Caste System by Celestin Bougle,"** (European Understanding of India Series) Publisher Cambridge University Press, 1971.
- Hutton, J.H., **"caste in india",** Oxford university press, London, 1969.
- Gupta, Dipankar. **"Intetrogating Caste: understanding Hierarchy and Difference in Indian Society",** Penguin books india pvt.Ltd, new Delhi.
- E, Venkatesh. **"Social deprivation and Social mobilization: A case study of backward classes in Andra Pradesh",** 2003.
- Dr. M.N.Javaraiah, **"Ambedkar and We the people of the India",** 2006.
- Bipan Chandra, **"India Struggle for Independence",** 1989.
- K.L.Chanchreek. **Dr. Ambedkar, A Rebel Dalit Leader, vol-1,** 2006.
- Elwin verrier, **'The Religion of an indian tribe',** Oxferd university press, Bombay, 1955.
- Almond, G.A & Powell. **"Comparative Politics: A developmental approach",** Amerind Publishing Company: New Delhi, 1973.

- Verba, S. & Nie, N.H. **"Participation in America: Political, Democracy and Social Equality",** Harper Row: New York, 1972.
- Palmer, N.D. **"Elections and Political Development: the South Asian Experience",** Viks publisher and House: New Delhi, 1976.
- Bhushan, Vidya. & Sachdeva, D.K. **"An Introduction to Sociology",** Kitab Mahal Publishing: Allahabad, 2011.
- Ranjan Kothari, **'Politics in India',** Orient Longman, New Delhi, 1992.
- Weiner,Myron., **"Politics of Scarcity: Pressure and Politics Response in India",** Bombay, 1971.
- Somjee, A.H. **"Democracy and Political Change in Village India",** Case Study, New Delhi, 1971.
- Lakshminarayana, H.D., **"Democracy in Rural India: Problems and Process",** National Book Trust: New Delhi, 1980.
- Mane, Dayanand., **"Political Elite Among Scheduled Castes in Karnataka",** (Ph.d Thesis submitted to Karnataka University)
- Guru S.P., **"Theory of Political Sociology",** Concept publishing company Pvt Ltd: New Delhi, 2015.
- Damle, Y.B., **"Caste, Religion and Politics",** Asst by Jacob Aithara, Oxford and IBH: New Delhi, 1984.
- Mohanty P.K., **"Political Sociology",** Wisdom Press: New Delhi, 2018.
- Saraj Kumar,Jena., **"Political Sociology: A realistic approach",** Anmol Publications Pvt Ltd: New Delhi, 2002.
- Pye, Lucianw., **"Political Culture"** in David L Sills (ed) International Encylopedia of Social Sciences, Vol XII, the Macnillan company and the Free Press: Glenco, 1968.
- Muklsopadhyaya, A.K., **"Political Sociology",** K.P Bagdri and Company: Calcutta, 1977.
- Almond, G.A & Verba, S., **"The Civic Culture; Political Attitudes and Democracy in Five Nations",** Princetion University Press, Princetion, 1963.
- Eisenstadt, S.N. & others., **"Political Clientelism: Patronage and Development"** Sage Publication: New Delhi. 1981.
- Holt, Robert T, Turner, John. E., **"Political Basis of Economic Development: Adapatation: Vakils",** effer and Simons: Bombay, 1966.
- Kaur, Manvinder. **"Challenges to Secularism in India".**

- Beer, Sanuel Hutchinson., **"Modern Political Development",** Random House, New York, 1974.
- Hirsch, Herbert, **"Poverty and Politicization; Political Socialization in an American Sub culture"** Free pr., New York, 1974.
- Pasrich, Seema**, "Caste Based Reserration in India",** Deep & Deep : New Delhi, 2006.
- Ghose, Shankar. **"Socialism, Democracy and Nationalism in India"** Allied: Bombay, 1973.
- Ilyin, Vasily. **"Primary Party organization the foundation of the party: Political education, the Geinding force of Society"** Supervision and Assistance: Novasti, Moscow, 1978.
- Ray, Amal. & S.K, Chatterjecc & Vanita, Venkatasubbiah. **"Political Development and Constitutional Change"** Vikas, New Delhi, 1982.
- Jangan, R.T. & Patil, S.H. & Patagundi, S.S. **"Political Analysis"** Ocford & IBH Publishing Co Ltd: New Delhi.
- Jain, Meenakshi. **"Congress Party (1967-1977) Role of Caste in Indian Politics",** Vikas, New Delhi, 1991.
- Mehra, Ajay K. & Others. **"Political Parties and Party Systems",** Sage Publication, New Delhi, 2003.
- Basu, Aparna. **"Growth of Education and Political Development in India",** New Delhi, 1974.
- Janes, Manor. **"Political Change in an Indian State",** Manohar Book Services, New Delhi, 1977.
- Hobhouse, L.T. **"Elements of Social Justice",** Allen G: Landon, 1921.
- Johari, J.C. **"Reflection on Indian Politics Critical Commentary on Development and Decay of the Indian Political System",** S chand Company: New Delhi, 1974.
- Bijion Gopal Banerjee, Dr. A.K. Sinha, Roop Narain Vasishat, **"Panchayati Raj and Empowerment of Women",** Northern book Center, New Delhi, 2004.
- S. Rajneesh S.L. Goel, **"Panchayati Raj in India"** (2nd Rev. and Enlarged Edn.), Deep and Deep Publications, New Delhi, 2009.
- Srivastava Rashmi, **"Empowermennt of Women Through Political Participation with specieal reference to Madya Pradesh",** Anmol Publications New Delhi.2000.
- Ram Ahuja, **"Society in India",** Rawath Pub, Jaipur, 1999.

- Hemamalini, **"Tribal Education Provision Achivement and Challenges",**
- Vidyarthi L.P, **"Tripal Development and its Administration",** Concept publishing company, New Delhi: 1981.
- Raut, P.C.A, **"Mutidimensional Approach for Analysis of Trends, perspectives and educational programmes in Tribal education and formation of Action strategies",** Edu. Utkal University, 1985.
- Mishra R.P, **"Local Level Planning and Development",** Sterling Publishers, New Delhi, 1983.
- Singh K.S., (Ed), **"Tribal Movement in India",** Manohar Publications, New Delhi, 1981.
- Bharadwaj, **"Problems of Scheduled Castes and Scheduled Tribes in India",** Light and Life publication, New Delhi, 1979.
- Lester W. Milbrath, M.L. Goel, **"Political Participation: How and Why Do People Get Involved in Politics,"** Rand Mcnally, Chicago, 1977.
- Srinivas M. N., **"Caste in Modern India and Other Eassays",** Media Publishers, Bombay, 1962.
- Srivastava Rashmi, **"Empowermennt of Women Through Political Participation with specieal reference to Madya Pradesh",** Anmol Publications,New Delhi, 2000.
- Singh, Parmanand, **"Equality, Reservation and Discrimination in India: Constitutional study of Scheduled Castes, Scheduled Tribes and other Backward Classes foreword by V R Krishna Iyer",** Deep & Deep, New Delhi, 1982.
- Grover, Verinder, (Ed), **"Party System and Political Parties in India",** Deep and Deep pub, New Delhi, 1990.
- Grover, Verinder, (Ed**), "Political Influence on Violence and pressure groups",** Deep & Deep, New Delhi, 1990.
- Pandey, Shashi Ranjan, 1953, **"Community Action for Social Justice Grassroots organizations in India",** Sage, New Delhi, 1991.
- Verma, GP, **"Caste Reservation in India: Law and the Constitution",** Chugh, Allahabad, 1980.
- Bhatt, anil., **"Caste Class, And Politics; An Empirical Profil. Of Social Stratification in Modern India",** Manohar Publication Books Service, New Delhi, 1975.

- Friedgut, H. Theodore., **"Political Participation in USSR",** Princeton University Press, New Jersey, UK, 1979.
- Geal, M.L., **"Political Participation in A Developing Society",** Indian Publishing House, Bombay, 1974.
- Pye, Lucian W., **"Political Modernization And Research on The Process of Political Socialization",** Item No. 13, 1959.
- Bakshi.S.R, **"Empowerment-Politics of Reservation",** Jaipur, Books Enclave Jai Bhavan NEI, 2002.
- ಸಿಂಗ್, ಬಿ.ಪಿ. **"ಎ ಡಿಕ್ಷನರಿ ಆಫ್ ಮಾಡ್ರನ್ ಪಾಲಿಟಿಕ್ಸ್ ಆಂಡ್ ಪೊಲಿಟಿಕಲ್ ಸೋಷಿಯಾಲಜಿ",** ಮಿತ್ತಲ್ ಪಬ್ಲಿಕೇಷನ್ಸ್, ನವದೆಹಲಿ, 1987.
- ಎಚ್. ಮ್ಯಾಕ್‌ಕ್ಲೊಸ್ಕೆ. **"ಪೋಲಿಟಿಕಲ್ ಪಾರ್ಟಿಸಿಪೇಷನ್",** ಇಂಟರ್ ನ್ಯಾಷನಲ್ ಆಂಡ್ ಸೈಕ್ಲೊಪಿಡಿಯಾ ಆಫ್ ಸೋಶಿಯಲ್ ಸೈನ್ಸಸ್, ಕಾಲಿಯಲ್ ಮ್ಯಾಕ್‌ಮಿಲನ್ ಪಬ್ಲಿಕೇಷನ್, ನ್ಯೂಯಾರ್ಕ್, 1968.
- ಮಾರ್ಕ್ ಆಂಡ್ ಏಂಗೆಲ್ಸ್. **"ಸೆಲೆಕ್ಟೆಡ್ ವರ್ಕ್ಸ್ ಮಾಸ್ಕೊ"** ಪ್ರೋಗೆಸ್ ಪಬ್ಲಿಕೇಷನ್ಸ್, 1976.
- ಗೋಖಲೆ, ಬಿ.ಕೆ., **"ಪೊಲಿಟಿಕಲ್ ಸೈನ್ಸ್ ಥಿಯರಿ ಆಂಡ್ ಗೌರ್ನಮೆಂಟಲ್ ಮೆಷನರಿ",** ಎ.ಆರ್. ಶೇಠಿ ಆಂಡ್ ಕಂ ಪಬ್ಲಿಕೇಷನ್, ಬಾಂಬೆ, 1970.
- ಕಪೂರ್, ಎ.ಸಿ., **"ದ ಇಂಡಿಯನ್ ಪೊಲಿಟಿಕಲ್ ಸಿಸ್ಟಮ್. ಗೌರ್ನಮೆಂಟ್ ಆಫ್ ದಿ ಇಂಡಿಯನ್ ರಿಪಬ್ಲಿಕ್",** ಪಬ್ಲಿಕೇಶನ್ ಎಸ್. ಚಾಂದ್ ಅಂಡ್ ಕಂಪನಿ ಲಿ, ನ್ಯೂಡೆಲ್ಲಿ, 1956.
- ಹರಿಹರ ದಾಸ್., **"ಇಂಡಿಯಾ ಡೆಮಾಕ್ರಟಿಕ್ ಗೌರ್ನಮೆಂಟ್ ಅಂಡ್ ಪಾಲಿಟಿಕ್ಸ್",** ಹಿಮಾಲಯ ಪಬ್ಲಿಷಿಂಗ್ ಹೌಸ್, ಡೆಲ್ಲಿ, 1991.
- ದುರ್ಗಾದಾಸ್ ಬಸು., **"ಇಂಟ್ರುಡಕ್ಷನ್ ಟು ದ ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ",** ಲೆಕ್ಸಿಸ್ ನೆಕ್ಸಿಸ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, 21ನೇ ಆವೃತ್ತಿ, 2013.
- ಹನ್ಸ್‌ರಾಜ್, **"ಇಂಡಿಯನ್ ಗೌರ್ನಮೆಂಟ್ ಅಂಡ್ ಪಾಲಿಟಿಕ್ಸ್",** ಸುರ್ಜಿತ್ ಪಬ್ಲಿಕೇಷನ್ಸ್, ಡೆಲ್ಲಿ, 1999.
- ವೆಂಕಟರಾವ್, ವಿ., ಮತ್ತು ಹಜಾರಿಕ., **"ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ಇಂಡಿಯಾ",** ಎಸ್. ಚಾಂದ್ ಮತ್ತು ಕಂಪನಿ ಲಿ, ನ್ಯೂಡೆಲ್ಲಿ, 1980.
- ಮಹೇಶ್ವರಿ, ಎಸ್.ಆರ್., **"ಲೋಕಲ್ ಗೌರ್ನಮೆಂಟ್ ಇನ್ ಇಂಡಿಯಾ",** ಲಕ್ಷ್ಮಿ ನರೈನ್ ಅಗರ್‌ವಾಲ್, ಪಬ್ಲಿಕೇಷನ್ಸ್ ಆಗ್ರಾ, 2014.
- ಸೆಲ್ವಿನಾಥನ್, ಎಸ್., **"ಸೋಷಿಯಲ್ ಸ್ಟೇಟಸ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್",** ಆಶಿಷ್ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, 1999.
- ಲಕ್ಷ್ಮೀನಾರಾಯಣ ಅಗರ್‌ವಾಲ್., **"ಇಂಡಿಯನ್ ಅಡ್ಮಿನಿಸ್ಟ್ರೇಷನ್",** ಅವಸ್ತಿ ಅಂಡ್ ಅವಸ್ತಿ ಪಬ್ಲಿಕೇಷನ್ಸ್, ಆಗ್ರಾ, 1999.

ಲೇಖನಗಳು:

- ಆರ್.ಇಂದಿರಾ, **'ಸಮಕಾಲೀನ ರಾಜಕಾರಣ ಮತ್ತು ಜಾತಿ ಸಮೀಕರಣ'** ಪ್ರಜಾವಾಣಿ, 3ನೇ ಜುಲೈ 2012.
- Gaidhare, Anjali. **"Analyzing the Contemporary Political Culture of India".** www.jetir.org.ISSN – 23A9-8162, Januvary, 2022 Volume 9, issues 1
- Hebsur, R.K., **"Modernisation, Mobilzatiom and Rural Development",** The Indian Journal of Social work, Vol XXXIX.
- V Hanagodimath Shiddalingaswami, **"CRITICAL ANALYSIS OF DR. D M NANJUNDAPPA COMMITTEE REPORT AND ITS IMPLEMENTATION",** Centre for Multi-disciplinary Development Research (CMDR) dharwad, August – 2014.

ವರದಿಗಳು:

- Indian Census Report-2011
- Karnataka Census Report-2011
- Karnataka Maharshi Valmiki Schedule Tribes Development Corporation Limited District wise Schedule Tribes Sub caste wise Population as per 2011 Population Census.
- The Scheduled caste and Scheduled Tribes Order (amendment) Act, 2002, Dated.8.1.2003.
- Primary Census Abstract Data Highlights Karnataka 2011.
- Annual report, "Ministry of Tripal affairs", New Delhi, 2015-16.
- Ministry of Tribal affairs report-2017.
- India Population census report-2014.
- Tribal Distribution report ministry of Tribal affairs report-2017.
- Stastistical report Karnataka data highlights-2011.
- Government of Karnataka, Karnataka First Backward Classes Commission Report, Chairman-L.G. Havanur, vol 1-4 Bangalore, Government Press, 1975.
- Government of Karnataka, Second Backward Class Commission Report, Chairmen- T. Venkataswamy, vol 1-3, Bangalore, Government Press, 1986.
- "ರಿಪೋರ್ಟ್ ಆಫ್ ಕಮಿಟಿ ಅನ್ ಪಂಚಾಯತ್ ರಾಜ್ ಇನ್‌ಸ್ಟಿಟ್ಯೂಷನ್ಸ್" ಮಿನಿಸ್ಟ್ರಿ ಆಫ್ ಅಗ್ರಿಕಲ್ಚರ್ ಅಂಡ್ ಇರಿಗೇಷನ್, ಗೌರ್ನಮೆಂಟ್ ಆಫ್ ಇಂಡಿಯಾ, 1978.

- ಗೌರ್ನಮೆಂಟ್ ಆಫ್ ಕರ್ನಾಟಕ., "ಕರ್ನಾಟಕ ಪಂಚಾಯತಿರಾಜ್ ಮ್ಯಾನ್ಯುಯಲ್", ಅಬ್ದುಲ್ ನಜೀರ್ ಸಾಬ್ ಸೇಟ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್, ಮೈಸೂರು, 2000.
- **ಗುಲಬರ್ಗಾ ಜಿಲ್ಲೆಯ ಅಂಕಿ–ಅಂಶಗಳ ಪಕ್ಷಿನೋಟ 2016–17**.
- **ಯಾದಗಿರಿ ಜಿಲ್ಲೆಯ ಅಂಕಿ ಅಂಶಗಳ ನೋಟ 2014–15**.
- ಕಲಬುರಗಿ ಜಿಲ್ಲೆಯ ಅಂಕಿ–ಅಂಶಗಳ ನೋಟ 2011–12, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
- ಯಾದಗಿರಿ ಜಿಲ್ಲೆಯ ಅಂಕಿ–ಅಂಶಗಳ ನೋಟ, 2001–12, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಬೆಂಗಳೂರು.

ಸ್ಮರಣ ಸಂಚಿಕೆ/ಮಾಸ ಪತ್ರಿಕೆಗಳು:

- ವಾಲ್ಮೀಕಿ ಸಂದೇಶ, ವಾಲ್ಮೀಕಿ ಬಂಧು, ವಾಲ್ಮೀಕಿ ಸ್ಮರಣ ಸಂಚಿಕೆ, ಏಕಲವ್ಯ, ವಾಲ್ಮೀಕಿ ಕರ್ನಾಟಕ, ವಾಲ್ಮೀಕಿ ವಾಣಿ, ವಾಲ್ಮೀಕಿ ಜ್ಯೋತಿ, ವಾಲ್ಮೀಕಿ ಕಿರಣ.

ದಿನಪತ್ರಿಕೆಗಳು:

- ಪ್ರಜಾವಾಣಿ, ವಿಜಯ ಕರ್ನಾಟಕ, ವಾರ್ತಾ ಭಾರತಿ, ಉದಯ ವಾಣಿ, ವಿಜಯ ವಾಣಿ, ಕನ್ನಡ ಪ್ರಭಾ,
- The Hindu, Deccan Herald, The Times of India, Indian Express.

ವೆಬ್‌ಸೈಟ್‌ಗಳು:

- https://kmvstdcl.karnataka.gov.in/storage/pdf-files/General%20Information/stsubcastepopn20012011-4.pdf
- https://en.wikipedia.org/wiki/Government_of_Karnataka#:~:text=Karnataka%20State%20has%20been%20divided,gram%20panchayats%20for%20administrative%20purposes.